بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّىْ عَلٰى رَسُوْلِهِ الْكَرِيْمِ    وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

# ಕನ್ನಡ ಬದರ್ ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 17

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

29 ಏಪ್ರಿಲ್ 2021, 29 ಶಹಾದತ್ 1400 ತಬ್‌ಲೀಗ್ ಹಿಜರಿ ಶಮ್‌ಸಿ,
16 ರಮಝಾನ್ 1442 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

اَلْيَوْمَ اَكْمَلْتُ لَكُمْ دِيْنَكُمْ
وَاَتْمَمْتُ عَلَيْكُمْ نِعْمَتِيْ
وَرَضِيْتُ لَكُمُ الْاِسْلَامَ دِيْنًا

(ಅಲ್‌ಮಾಇದ: 04)

ಅಂದರೆ: ಈ ದಿನ ನಿಮ್ಮ ಧರ್ಮವನ್ನು ನಿಮಗೆ ನಾನು ಪರಿಪೂರ್ಣಗೊಳಿಸಿರುವೆನು; ನನ್ನ ಅನುಗ್ರಹವನ್ನು ನಿಮಗೆ ಸಂಪೂರ್ಣವಾಗಿ ದಯಪಾಲಿಸಿರುವೆನು ಹಾಗೂ ಇಸ್ಲಾಮನ್ನು ನಿಮಗೆ ಧರ್ಮವಾಗಿ ತೃಪ್ತಿಪಟ್ಟಿರುವೆನು.

## ಪ್ರವಾದಿ ಮುಹಮ್ಮದ್[(ಸ)]ರವರ ಉಪದೇಶ

### ಹಝ್ರತ್ ರಸೂಲುಲ್ಲಾಹ್(ಸ) ರವರ ಮೂರು ಉಪದೇಶಗಳು

(1178) ಹಝ್ರತ್ ಅಬೂ ಹುರೈರ(ರ) ವರದಿಯಿದೆ. ನನ್ನ ಆತ್ಮೀಯ ಮಿತ್ರರು (ಹಝ್ರತ್ ರಸೂಲುಲ್ಲಾಹ್(ಸ) ರವರು ನನಗೆ ಮೂರು ಮಾತುಗಳ ಉಪದೇಶವನ್ನು ನೀಡಿದ್ದಾರೆ. ಅದನ್ನು ನಾನು ಮರಣ ಹೊಂದುವವರೆಗೂ ಬಿಡಲಾರೆ. ಪ್ರತಿ ತಿಂಗಳಿನಲ್ಲಿ ಮೂರು ಉಪವಾಸಗಳನ್ನು (ವ್ರತಗಳನ್ನು) ಹಿಡಿಯುವುದು ಮತ್ತು ಚೌಶ್ತ್ ನಮಾಝ್ ನಿರ್ವಹಿಸುವುದು ಮತ್ತು ವಿತ್ರ್ ನಮಾಝ್ ನಿರ್ವಹಿಸಿ ಮಲಗುವುದು.

### ತನ್ನ ಮನೆಗಳನ್ನು ಸ್ಮಶಾನವನ್ನಾಗಿ ಮಾಡಬೇಡಿ.

(1187) ಹಝ್ರತ್ ಅಬ್ದುಲ್ ಬಿನ್ ಉಮರ್[(ರ)] ವರದಿ ಮಾಡುತ್ತಾರೆ. ರಸೂಲುಲ್ಲಾಹ್[(ಸ)] ನುಡಿದರು. ತಮ್ಮ ಮನೆಗಳಲ್ಲೂ ಕೆಲವೊಂದು ನಮಾಝ್‌ಗಳನ್ನು ನಿರ್ವಹಿಸಿರಿ. ಅವುಗಳನ್ನು ಸ್ಮಶಾನವನ್ನಾಗಿ ಮಾಡಬೇಡಿರಿ.

### ಮಸ್ಜಿದ್ ಹರಾಮ್ ಮತ್ತು ಮಸ್ಜಿದ್ ನಬ್ವಿಯ ಪಾವಿತ್ರತೆ

(1190) ಹಝ್ರತ್ ಅಬುಹುರೈರ(ರ) ರಿಂದ ವರದಿಯಾಗಿದೆ. ನಬಿ(ಸ) ನುಡಿದರು. ನನ್ನ ಈ ಮಸೀದಿಯಲ್ಲಿ (ಅಂದರೆ ಮಸ್ಜಿದ್ ನಬ್ವಿ) ನಿರ್ವಹಿಸಿದ ಒಂದು ನಮಾಝ್ ಇತರ ಮಸೀದಿಗಳಲ್ಲಿ ಮಾಡಿದ ಸಾವಿರಾರು ನಮಾಝ್‌ಗಳಿಗಿಂತಲೂ ಉತ್ತಮವಾಗಿದೆ. ಮಸ್ಜಿದ್ ಹರಾಮ್ ಹೊರತುಪಡಿಸಿ.

**(ಸಹೀಹ್ ಬುಖಾರಿ, ಸಂಪುಟ–2, ಮುದ್ರಣ ಖಾದಿಯಾನ್ 2006)**

**ನನ್ನ ದೇವವಾಣಿಗಳಿಂದ ಸಮುದಾಯಕ್ಕೆ ಲಾಭವಾಗುತ್ತದೆ ಮತ್ತು ಇಸ್ಲಾಮ್ ಧರ್ಮಕ್ಕೆ ಲಾಭವಾಗುತ್ತದೆ.**

**ಇದುವೇ ಬಹುದೊಡ್ಡ ಮಾನದಂಡವಾಗಿದೆ, ಅದು ನಾನು ಅಲ್ಲಾಹನಿಂದ ನಿಯುಕ್ತಗೊಂಡಿದ್ದೇನೆ ಎಂಬುದಕ್ಕೆ ಸಾಕ್ಷ್ಯವಾಗಿದೆ.**

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

### ದೇವವಾಣಿಯ ಗುಣಮಟ್ಟ

ವಿಷಾದದ ಸಂಗತಿ ಎಂದರೆ ಈ ಜನರು ಸಣ್ಣ ಸಣ್ಣ ಸಾಧಾರಣ ದೇವವಾಣಿಯ ತುಣುಕುಗಳನ್ನು ಮತ್ತು ಸ್ವಪ್ನಗಳನ್ನು ಆಧಾರವಾಗಿಟ್ಟು ಗರ್ವಪಡುತ್ತಾರೆ. ಯಾವುದೇ ದೇವವಾಣಿ ದೇವನಿಂದ ಇಳಿದಿದೆ ಮತ್ತು ಶೈತಾನನ ಹಸ್ತಕ್ಷೇಪದಿಂದ ಮುಕ್ತವಾಗಿರುವುದರ ಸಾಕ್ಷ ತಿಳಿದಿರುವುದಿಲ್ಲ. ಅದರ ಗುಣಮಟ್ಟವೆಂದರೆ (ಆ ದೇವವಾಣಿ) ಜೊತೆಯಲ್ಲಿ ದೇವನ ಪುಷ್ಟಿ ದೊರೆಯಬೇಕು, ಅಗೋಚರ ಜ್ಞಾನದ ಮೇಲೆ ಪ್ರಭುತ್ವ ಮತ್ತು ಮುನ್ನೆಚ್ಚರಿಕೆಯ ಭವಿಷ್ಯವಾಣಿ ಹೊಂದಬೇಕಾಗಿದೆ. ಇಲ್ಲದಿದ್ದರೆ ಅವೆಲ್ಲ ವ್ಯರ್ಥ ಮಾತುಗಳಾಗಿರುತ್ತವೆ. ಅದು ಜನರಿಗೆ ಯಾವ ಪ್ರಯೋಜನವು ದೊರಕಿಸಿಕೊಡುವುದಿಲ್ಲ. ಯಾವನೋ ಒಬ್ಬ ವ್ಯಕ್ತಿ ಸಮಾರಂಭದ ವೇಳೆ ದೂರ ಕುಳಿತು ರಾಜನೊಬ್ಬನ ಮಾತುಗಳನ್ನು ಆಲಿಸಿಕೊಂಡು ಬಂದು ನಾನು ರಾಜ ಮಾತುಗಳನ್ನು ಆಲಿಸಿದ್ದೇನೆ ಎಂದು ಹೇಳಿದರೆ ಅದರಿಂದ ಇತರರಿಗೆ ಏನು ಪ್ರಯೋಜನ ದೊರಕಬಹುದು? ರಾಜನ ಸಹವಾಸ ಹೊಂದಿದವನ ಮಾತುಗಳ ದೃಷ್ಟಾಂತವೇ ಅದೇ ರೀತಿಯದ್ದಾಗಿದ್ದರೆ. ಅದನ್ನು ನೋಡಿದ ಲೋಕವೇ ಸಾಕ್ಷ್ಯವಹಿಸುತ್ತದೆ, ನಿಜವಾಗಿಯೂ ಅದೊಂದು ರಾಜನ ವೈಭವಪೂರಿತ ಮಾತುಗಳಾಗಿವೆ ಎಂದು. ನನ್ನ ದೇವವಾಣಿಗಳು ಸಹ ಅಂತಹುದೇ ಸಾಧಾರಣ ಮತ್ತು ಅನರ್ಥ ತುಣುಕುಗಳಾಗಿರುತ್ತಿದ್ದರೆ ಅದರಲ್ಲಿ ಜ್ಞಾನ ಮತ್ತು ಪ್ರಭುತ್ವ ಹೊಂದಿದ ಭವಿಷ್ಯವಾಣಿಗಳು ಇರದಿದ್ದರೆ ಅವು ಕಡೆಗಣಿಸಲ್ಪಡುವಂತಹದ್ದಾಗಿರುತ್ತಿದ್ದವು. ನನ್ನ ಭವಿಷ್ಯವಾಣಿಗಳಿಂದ ಸಮುದಾಯಕ್ಕೆ ಲಾಭವಾಗುತ್ತದೆ ಮತ್ತು ಇಸ್ಲಾಮ್ ಧರ್ಮಕ್ಕೆ ಲಾಭವಾಗುತ್ತಿದೆ ಎಂದರೆ ಅದುವೇ ಬಹುದೊಡ್ಡ ಮಾನದಂಡವಾಗಿದೆ, ಅದು ನಾನು ಅಲ್ಲಾಹನಿಂದ ನಿಯುಕ್ತಗೊಂಡಿದ್ದೇನೆ ಎಂಬುದಕ್ಕೆ ಸಾಕ್ಷ್ಯವಾಗಿದೆ. ನನ್ನ ಜೊತೆಯಲ್ಲಿ ಅಲ್ಲಾಹನ ವರ್ತನೆ ಮತ್ತು ಕಾರ್ಯಗಳು ಹಾಗೂ ನನ್ನ ಪರವಾಗಿ ಅವನ ದೃಷ್ಟಾಂತಗಳು ಆಶ್ಚರ್ಯಜನಕವಾಗಿವೆ. ಕೆಲವು ನನ್ನ ವೈಯಕ್ತಿಕ ಸಂಬಂಧಕ್ಕೆ ಸಂಬಂಧಿಸಿದಾಗಿದೆ. ಕೆಲವು ನನ್ನ ಸಂತಾನದ ಕುರಿತಾಗಿದೆ. ಮತ್ತು ಕೆಲವು ನನ್ನ ಕುಟುಂಬಕ್ಕೆ ಸಂಬಂಧಿಸಿದ್ದಾಗಿವೆ. ಮತ್ತು ಕೆಲವು ನನ್ನ ಮಿತ್ರರುಗಳಿಗೆ ಸಂಬಂಧಿಸಿದ್ದಾಗಿದೆ. ಇನ್ನು ಕೆಲವು ವಿರೋಧಿಗಳಿಗೆ ಸಂಬಂಧಿಸಿದ್ದಾಗಿವೆ ಮತ್ತು ಕೆಲವು ಸಾರ್ವಜನಿಕರಿಗೆ ಸಂಬಂಧಿಸಿದ್ದಾಗಿವೆ."

**(ಮಲ್ಫೂಝಾತ್ ಸಂಪುಟ–1, ಪುಟ –281, ಮುದ್ರಣ ಖಾದಿಯಾನ್ 2018)**

**ಇಸ್ಲಾಮ್ ವೈಯಕ್ತಿಕ ವಿಜಯ ಒಪ್ಪುವುದಿಲ್ಲ. ನಾವು ಎಲ್ಲ ರೀತಿಯಲ್ಲೂ ಇಡೀ ಸಮುದಾಯದ ವಿಜಯ ಬಯಸಲಿಲ್ಲವಾದರೆ ಅದು ನಮ್ಮ ವಿಜಯವಲ್ಲ.**

**ಸಮುದಾಯವನ್ನು ಕಡೆಗಣಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಕಡೆಗಣಿಸುವುದರಿಂದ ಪಾಪಕಾರ್ಯಗಳು ಹರಡುತ್ತವೆ. ಎಲ್ಲರೂ ಸರಿದಾರಿಗೆ ಬರುವುದೇ ವಿಜಯವಾಗಿದೆ.**

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರ: ಹೂದ್ ವಚನ 113 **ಫಸ್ತಖಿಮ್ ಕಮಾ ಉಮಿರ್‌ತ ವಮನ್ ತಾಬ ಮಅಕ ವಲಾ ತತ್‌ಗೌ. ಇನ್ನಹೂ ಬಿಮಾ ತಅಮಲೂನ ಬಸೀರ್** ನ ವ್ಯಾಖ್ಯಾನ ಮಾಡುತ್ತ ಹೇಳಿದರು:

ಈ ವಚನದಲ್ಲಿ ಸಂತಾನದ ಸುಧಾರಣೆ ಮತ್ತು ಅವರ ತರಬೇತಿ ನಿಮಿತ್ತ ಹೆಚ್ಚು ಒತ್ತು ಕೊಡಲಾಗಿದೆ. ಆದರೆ ವಿಷಾದದ ಸಂಗತಿ ಏನೆಂದರೆ ಈ ಕಡೆ ಜನರು ಹೆಚ್ಚು ಗಮನವಹಿಸುತ್ತಿಲ್ಲ. ಬೈಹಖಿಯ ಶೊಬುಲ್–ಈಮಾನ್‌ನಲ್ಲಿ ಅಬೂ ಅಲಿ ಸರಿ ಇಂದ ವರದಿ ಮಾಡುತ್ತಾರೆ. ಅಬು ಅಲಿ ಹೇಳಿದರು: ನಾನು ನಬಿ ಕರೀಂ(ಸ) ರವರನ್ನು ಸ್ವಪ್ನದಲ್ಲಿ ಕಂಡು ಹೇಳಿದೆ. ಓ ನಬಿವರ್ಯರೇ ಜನರು ಹೇಳುತ್ತಾರೆ. ನನಗೆ ಸೂರ: ಹೂದ್ ವೃದ್ಧನನ್ನಾಗಿ ಮಾಡಿದೆ ಎಂದು. ಆಗ ಅವರು ಹೇಳಿದರು. ಹೌದು. ನಾನು ಕೇಳಿದೆ. ಯಾವ ವಿಷಯ ನಿಮ್ಮನ್ನು ವೃದ್ಧನನ್ನಾಗಿ ಮಾಡಿದೆ.

*(ಪುಟ ಸಂಖ್ಯೆ 08 ರಲ್ಲಿ ಮುಂದುವರಿಸಲಾಗಿದೆ)*

### ಸೂಚನೆ

ಓದುಗರಲ್ಲಿ ವಿನಂತಿಸಿಕೊಳ್ಳುವುದೇನಂದರೆ ಈ ಪತ್ರಿಕೆಯ ಬಗ್ಗೆ ತಮ್ಮ ಅಭಿಪ್ರಾಯಗಳು ಹಾಗೂ ಸಲಹೆ ಸೂಚನೆಗಳಿದ್ದಲ್ಲಿ ನಮ್ಮನ್ನು ನೇರವಾಗಿ ಸಂಪರ್ಕಿಸಿ.


email: www.kannadabadar@gmail.com
Mob or whatsapp: 8050330779

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✿ شَرَّ السُّمُوْمِ عَدَاوَۃُ الصُّلَحَاءِ

## ನೂರುಲ್–ಹಖ್ ಗ್ರಂಥದ ಪ್ರತಿರೂಪ ಬರೆದರೆ ಪಾದರಿ ಇಮಾಮುದ್ದೀನ್‌ಗೆ ಐದು ಸಾವಿರ ರೂಪಾಯಿಗಳ ಬಹುಮಾನ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ರವರ ಈ ಪಂಥಹ್ವಾನದ ಒಂದಿಷ್ಟು ವಿವರ. ಅದರ ಹಿನ್ನಲೆ ಈ ಮುಂಚೆಯೇ ನಾವು ವಿವರಿಸಿದ್ದೆವು. ಪಾದರಿ ಇಮಾಮುದ್ದೀನ್ ತನ್ನ ಗ್ರಂಥ "ತೋಝಿನುಲ್ ಅಖ್ವಾಲ್" ನಲ್ಲಿ ಪವಿತ್ರ ಖುರ್‌ಆನ್‌ನ ವಾಕ್‌ಚಾತುರ್ಯದ ಮೇಲೆ ಆರೋಪಗಳನ್ನು ಮಾಡಿದ್ದಾನೆ. ಅದರ ಉತ್ತರವಾಗಿ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ವಕ್‌ಚಾತುರ್ಯ ಭರಿತ ಅರಬಿಯಲ್ಲಿ "ನೂರುಲ್ ಹಖ್" ಎಂಬ ಗ್ರಂಥ ರಚಿಸಿದರು. ಇದರಲ್ಲಿ ಅವರು ಇಮಾಮುದ್ದೀನ್ ಅವರ ಆರೋಪಗಳ ಉತ್ತರಗಳನ್ನು ನೀಡಿದ್ದಾರೆ. ಅಲ್ಲದೇ ಪಂಥಹ್ವಾನ ನೀಡಿದರು. ಅವರು ಅರಬಿ ಬಲ್ಲವರಾದರೆ ಇಂತಹದೇ ಗ್ರಂಥ ಅರಬಿಯಲ್ಲಿ ಬರೆದು ತೋರಿಸಿದರೆ ಅವರಿಗೆ ನಾನು ಐದು ಸಾವಿರ ರೂಪಾಯಿಗಳ ಬಹುಮಾನ ನೀಡುವೆನು. ಈ ಕೆಳಗೆ ಈ ಪಂಥಹ್ವಾನದ ವಿವರ ನೀಡುತ್ತಿದ್ದೇವೆ.

### ಇಮಾಮುದ್ದೀನ್‌ರವರಿಗೆ ಅರಬಿಯಲ್ಲಿ ಪ್ರತಿಸ್ಪರ್ಧಿಯಾಗಿ ಬರೆಯಲು ಹಝ್ರತ್ ಮಸೀಹ್ ಮೌಊದ್(ಅ) ರವರ ವೈಭವಪೂರಿತ ಆಗ್ರಹ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನೀನು ತನ್ನನ್ನು ಏನಾದರೂ ಘನವಸ್ತು ಎಂದು ಭಾವಿಸಿಕೊಂಡರೆ ಮತ್ತು ನೀನು ಸಹ ಒಬ್ಬ ದೊಡ್ಡ ಪಂಡಿತ ಎಂದು ಎಂದುಕೊಂಡರೆ ಎಚ್ಚರವಿರಲಿ. ನಾನು ನಿನ್ನ ಒಡಲಿನಿಂದ ಆಗಿ ಹೊರ ತರಲು ನಿಂತಿದ್ದೇನೆ ಮತ್ತು ನಿನ್ನ ಖಡ್ಗದ ಚಮತ್ಕಾರ ಕಾಣಲು ಎದ್ದು ಬಂದಿದ್ದೇನೆ. ಅಜಾಲ ಎಂಬ ಪತ್ರಿಕೆ ಅರಬಿಯಲ್ಲಿ ಅದೇ ಕಾರಣಕ್ಕೆ ಬರೆದಿದ್ದೇನೆ. ಈ ಪತ್ರಿಕೆಯು ಅಮೂಲ್ಯ ಮತ್ತು ಪ್ರಕಾಶಮಯ ವಿವರಗಳಿಂದ ತುಂಬಿದೆ. ಅದು ವಜ್ರಗಳ ಹಾಗೆ ಮತ್ತು ಸಾಹಿತ್ಯದ ಉತ್ತಮ ಬರಹವನ್ನು ಒಳಗೊಂಡಿದೆ. ನಾನು ಅದನ್ನು ಉತ್ತಮ ಉದಾಹರಣೆಗಳೊಂದಿಗೆ ಮತ್ತು ತನ್ನ ಸಾಕ್ಷ್ಯಗಳು ಮುತ್ತಿನಂತೆ ಹೊಳೆಯುತ್ತಿದೆ. ಅದರಲ್ಲಿ ಅರಬಿಯ ನುಡಿಗಟ್ಟುಗಳಿವೆ. ಒಳ್ಳೆಯ ಸಾಹಿತ್ಯದಿಂದ ಕೂಡಿದೆ. ಅದೇ ರೀತಿ ಆಧುನಿಕ ರೀತಿಯ ಕವನ ಸಾಲುಗಳು, ಸುಂದರ ಖಸೀದಗಳು ಅದರಲ್ಲಿವೆ. ಆ ಗ್ರಂಥದಲ್ಲಿ ಯಾವ ಟೀಕೆ ಟಿಪ್ಪಣಿಯೂ ಇಲ್ಲ. ಬದಲು ಅದು ನನ್ನ ಸ್ವಭಾವದಂತೆ, ನನ್ನ ನೆಲೆಯ ಫಲಗಳಾಗಿವೆ. ನಾನು ಇದನ್ನೆಲ್ಲ ನಿನ್ನ ಬೌದ್ಧಿಕ ಮಟ್ಟ ಮತ್ತು ನಿನ್ನ ಘನತೆಯನ್ನು ಪರೀಕ್ಷಿಸಲು ಮತ್ತು ಜ್ಞಾನ ಹಾಗೂ ಗುಣಮಟ್ಟ ತಿಳಿಯಬಯಸುತ್ತೇನೆ. ನೀನು ನಿನ್ನ ವಾದದಲ್ಲಿ ಸತ್ಯವಂತನೇ, ಇವೆಲ್ಲ ಬೊಬ್ಬೆ ಹೊಡೆಯಲು ಅರ್ಹನೇ. ನೀನು ಪವಿತ್ರ ಖುರ್‌ಆನ್‌ನಂತಹ ಗ್ರಂಥದ ಮೇಲೆ ಆಕ್ರಮಣ ಮಾಡಬಹುದೆ, ಅಲ್ಲಾಹನ ಗ್ರಂಥದ ವಾಕ್‌ಚಾತುರ್ಯ ಮತ್ತು ಈ ಮೈದಾನಕ್ಕೆ ಇಳಿಯಲು ಅರ್ಹನೇ.  ಆದುದರಿಂದ ನಿನ್ನನ್ನು ನೋಡಲು. ನೀನು ತನ್ನ ದಾವೆಯಲ್ಲಿ ಸತ್ಯವಂತನೇ ಅಥವಾ ಮಿಥ್ಯವಂತನೇ ತಿಳಿಯಬಯಸುತ್ತೇನೆ. (ನೂರುಲ್–ಹಖ್, ರೂಹಾನಿ ಖಝಾಈನ್, ಸಂಪುಟ–8, ಪುಟ–152)

### ಇಮಾಮುದ್ದೀನ್‌ನಿಗೆ ಎರಡು ತಿಂಗಳುಗಳ ಕಾಲಾವಕಾಶ, ಅವರು ಯಾರಿಗೆ ಬೇಕಾದರೆ ತನ್ನ ಸಹಾಯಕ್ಕಾಗಿ ಕರೆಸಿಕೊಳ್ಳಲಿ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಕೆಲವೇ ದಿನಗಳಲ್ಲಿ ಗ್ರಂಥ ಬರೆದರು. ಆದರೆ ವಿರೋಧಿಗಳಿಗೆ ಸಂಪೂರ್ಣ ಎರಡು ತಿಂಗಳುಗಳ ಅವಕಾಶ ಮಾಡಿಕೊಟ್ಟರು. ಅವರು ಹೇಳುತ್ತಾರೆ. ನಿನಗೆ ನಿನ್ನ ತಂಡಗಳೊಂದಿಗೆ ಸೇರಿ ಬರೆಯುವ ಅನುಮತಿ ಇದೆ. ಅವರಿಂದ ಸಹಾಯ ಪಡೆಯಲು ನಿನಗೆ ಅಡ್ಡಿಯಿಲ್ಲ. ನಾನು ನಿನಗೆ, ನಿನ್ನ ಸಹೋದರರಿಗೆ, ನಿನ್ನ ಮಿತ್ರರಿಗೆ ಮತ್ತು ನಿನ್ನ ಸಮುದಾಯಕ್ಕೆ ಹಾಗೂ ನಿನ್ನ ಸಹಾಯಕರಿಗೆ ಯಾರು  ನಾವು ಮೌಲ್ವಿಗಳಾಗಿದ್ದೇವೆ ಎಂದು ಹೇಳುತ್ತಿರುವರೋ ಅವರಿಗೆ ಎರಡು ತಿಂಗಳುಗಳ ಅವಕಾಶ ಕೊಡುತ್ತೇನೆ. ಈ ಅವಕಾಶ ಮುದ್ರಣದ ತಾರೀಖಿನಿಂದ ಪ್ರಾರಂಭವಾಗುತ್ತದೆ. ನೀವು ನಿಮ್ಮ ವಾಕ್‌ಚಾತುರ್ಯಗಳ ಮಾನ್ಯತೆ ಪ್ರದರ್ಶಿಸಿರಿ. (ಅದೇ ಪುಟ 154).

ಅಂತೆಯೇ ಕ್ರೈಸ್ತರು ಈ ಸ್ಪರ್ಧೆಯಲ್ಲಿ ಅವರಿಗೆ ಸಹಾಯ ನೀಡಬಹುದು. ಎಲ್ಲರೂ ಒಟ್ಟುಗೂಡಿ ಈ ಧರ್ಮಯುದ್ಧದಲ್ಲಿ ಅವರರಿಗೆ ಮತ್ತು ಕೆಲವರು ಕೆಲವರಿಗೆ ಸಹಕರಿಸಲಿ ಮತ್ತು ಒಬ್ಬ ಅಜ್ಞಾನಿ, ಕೇಳಿರದ ಮನುಷ್ಯನಿಂದ ಕೇಳಿ ನೋಡಲಿ ಮತ್ತು ದೂರದವರು, ಹತ್ತಿರದವರು ಅನ್ನದೇ ಸಹಾಯಕ್ಕಾಗಿ ಕರೆಯಿಸಿಕೊಳ್ಳಲಿ, ಮಸೀಹರಿಂದಲು ಅವರ ದೃಷ್ಟಿಯಲ್ಲಿ ದೇವರಾದರೂ ಅವರ ಸಹಾಯವು ಪಡೆಯಲಿ, ನೆನಪಿರಲಿ ಜಗತ್‌ಪಾಲಕ ಸೃಷ್ಟಿಕರ್ತನ ಹೊರತು ಯಾರೂ ಇಲ್ಲ. ಅವರು ರುಹಲ್ ಕುದುಸ್ ಭಾಷೆ ಕಲಿಸಿ ಕೊಡುವಂತಹ ದೇವದೂತನ ಸಹಾಯವು ಪಡೆಯಲಿ. ಅವರು ಸತ್ಯವಂತರಾದರೆ, (ಅದೇ ಪುಟ 155).

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಕೇವಲ ಇಮಾಮುದ್ದೀನ್ ಮಾತ್ರವಲ್ಲ ಬದಲು ಎಲ್ಲ ಪಾದರಿಗಳಿಗೆ, ಎಲ್ಲ ಮೌಲ್ವಿಗಳಿಗೆ ವಿಶೇಷವಾಗಿ ಮುಹಮ್ಮದ್ ಹುಸೇನ್ ಬಟೌಲ್ವಿ ಮತ್ತು ರಸಲ್‌ಬಾಬಾ ಅಮ್ರತ್ಸರಿ ಅವರನ್ನು ಸಹ ಪ್ರತಿಪಾದಿಸಲು ಕರೆಕೊಟ್ಟರು. ಅವರು ತನ್ನ ಗ್ರಂಥ "ಇತ್ಮಾಮುಲ್ ಹುಜ್ಜತ್" ನಲ್ಲಿ ಘೋಷಣೆ ಮಾಡಿದರು.

"ನಮ್ಮ ಕಡೆಯಿಂದ ಎಲ್ಲ ಪಾದರಿಗಳು ಮತ್ತು ಶೇಖ್ ಮುಹಮ್ಮದ್ ಹುಸೇನ್ ಬಟೌಲ್ವಿ ಮತ್ತು ರಸಲ್ ಬಾಬಾ ಅಮ್ರತ್ಸರಿ, ಮರುದಿನ ಅವರ ಎಲ್ಲ ಸಂಗಡಿಗರನ್ನು ಆಹ್ವಾನಿಸುತ್ತೇನೆ. (ಇತ್ಮಮುಲ್ ಹುಜ್ಜತ್, ರೂಹಾನಿ ಖಝಾಈನ್, ಸಂಪುಟ–8, ಪುಟ–304)

### ಇಮಾಮುದ್ದೀನ್‌ನಿಗೆ ಐದು ಸಾವಿರ ರೂಪಾಯಿಗಳ ವೈಭವಪೂರಿತ ಬಹುಮಾನದ ಘೋಷಣೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಅಂದ ಹಾಗೆ ನೀವು ಈ ಗ್ರಂಥದ ಪ್ರತಿರೂಪ ತಯಾರಿಸಿ ತರುವವರಾದರೆ, ಈ ಅವಧಿಯಲ್ಲಿ ಬಹು ದೀರ್ಘ ಆವಧಿಯಾಗಿರುತ್ತದೆ. ನೀವು ಎಲ್ಲ ರೂಪದಲ್ಲಿ ಸೂಕ್ತ ರೀತಿಯಲ್ಲಿ ಗ್ರಂಥ ರಚಿಸಿ ಪ್ರಸ್ತುತಪಡಿಸಿದರೆ, ಮತ್ತು ನಾವು ನೋಡಿದರೆ ನೀವು ಯಥಾರ್ಥವಾಗಿಯೂ ಅಂಗುಲಕ್ಕೆ ಅಂಗುಲ ಪ್ರತಿವಾದಿಸಿದ್ದೀರಿ ಎಂದಾದರೆ  ನಿಮಗೆ ಐದು ಸಾವಿರ ರೂಪಾಯಿ ಬಹುಮಾನ ನೀಡುವೆವು ಈ ವಾಗ್ದಾನವು ಅಲ್ಲಾಹನೊಡನೆ ಆಣೆಮಾಡಿ ಹೇಳುವೆನು. ನಿನಗೆ ಏನಾದರೂ, ಧಾರ್ಮಿಕ ಆಣೆಗಳ ಮೇಲೆ ಭರವಸೆ ಇಲ್ಲ ಎಂದಾದರೆ ನಾವು ಬ್ರಿಟಿಷ್ ಖಜಾನೆಯಲ್ಲಿ ರೂಪಾಯಿ ಜಮಾ ಮಾಡುವೆವು. ಏಕೆಂದರೆ ನಿಮಗೆ ನೆಮ್ಮದಿ ಇರಲಿ ಎಂದು. (ನೂರುಲ್ ಹಖ್ ಪುಟ 154).

### ಬ್ರಿಟಿಷ್ ಸರಕಾರವನ್ನು ತೀರ್ಪುಗಾರರನ್ನಾಗಿ ಮಾಡಲು ಸಲಹೆ

ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಇದು ನಾವು ಹೃದಯಪೂರ್ವಕವಾಗಿ ಸಂತೋಷದಿಂದ ರಾಜಿಯಾದ ಮಾತಾಗಿದೆ ಮತ್ತು ನಾವು ನಮ್ಮ ನಿಮ್ಮ ಮತ್ತು ವಿರೋಧಿಗಳ ಮಧ್ಯೆ ಬ್ರಿಟಿಷ್ ಸರಕಾರವನ್ನು ತೀರ್ಪುಗಾರರನ್ನಾಗಿ ಮಾಡಲು ಸಹ ಒಪ್ಪಿಕೊಂಡಿರುವೆವು. ಅಂದ ಹಾಗೆ ಸರಕಾರವು ಪವಿತ್ರ ಖುರ್‌ಆನ್‌ನ ಮೇಲೆ ಆರೋಪಗಳನ್ನು ಹಚ್ಚುವವರನ್ನು ಸತ್ಯವಂತರನ್ನಾಗಿ ನೋಡುವವರಾದರೆ ಅವರು ಹೇಳುತ್ತಾರೆ. ನಾವು ಸಹ ಮುಸ್ಲಿಮ್ ಪಂಡಿತರ ಹಾಗೆ ಪಂಡಿತರಾಗಿದ್ದೇವೆ ಎಂದು, ಮೂರ್ಖರಲ್ಲ ಎಂದು, ಸಾಹಿತ್ಯ ಮತ್ತು ವಾಕ್‌ಚಾತುರ್ಯಗಳಲ್ಲಿ ವ್ಯತ್ಯಾಸ ಕಂಡುಹಿಡಿಯಲು ನಾವು ಶಕ್ತರು ಎನ್ನುತ್ತಾರೆ. ಈಗ ಸರಕಾರ ನೋಡಲಿ. ಅವರು ಈ ಮೈದಾನದಲ್ಲಿ ನಿಜವಾಗಿಯೂ ಮುನ್ನಡೆಯುವವರಾಗಿದ್ದಾರೆಯೇ ಆಗ ಸರಕಾರದ ಕರ್ತವ್ಯವಾಗಿರುವುದು ನಮ್ಮ ಬಹುಮಾನ ಅವರಿಗೆ ಕೊಡಬಹುದಾಗಿದೆ. ಮತ್ತು ನಮಗೆ ಮಿಥ್ಯವಾದಿಗಳು ಎಂದು ಭಾವಿಸಬಹುದು, ಅವರ ಈ ಸಾಧನೆಯನ್ನು ದೇಶ ವಿದೇಶಗಳಲ್ಲಿ ಪ್ರಚುರಪಡಿಸಬಹುದು.

ಲೋಕದ ಎಲ್ಲೆಡೆ ಅವರ ಈ ಸಾಧನೆ ಪ್ರಸಾರ ಮಾಡಬಹುದು. ಅವರ ಹೊರತು ವಿದ್ವಾಂಸರಲ್ಲಿ ಸೇರಿಸಲಿ. ಒಂದು ವೇಳೆ ಆ ಹೇಳಿಕೆಗಳನ್ನು ಪಡೆಯಲಿಲ್ಲ ಎಂದಾದರೆ, ಅಜ್ಞಾನಿಗಳಾಗಿರುತ್ತಾರೆ. ಆ ಸಾಧನೆಗಳನ್ನು ತೋರುವುದರಿಂದ ಬಹುದೂರವಾಗಿದ್ದಾರೆಂದರೆ ಆಗ ನಾವು ನ್ಯಾಯಪ್ರಿಯ ಬ್ರಿಟಿಷ್ ಸರಕಾರದ ನ್ಯಾಯವನ್ನು ಬಯಸುತ್ತೇವೆ. ಅದಾದ ನಂತರ ಆ ಸುಳ್ಳುಗಾರರನ್ನು ತನ್ನನ್ನು ಮೌಲ್ವಿಗಳೆಂದು ಕರೆಯಿಸಿಕೊಳ್ಳುವುದರಿಂದ ತಡೆಯಬೇಕು. ಅಜ್ಞಾನಿಗಳಾಗಿಯೂ ಪವಿತ್ರ ಖುರ್‌ಆನ್‌ನ್ನು ನಿಂಧಿಸುವುದರಿಂದ ನಿಷೇಧ ಹೇರಬೇಕು. (ನೂರುಲ್ ಹಖ್, ಪುಟ–155)

### ಎದುರಾಳಿಗಳಲ್ಲಿ ಇಮಾಮುದ್ದೀನ್‌ರವರು ಮೊದಲ ಸಂಬೋಧಕರಾಗಿದ್ದರು.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ಈ ಆಹ್ವಾನದ ಮೊದಲ ಸಂಬೋಧಕರು ಮತ್ತು ಈ ಯುದ್ಧದಲ್ಲಿ ನಮ್ಮ ಮೊದಲ ಆಹ್ವಾನಿತರು ಫಾದರಿ ಇಮಾಮುದ್ದೀನ್ ಆಗಿರುತ್ತಾರೆ. ಏಕೆಂದರೆ ಅವರು ಪವಿತ್ರ ಖುರ್‌ಆನ್‌ನ ಸಾಹಿತ್ಯ ಮತ್ತು ವಾಕ್‌ಚಾತುರ್ಯದ ವಿರುದ್ಧ ಪ್ರಚಾರ ಮಾಡುತ್ತಾರೆ ಮತ್ತು ತನ್ನ ಎಲ್ಲಾ ಗ್ರಂಥಗಳಲ್ಲಿ ಲಜ್ಜೆಗೆಡಿತನ ತೋರಿಸುತ್ತಾರೆ ಮತ್ತು ನಾನೊಬ್ಬ ಸಜ್ಜನ ಪಂಡಿತನಾಗಿದ್ದೇನೆ ಎಂದು ಹೇಳಿಕೊಳ್ಳುತ್ತಾರೆ.

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಇಸ್ಲಾಮಿನ ಪುನರುದ್ಧಾನ ಮತ್ತು ಸಹಾಯ ಮಾಡುವುದೇ ನನ್ನ ಆಗಮನದ ಉದ್ದೇಶವಾಗಿದೆ. (ಹಝ್ರತ್ ಮಸೀಹ್ ಮೌಊದ್(ಅ))**

**ಮಾರ್ಚ್ 23, ಮಸೀಹ್ ಮೌಊದ್ ದಿನವಾದ್ದರಿಂದ ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳಿಂದ ಹಝ್ರತ್ ಮಸೀಹ್ ಮೌಊದ್(ಅ)ರವರ ಆಗಮನದ ಆವಶ್ಯಕತೆ, ಉದ್ದೇಶ ಹಾಗೂ ಸತ್ಯತೆಯ ಪ್ರಸ್ತಾವನೆ**

**ಹಝ್ರತ್ ಮಸೀಹ್ ಮೌಊದ್‌ರ ಆಗಮನದ ಉದ್ದೇಶ ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಪೈಗಂಬರ್‌ರ(ಸ) ಭವಿಷ್ಯವಾಣಿಗಳ ಪ್ರಕಾರ ಧರ್ಮದ ಪುನರುದ್ಧಾರ ಮಾಡುವುದು ಹಾಗೂ ಇಸ್ಲಾಮಿನ ನೈಜ ಶಿಕ್ಷಣವನ್ನು ಲೋಕದಲ್ಲಿ ಜಾರಿಗೊಳಿಸುವುದಾಗಿದೆ**

**ನಾನು ಅಲ್ಲಾಹನ ಹೆಸರಲ್ಲಿ ಆಣೆಯಿಟ್ಟು ಹೇಳಿದ ನಂತರ ಮತ್ತು ನನ್ನ ಪರವಾಗಿ ಪ್ರಕಟವಾದ ದೃಷ್ಟಾಂತಗಳನ್ನು ನೋಡಿದ ನಂತರ ಕೂಡ ನನ್ನನ್ನು ಸುಳ್ಳುವಾದಿ ಮತ್ತು ಅಲ್ಲಾಹನ ಮೇಲೆ ಸುಳ್ಳು ಸೃಷ್ಟನೆ ಮಾಡುವವನು ಎಂದು ಹೇಳುತ್ತಿರುವಿಯಾದರೆ, ನಾನು ಅಲ್ಲಾಹನ ಹೆಸರಲ್ಲಿ ಆಣೆಹಾಕಿಕೊಂಡು ಕೇಳುತ್ತೇನೆ, ಅಲ್ಲಾಹನ ಸಹಾಯ ಮತ್ತು ನೆರವು ಸದಾ ಲಭಿಸುತ್ತಿರುವ ಒಬ್ಬ ಸುಳ್ಳುವಾದಿಯ ಉದಾಹರಣೆಯನ್ನು ನನಗೆ ತೋರಿಸಿರಿ. (ಹಝ್ರತ್ ಮಸೀಹ್ ಮೌಊದ್(ಅ))**

**ಇಂದು ಲೋಕದಲ್ಲಿ ಹರಡಿರುವ ಅಹ್ಮದಿಯಾ ಜಮಾಅತ್ ಒಂದು ಸ್ಪಷ್ಟವಾದ ಪುರಾವೆಯಲ್ಲವೇ**

**ನಾನು ಹಝ್ರತ್ ಪೈಗಂಬರರ(ಸ) ಸಮುದಾಯದವನಾಗಿರದಿರುತ್ತಿದ್ದರೆ ಮತ್ತು ಹಝ್ರತ್ ಪೈಗಂಬರ್‌ರನ್ನು(ಸ) ಅನುಸರಿಸದೇ ಇರುತ್ತಿದ್ದರೆ, ಲೋಕದ ಎಲ್ಲ ಪರ್ವತಗಳಿಗೆ ಸಮವಾಗಿ ನನ್ನ ಸತ್ಕರ್ಮಗಳು ಇರುತ್ತಿದ್ದರೂ ಎಂದಿಗೂ ಅಲ್ಲಾಹನೊಂದಿಗೆ ಮಾತುಕತೆ ಮತ್ತು ಸಂಭಾಷಣೆ ನಡೆಸುವ ಸೌಭಾಗ್ಯವನ್ನು ನಾನು ಪಡೆಯುತ್ತಿರಲಿಲ್ಲ. ಏಕೆಂದರೆ ಮುಹಮ್ಮದೀ ಪ್ರವಾದಿತ್ವದ ಹೊರತುಪಡಿಸಿ ಬಾಕಿಯೆಲ್ಲ ಪ್ರವಾದಿತ್ವಗಳು ಮುಚ್ಚಲ್ಪಟ್ಟಿವೆ. ಶರೀಅತ್ ತರುವ ಯಾವುದೇ ನಬಿ ಬರಲು ಸಾಧ್ಯವಲ್ಲ. ಶರೀಅತ್ ಇಲ್ಲದೇ ನಬಿ ಬರಬಹುದು. (ಹಝ್ರತ್ ಮಸೀಹ್ ಮೌಊದ್(ಅ))**

**ಅಲ್ಲಾಹನು ನನ್ನನ್ನು ಯಾವ ಕೆಲಸಕ್ಕಾಗಿ ಕಳುಹಿಸಿರುವನೋ ಅದೇನೆಂದರೆ, ಅಲ್ಲಾಹನ ಮತ್ತು ಸೃಷ್ಟಿಗಳ ಸಂಬಂಧದಲ್ಲಿ ಉಂಟಾದ ಮಾಲಿನ್ಯವನ್ನು ದೂರಮಾಡಿಕೊಂಡು ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ಸ್ಥಾಪಿಸುವುದಾಗಿದೆ, ಸತ್ಯದ ಪ್ರಕಟನೆಯಿಂದ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಮೈತ್ರಿಸಂಧಾನದ ಬುನಾದಿ ಹಾಕುವುದಾಗಿದೆ. ಲೋಕದ ಕಣ್ಣುಗಳಿಂದ ಮರೆಯಾಗಿರುವ ಧಾರ್ಮಿಕ ಸತ್ಯವನ್ನು ಬಯಲುಗೊಳಿಸುವುದಾಗಿದೆ, ಸ್ವಾರ್ಥದ ಅಂಧಕಾರದಲ್ಲಿ ಹುದುಗಿರುವ ಆಧ್ಯಾತ್ಮಿಕತೆಯ ಮಾದರಿಯನ್ನು ತೋರಿಸುವುದಾಗಿದೆ ಮತ್ತು ಪರಿಶುದ್ಧ ಮತ್ತು ಪ್ರಕಾಶಮಯವಾದ ಏಕದೇವವಿಶ್ವಾಸವನ್ನು ಪುನಃ ಸ್ಥಾಪಿಸುವುದಾಗಿದೆ. (ಹಝ್ರತ್ ಮಸೀಹ್ ಮೌಊದ್(ಅ))**

**ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ವಿಶೇಶ ಕೋರಿಕೆ. ಅಹ್ಮದಿಯರು ಸಹ ಹಿಂದಿಗಿಂತ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗಲು ಗಮನಹರಿಸಬೇಕು. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಮತ್ತು ಜನರ ಹಕ್ಕುಗಳನ್ನು ಈಡೇರಿಸುವವರಾಗಬೇಕಾಗಿ ಮನವಿ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **26–03–2021** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

هُوَ الَّذِيْ بَعَثَ فِي الْاُمِّيّٖنَ رَسُوْلًا مِّنْهُمْ يَتْلُوْا عَلَيْهِمْ اٰيٰتِهٖ وَيُزَكِّيْهِمْ وَيُعَلِّمُهُمُ الْكِتٰبَ وَالْحِكْمَةَ وَاِنْ كَانُوْا مِنْ قَبْلُ لَفِيْ ضَلٰلٍ مُّبِيْنٍ ـ *(ಅಲ್‌ಜುಮ್‌ಅ: 03)*

وَاٰخَرِيْنَ مِنْهُمْ لَمَّا يَلْحَقُوْا بِهِمْ وَهُوَ الْعَزِيْزُ الْحَكِيْمُ *(ಅಲ್‌ಜುಮ್‌ಅ: 04)*

ಅರ್ಥ ಓದು ಬರಹ ಅರಿಯದ ಜನರಲ್ಲಿ, ಅವರಿಂದಲೇ ಒಬ್ಬ ಸಂದೇಶವಾಹಕನನ್ನು ನಿಯುಕ್ತಿಗೊಳಿಸಿದವನು ಅವನೇ, ಆ ಸಂದೇಶವಾಹಕ ಅಲ್ಲಾಹನ ವಚನಗಳನ್ನು ಅವರಿಗೆ ವಾಚಿಸುತ್ತಾರೆ; ಅವರನ್ನು ಶುದ್ಧೀಕರಿಸುತ್ತಾರೆ ಹಾಗೂ ಅವರಿಗೆ ಗ್ರಂಥವನ್ನೂ ಜ್ಞಾನವನ್ನೂ ಕಲಿಸುತ್ತಾರೆ. ಮುಂಚೆಯಾದರೋ ಆ ಜನರು ಸ್ಪಷ್ಟವಾದ ತಪ್ಪು ಹಾದಿಯಲ್ಲಿದ್ದರು.

ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ. ಅವನು ಪ್ರತಾಪಶಾಲಿಯೂ ವಿವೇಕವಂತನೂ ಆಗಿದ್ದಾನೆ.

ಕೆಲವು ದಿನಗಳ ಹಿಂದೆ ಮಾರ್ಚ್ 23 ಆಗಿತ್ತು. ಅಹ್ಮದಿಯಾ ಜಮಾಅತಿನ ಸ್ಥಾಪನೆಯಾದ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಬೈಅತ್ ಪಡೆದ ದಿನವಾದ ಕಾರಣ ಆ ದಿನವನ್ನು ಅಹ್ಮದಿಯ್ಯಾ ಜಮಾಅತಿನಲ್ಲಿ ನೆನಪಿಡಲಾಗುತ್ತದೆ. ಆದ್ದರಿಂದ ಹಝ್ರತ್ ಮಸೀಹ್ ಮೌಊದ್‌ರ ಆಗಮನದ ಉದ್ದೇಶ ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಪೈಗಂಬರ್‌ರ(ಸ) ಭವಿಷ್ಯವಾಣಿಗಳ ಪ್ರಕಾರ ಧರ್ಮದ ಪುನರುದ್ಧಾರ ಮಾಡುವುದು ಹಾಗೂ ಇಸ್ಲಾಮಿನ ನೈಜ ಶಿಕ್ಷಣವನ್ನು ಲೋಕದಲ್ಲಿ ಜಾರಿಗೊಳಿಸುವುದಾಗಿದೆ ಎಂದು ಈ ದಿನ ಪ್ರತಿ ವರ್ಷ ನಮ್ಮನ್ನು ನೆನಪಿಸುವಂತಾಗಿರಬೇಕು. ಬೈಅತ್ ಮಾಡಿದ್ದೇವೆ ಎಂದು ವಾದಿಸುವ ನಾವು ಸಹ ಈ ಮುಖ್ಯವಾದ ಕೆಲಸವನ್ನು ಈಡೇರಿಸಲು ನಮ್ಮ ಸಾಮರ್ಥ್ಯಗಳ ಪ್ರಕಾರ ಭಾಗಿಯಾಗಬೇಕು, ದಾರಿಗೆಟ್ಟ ಮನುಷ್ಯರ ಸಂಬಂಧ ಅಲ್ಲಾಹನೊಂದಿಗೆ ಜೋಡಿಸಬೇಕು ಹಾಗೂ ಅನ್ಯೋನ್ಯ ಹಕ್ಕುಗಳನ್ನು ಈಡೇರಿಸುವ ಕಡೆಗೆ ಜನರ ಗಮನವನ್ನು ಸೆಳೆಯಬೇಕು. ಇದಕ್ಕಾಗಿ ನಾವು ನಮ್ಮ ಸುಧಾರಣೆ ಮಾಡಬೇಕೆಂಬುದು ಸ್ಪಷ್ಟ. ಹೇಗಿದ್ದರೂ ಈಗ ನಾನು ಹಝ್ರತ್ ಮಸೀಹ್ ಮೌಊದ್‌ರ(ಅ) ಕೆಲವು ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ. ಅವುಗಳಲ್ಲಿ ಅವರ ಆಗಮನದ ಆವಶ್ಯಕತೆ, ಉದ್ದೇಶ ಹಾಗೂ ಮುಂಚಿತವಾಗಿ ನುಡಿಯಲಾದ ಪವಿತ್ರ ಖುರ್‌ಆನಿನ ಮತ್ತು ಹಝ್ರತ್ ಪೈಗಂಬರರ(ಸ) ಭವಿಷ್ಯವಾಣಿಗಳು ಹೇಗೆ ಈಡೇರಿದುವು ಮತ್ತು ಈಡೇರುತ್ತಿವೆ ಎಂಬುದರ ಪ್ರಸ್ತಾಪ ಲಭಿಸುವುದು. ಅವುಗಳು ಹಝ್ರತ್ ಮಸೀಹ್ ಮೌಊದ್‌ರ(ಅ) ಸತ್ಯತೆಯನ್ನು ಸಾಬೀತುಪಡಿಸುತ್ತವೆ. ಸಹಾಬರಲ್ಲಿ ಉಂಟಾದಂತಹ ಪರಿಶುದ್ಧ ಬದಲಾವಣೆಗಳು ಜಮಾಅತಿನಲ್ಲಿ ಉಂಟಾಗುವುವು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದುದರ ಬಗ್ಗೆ ಸಹ ಪ್ರಸ್ತಾಪಿಸುವೆನು. ಸಹಾಬರು ದಾಟಿದಂತಹ ಮತ್ತು ಜಮಾಅತಿನ ವ್ಯಕ್ತಿಗಳ ಸಹ ದಾಟುತ್ತಿರುವಂತಹ ಕಷ್ಟತೆಗಳ ಬಗ್ಗೆ ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದ್ದರು. ಒಟ್ಟಿನಲ್ಲಿ ಒಂದು ಜಮಾಅತ್

ಎಂಬ ನೆಲೆಯಲ್ಲಿ ಪ್ರಗತಿ ಹೊಂದುತ್ತಿರಲು ಮತ್ತು ಅವನತಿ ಕಡೆಗೆ ಹೋಗುವಂತೆ ಆಗದಿರಲು ನಾವು ಸದಾ ಈ ಸಂಗತಿಗಳನ್ನು ಮುಂದಿರಿಸಬೇಕು. ಅವರು ತಮ್ಮ ಆಗಮನ ಮತ್ತು ಸತ್ಯತೆಯ ಬಗ್ಗೆ ಅಲ್ಲಾಹನನ್ನು ಸಾಕ್ಷಿಯನ್ನಾಗಿ ಮಾಡಿ ಘೋಷಿಸಿದ್ದರು. ಅದು ನಮ್ಮ ವಿಶ್ವಾಸಗಳನ್ನು ಸುದೃಢಗೊಳಿಸುತ್ತದೆ. ನಾವು ಈ ಸಂಗತಿಗಳನ್ನು ಮೆಲುಕು ಹಾಕುತ್ತಾ ಇದ್ದರೆ ಮತ್ತು ಸದಾ ಮುಂದಿರಿಸುತ್ತಾ ಇದ್ದರೆ, ನಿಶ್ಚಯವಾಗಿಯೂ ಇವು ನಮ್ಮ ವಿಶ್ವಾಸವನ್ನು ವರ್ಧಿಸಲು ಕಾರಣವಾಗುವುವು ಮತ್ತು ನಮ್ಮನ್ನು ನಮ್ಮ ಉದ್ದೇಶದ ಕಡೆಗೆ ಗಮನಸೆಳೆಯುತ್ತಾ ಇರುವುವು. ಹೇಗಿದ್ದರೂ ಅಹ್ಮದಿಯರನ್ನು ಮತ್ತು ಅಹ್ಮದಿಯೇತರರನ್ನು ಸಂಬೋಧಿಸುತ್ತಾ ಮಾಡಲಾದ ಉಲ್ಲೇಖಗಳನ್ನು ಈಗ ನಾನು ಮುಂದಿರಿಸುತ್ತೇನೆ. ಅವರು ಮಸೀಹ್ ಮೌಊದ್ ಆಗಿದ್ದರು ಎಂಬುದನ್ನು ಆ ಉಲ್ಲೇಖಗಳು ಸ್ಪಷ್ಟವಾಗಿ ಸಾಬೀತುಪಡಿಸುತ್ತವೆ.

ನಾನು ಪಠಿಸಿದ ಆಯತ್‌ಗಳನ್ನು ವಿವರಿಸುತ್ತಾ ಒಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ಈ ಆಯತ್ತಿನ ತಾತ್ಪರ್ಯವೇನೆಂದರೆ, ಜನರಿಗೆ ಅರಿವು ಮತ್ತು ಯುಕ್ತಿಯಿಲ್ಲವಾದಾಗ ಹಾಗೂ ಆತ್ಮವನ್ನು ಪರಿಪೂರ್ಣತೆಗೆ ತಲುಪಿಸುವ ಮತ್ತು ಮನುಷ್ಯರ ಆತ್ಮಗಳನ್ನು ಅರಿವು ಮತ್ತು ಕರ್ಮಪರವಾದ ಪರಿಪೂರ್ಣತೆಗೆ ತಲುಪಿಸುವ ತತ್ವಜ್ಞಾನ ಮತ್ತು ಧಾರ್ಮಿಕ ಜ್ಞಾನ ಕಾಣೆಯಾದಾಗ ಮತ್ತು ಜನರು ದುರ್ಮಾರ್ಗದಲ್ಲಿ ಮುಳುಗಿದ್ದಾಗ ಅಲ್ಲಾಹನು ಪ್ರವಾದಿಯನ್ನು ಕಳುಹಿಸಿದನು. ಎಂದರೆ, ಜನರು ನೇರವಾದ ಮಾರ್ಗದಿಂದ ಬಹಳ ದೂರವಾದಂತಹ ಸಮಯದಲ್ಲಿ ಅಲ್ಲಾಹನು ತನ್ನ ಉಮ್ಮೀ ಪ್ರವಾದಿಯಾದ ಹಝ್ರತ್ ಪೈಗಂಬರ್‌ರನ್ನು(ಸ) ಕಳುಹಿಸಿದನು. ಆ ಪ್ರವಾದಿ ಜನರ ಆತ್ಮಗಳನ್ನು ಪರಿಶುದ್ಧಗೊಳಿಸಿದರು ಮತ್ತು ಪವಿತ್ರ ಖುರ್‌ಆನಿನ ಅರಿವು ಮತ್ತು ಯುಕ್ತಿಯಿಂದ ಹಾಗೂ ದೃಷ್ಟಾಂತಗಳು ಮತ್ತು ದೈವಿಕ ಕುರುಹುಗಳಿಂದ ಅವರನ್ನು ಪರಿಪೂರ್ಣ ದೃಢವಿಶ್ವಾಸದ ಮಟ್ಟಕ್ಕೆ ತಲುಪಿಸಿದರು. ದೇವನನ್ನು ಅರಿಯುವ ಪ್ರಕಾಶದಿಂದ ಅವರ ಹೃದಯಗಳನ್ನು ಬೆಳಗಿಸಿದರು. ಮತ್ತೆ ಹೇಳುತ್ತಾರೆ: ಕೊನೆಯ ಕಾಲದಲ್ಲಿ ಆಗಮಿಸಲಿರುವ ಬೇರೊಂದು ಪಂಗಡ ಸಹ ಇದೆ. ಅದು ಸಹ ಆರಂಭದಲ್ಲಿ ಅಂಧಕಾರ ಮತ್ತು ದುರ್ಮಾರ್ಗದಲ್ಲಿ ಇರುವುದು. ಅರಿವು, ಯುಕ್ತಿ ಮತ್ತು ದೃಢವಿಶ್ವಾಸದಿಂದ ದೂರವಾಗಿರುವುದು.ಆಗ ಅಲ್ಲಾಹನು ಅವರನ್ನು ಸಹ ಸಹಾಬರ ಹಾಗೆ ಮಾಡುವನು. ಎಂದರೆ, ಸಹಾಬರು ನೋಡಿದ್ದ ಸಂಗತಿಗಳನ್ನೆಲ್ಲ ಅವರಿಗೂ ತೋರಿಸಲಾಗುವುವು. ಎಲ್ಲಿಯ ವರೆಗೆ ಎಂದರೆ, ಅವರ ಸತ್ಯಸಂಧತೆ ಮತ್ತು ದೃಢವಿಶ್ವಾಸ ಸಹಾಬರ ಸತ್ಯಸಂಧತೆ ಮತ್ತು ದೃಢವಿಶ್ವಾಸದಂತೆ ಆಗುವುದು.

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರನ್ನು ಬೈಅತ್ ಮಾಡಿಕೊಂಡು ಅವರ ಸತ್ಯತೆಯ ಬಗ್ಗೆ ನಮಗೆ ಇರಬೇಕಾದ ದೃಢವಿಶ್ವಾಸದ ಸ್ಥಿತಿ ಹೀಗಿರಬೇಕು. ಹಝ್ರತ್ ಪೈಗಂಬರರ(ಸ) ಮೇಲೆ ಮತ್ತು ಇಸ್ಲಾಮಿನ ಸತ್ಯತೆಯ ಮೇಲೆ ಸಹಾಬರಿಗೆ ಇದ್ದಂತಹ ವಿಶ್ವಾಸ ಮತ್ತು ದೃಢತೆ ನಮಗೆ ಇರಬೇಕು. ಈಗ ಸಹಾಬರ ಜೀವಿತಗಳ ಬಗ್ಗೆ ಖುತ್ಬಗಳನ್ನು ಸಹ ನಾನು ನೀಡುತಿದ್ದೇನೆ. ಬೇರೆ ಉದಾಹರಣೆಗಳು ನಮ್ಮ ಮುಂದಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ಈ ಆಯತ್ತನ್ನು ವ್ಯಾಖ್ಯಾನಿಸುತ್ತಾ ಹಝ್ರತ್ ಪೈಗಂಬರ್(ಸ) ಸಲ್ಮಾನ್ ಫಾರಸಿಯ ಭುಜದ ಮೇಲೆ ಕೈಯಿಟ್ಟುಕೊಂಡು ಹೀಗೆ ಹೇಳಿದ್ದಾಗಿ ಸಹೀಹಾದ ಹದೀಸಿನಲ್ಲಿ ಇದೆ. ಹಝ್ರತ್ ಪೈಗಂಬರ್(ಸ) ಹೇಳಿದ್ದರು: **ಲೌ ಕಾನಲ್ ಈಮಾನು ಮುಅಲ್ಲಕನ್ ಬಿಸ್ಸುರಯ್ಯಾ ಲನಾಲಹೂ ರಜುಲುನ್ ಮಿನ್ ಫಾರಿಸ್**. ಎಂದರೆ ವಿಶ್ವಾಸ ಕೃತಿಕಾ ನಕ್ಷತ್ರಪುಂಜಕ್ಕೆ ಹೋದರೂ ಎಂದರೆ ಆಕಾಶಕ್ಕೆ ಹೋದರು ಕೂಡ ಫಾರಸಿ ವಂಶಜನಾದ ಒಬ್ಬ ವ್ಯಕ್ತಿ ಅದನ್ನು ಮರಳಿ ತರುವನು. ಕೊನೆಗಾಲದಲ್ಲಿ ಫಾರಸಿ ವಂಶಜನಾದ ಒಬ್ಬ ವ್ಯಕ್ತಿ ಜನಿಸುವನು ಎಂಬ ಸಂಗತಿಯ ಕಡೆಗೆ ಅವರು ಸೂಚನೆ ನೀಡಿದ್ದರು. ಪವಿತ್ರ ಖುರ್‌ಆನನ್ನು ಆಕಾಶಕ್ಕೆ ಎತ್ತಲ್ಪಡುವಂತಹ ಕಾಲವೇ ಮಸೀಹ್ ಮೌಊದ್‌ರ ಕಾಲವೆಂದು ಆ ಕಾಲದ ಬಗ್ಗೆ ಬರೆಯಲಾಗಿದೆ. ಎಂದರೆ ಇಸ್ಲಾಮಿನ ಅಧ್ಯಾಪನೆ ಮತ್ತು ಪವಿತ್ರ ಖುರ್‌ಆನಿನ ಶಿಕ್ಷಣವನ್ನು ಜನರು ಸಂಪೂರ್ಣವಾಗಿ ಮರೆತುಬಿಡುವರು. ಆ ಫಾರಸಿ ವಂಶಜರಾದ ವ್ಯಕ್ತಿಯನ್ನೇ ಮಸೀಹ್ ಮೌಊದ್ ಎಂದು ಕರೆಯಲಾಗುವುದು. ಏಕೆಂದರೆ, ಯಾವ ಕ್ರಿಸ್ತೀಯ ಆಕ್ರಮಣವನ್ನು ತಡೆಯಲು ಮಸೀಹ್ ಮೌಊದ್ ಬರಬೇಕಿತ್ತೋ, ಆ ಆಕ್ರಮಣ ವಿಶ್ವಾಸದ ಮೇಲೆಯೇ ಆಗಿದೆ. ಈ ಎಲ್ಲ ಲಕ್ಷಣಗಳು ಕ್ರಿಸ್ತೀಯ ಆಕ್ರಮಣದ ಕಾಲದ್ದಾಗಿರುವುದು ಎಂದು ಹೇಳಲಾಗಿದೆ. ಈ ಆಕ್ರಮಣದಿಂದ ಜನರ ವಿಶ್ವಾಸದ ಮೇಲೆ ಬಹಳ ದುಷ್ಪರಿಣಾಮ ಉಂಟಾಗುವುದು ಎಂದು ಬರೆಯಲಾಗಿದೆ. ಹಝ್ರತ್ ಮಸೀಹ್ ಮೌಊದ್‌ರ ಕಾಲದಲ್ಲಿ, ಅವರ ಜೀವಿತ ಕಾಲದಲ್ಲಿ ಈ ತೀವ್ರತರದ ಆಕ್ರಮಣಗಳು ಆಗುತ್ತಿದ್ದುವು, ಮಾತ್ರವಲ್ಲ, ಬಹಳ ಕಾಲದ ನಂತರವೂ ಈ ತೀವ್ರ ಹಲ್ಲೆಗಳು ಜಾರಿಯಲ್ಲಿದ್ದುವು. ಚರಿತ್ರೆ ಇದಕ್ಕೆ ಸಾಕ್ಷಿಯಾಗಿದೆ. ಇದೇ ಆಕ್ರಮಣವನ್ನು ದಜ್ಜಾಲಿನ ಆಕ್ರಮಣವೆಂದು ಕರೆಯಲಾಗಿದೆ. ದಜ್ಜಾಲಿನ ಈ ಆಕ್ರಮಣದ ವೇಳೆ ಹಲವಾರು ಬುದ್ಧಿಹೀನರು ಏಕದೇವನನ್ನು ಬಿಟ್ಟುಬಿಡುವರು ಮತ್ತು ಸತ್ಯವಿಶ್ವಾಸದ ಮೇಲಿನ ಪ್ರೀತಿ ಬಹುತೇಕ ಜನರಿಗೆ ಕಡಿಮೆಯಾಗುವುದು ಎಂದು ಹಿಂದಿನ ಗ್ರಂಥಗಳಲ್ಲಿ ಬರೆಯಲಾಗಿದೆ. ಮಸೀಹ್ ಮೌಊದ್‌ರ ಅತಿ ಪ್ರಧಾನವಾದ ಕೆಲಸ ವಿಶ್ವಾಸವನ್ನು ಪುನರುದ್ಧಾರ ಮಾಡುವುದಾಗಿರುವುದು. ಫಾರಸಿ ವಂಶಜನಾದ ವ್ಯಕ್ತಿ ಪುನಃ ವಿಶ್ವಾಸವನ್ನು ನೆಲೆನಿಲ್ಲಿಸಲು ಬರುವರು ಎಂದು ಫಾರಸಿ ವಂಶಜನ ಸಂಬಂಧಿಸಿ ಇರುವ **ಲೌಕಾನಲ್ ಈಮಾನ್** ಎಂಬ ಹದೀಸಿನಿಂದ ಸಾಬೀತಾಗುತ್ತದೆ. ಒಟ್ಟಿನಲ್ಲಿ, ಮಸೀಹ್ ಮೌಊದ್ ಮತ್ತು ಫಾರಸಿ ವಂಶಜನು ಬರಬೇಕಾದ ಕಾಲಘಟ್ಟ ಒಂದೇ ಆಗಿರುವಾಗ ಮತ್ತು ಇಬ್ಬರ ಕೆಲಸವೂ ವಿಶ್ವಾಸವನ್ನು ಪುನಃ ನೆಲೆನಿಲ್ಲಿಸುವುದು ಆಗಿರುವಾಗ, ಮಸೀಹ್ ಮೌಊದೇ ಫಾರಸಿ ವಂಶಜನಾಗಿರುವರು ಎಂದು ಖಚಿತವಾಗಿ ಸಾಬೀತಾಯಿತು. ಅವರ ಜಮಾಅತಿನ ಬಗ್ಗೆಯೇ **ವ ಆಖರೀನ ಮಿನ್‌ಹುಂ ಲಮ್ಮಾ ಯಲ್‌ಹಖೂ ಬಿಹಿಂ** ಎಂಬ ವಚನದಲ್ಲಿ ಹೇಳಲಾಗಿದೆ. ಎಂದರೆ, ಅವರೊಂದಿಗೆ ಇಷ್ಟರ ವರೆಗೆ ಸೇರಿಲ್ಲದ ಅವರ ಪೈಕಿಯ ಇನ್ನೊಂದು ಜನತೆಯಲ್ಲೂ ಎಂದು ಪ್ರಸ್ತಾಪಿಸಲಾಗಿದೆ.

ಈ ಆಯತ್ತಿನ ಅರ್ಥವೇನೆಂದರೆ, ಸಂಪೂರ್ಣವಾದ ದುರ್ಮಾರ್ಗದ ನಂತರ ಸನ್ಮಾರ್ಗ ಮತ್ತು ವಿವೇಕವನ್ನು ಗಳಿಸುವ ಪಂಗಡಗಳು ಎರಡೇ ಆಗಿರುವುವು. ಒಂದು ಹಝ್ರತ್ ಪೈಗಂಬರರ(ಸ) ಸಹಾಬರ ಸಂಘ. ಅದು ಹಝ್ರತ್ ಪೈಗಂಬರರ ಆಗಮನಕ್ಕೆ ಮುಂಚೆ ಆಳವಾದ ಅಂಧಕಾರದಲ್ಲಿ ಮುಳುಗಿತ್ತು. ಅನಂತರ ಅಲ್ಲಾಹನ ಅನುಗ್ರಹದಿಂದ ಅವರು ಪ್ರವಾದಿತ್ವದ ಕಾಲವನ್ನು ಪಡೆದರು ಮತ್ತು ದೃಷ್ಟಾಂತಗಳನ್ನು ತಮ್ಮ ಕಣ್ಣುಗಳಿಂದ ಕಂಡರು. ಭವಿಷ್ಯವಾಣಿಗಳು ಈಡೇರುತ್ತಿರುವುದಾಗಿ ಕಂಡರು. ದೃಢವಿಶ್ವಾಸ ಅವರಲ್ಲಿ ಎಂತಹ ಬದಲಾವಣೆ ಉಂಟುಮಾಡಿತ್ತು ಎಂದರೆ, ಅವರ ಆತ್ಮಗಳು ಮಾತ್ರ ಬಾಕಿಯುಳಿದ ರೀತಿಯಲ್ಲಿ ಆದರು. ಮತ್ತೊಂದು ಮೇಲಿನ ಆಯತ್ತಿನಲ್ಲಿ ಹೇಳಲಾದ ರೀತಿಯಲ್ಲಿ ಸಹಾಬರಂತಿರುವ ಸಂಘ, ಮಸೀಹ್ ಮೌಊದ್‌ರ(ಅ) ಸಂಘವಾಗಿದೆ. ಏಕೆಂದರೆ, ಈ ಸಂಘವು ಸಹಾಬರ ಹಾಗೆಯೇ ಹಝ್ರತ್ ಪೈಗಂಬರರ(ಸ) ದೃಷ್ಟಾಂತಗಳನ್ನು ನೋಡುವ ಸಂಘವಾಗಿದೆ. ಅಂಧಕಾರ ಮತ್ತು ದುರ್ಮಾರ್ಗದ ನಂತರ ಸನ್ಮಾರ್ಗವನ್ನು ಪಡೆಯುವ ಸಂಘವಾಗಿದೆ. **ಆಖರೀನ ಮಿನ್‌ಹುಮ್** ಎಂಬ ಆಯತ್ತಿನಲ್ಲಿ ಮಿನ್‌ಹುಮ್‌ನ ಸಂಪತ್ತಿನಿಂದ ಎಂದರೆ ಸಹಾಬರಂತೆ ಆಗಿರುವುದು ಎಂಬ ಅನುಗ್ರಹದಿಂದ ಒಂದಂಶವನ್ನು ನೀಡಲಾಗುವುದು ಎಂಬುದು ಇದರ ಕಡೆಗೆ ಸೂಚನೆ ನೀಡುತ್ತದೆ.

ಇಂದು ಹಾಗೆಯೇ ಆಯಿತು. ಹದಿಮೂರು ಶತಮಾನಗಳ ನಂತರ ಹಝ್ರತ್ ಪೈಗಂಬರರ(ಸ) ದೃಷ್ಟಾಂತಗಳ ಬಾಗಿಲು ತೆರೆದಿದೆ. ದಾರುಖುತ್‌ನಿಯ ಹದೀಸ್ ಮತ್ತು ಇಬ್ನು ಹಜರಿನ ಫತಾವ ಪ್ರಕಾರ ರಮಝಾನ್ ತಿಂಗಳಲ್ಲಿ ಸೂರ್ಯ – ಚಂದ್ರ ಗ್ರಹಣವಾದದ್ದನ್ನು ಜನರು ತಮ್ಮ ಕಣ್ಣುಗಳಿಂದ ಕಂಡರು. ಹದೀಸಿನಲ್ಲಿ ಹೇಳಿದ್ದ  ಹಾಗೆಯೇ ಚಂದ್ರಗ್ರಹಣದ ರಾತ್ರಿಗಳಲ್ಲಿ ಮೊದಲ ರಾತ್ರಿ ಚಂದ್ರಗ್ರಹಣವಾಯಿತು ಮತ್ತು ಸೂರ್ಯಗ್ರಹಣದ ರಾತ್ರಿಗಳಲ್ಲಿ ಎರಡನೇ ರಾತ್ರಿ ಸೂರ್ಯಗ್ರಹಣವಾಯಿತು. ಇದು ಮಹ್‌ದಿ ಎಂದು ವಾದಿಸುವ ವ್ಯಕ್ತಿ ಇದ್ದ ಸಮಯದಲ್ಲಾಗಿತ್ತು. ಇಂತಹದೊಂದು ಸನ್ನಿವೇಶ ಭೂಮ್ಯಾಕಾಶ ಸೃಷ್ಟಿಯಾದ ಅಂದಿನಿಂದ ಎಂದಿಗೂ ಉಂಟಾಗಿರಲಿಲ್ಲ. ಏಕೆಂದರೆ, ಇಂತಹ ಉದಾಹರಣೆಯನ್ನು ತೋರಿಸಲು ಇಲ್ಲಿಯ ವರೆಗೂ ಯಾರಿಗೂ ಸಾಧ್ಯವಾಗಿಲ್ಲ. ಇದು ಜನರು ತಮ್ಮ ಕಣ್ಣುಗಳಿಂದ ನೋಡಿದ್ದ ಹಝ್ರತ್ ಪೈಗಂಬರರಸ(ಸ) ದೃಷ್ಟಾಂತವಾಗಿತ್ತು. ಮಹ್‌ದಿ ಮತ್ತು ವಾಗ್ದತ್ತ ಮಸೀಹ್‌ರ ಸಮಯದಲ್ಲಿ ಧುಸ್ಸಿನೀನ್ ನಕ್ಷತ್ರ ಪ್ರಕಟವಾಗುವುದು ಎಂದು ಹೇಳಲಾಗಿತ್ತು. ಇದನ್ನು ಸಹ ಸಾವಿರಾರು ಜನರು ನೋಡಿದರು. ಅದೇ ರೀತಿಯಲ್ಲಿ ಜಾವದ ಬೆಂಕಿಯನ್ನು ಲಕ್ಷಾಂತರ ಜನರು ನೋಡಿದರು. ಅದೇ ರೀತಿಯಲ್ಲಿ ಪ್ಲೇಗ್ ರೋಗದ ಹರಡುವಿಕೆ, ಹಜ್ಜ್ ಕರ್ಮಾನುಷ್ಠಾನದಿಂದ ತಡೆಯಲ್ಪಡುವುದನ್ನು ಎಲ್ಲರೂ ಕಣ್ಣಾರೆ ನೋಡಿದರು. ದೇಶದಲ್ಲಿ ರೈಲು ನಿರ್ಮಾಣವಾಗುವುದು, ಒಂಟೆಗಳು ಉಪಯೋಗ ಶೂನ್ಯವಾಗುವುದು, ಇವೆಲ್ಲವೂ ಹಝ್ರತ್ ಪೈಗಂಬರರ(ಸ) ದೃಷ್ಟಾಂತಗಳಾಗಿದ್ದುವು. ಆ ಕಾಲದ ಸಹಾಬರು ದೃಷ್ಟಾಂತವನ್ನು ನೋಡಿದ ಹಾಗೆಯೇ ಅವೆಲ್ಲವನ್ನು ಈ ಕಾಲಘಟ್ಟದಲ್ಲಿ ನೋಡಲಾಯಿತು. ಆದ್ದರಿಂದಲೇ ಅತ್ಯುನ್ನತನಾದ ಅಲ್ಲಾಹನು ಈ ಕೊನೆಯ ಸಂಘವನ್ನು ಮಿನ್‌ಹುಂ ಎಂಬ ಪದದಿಂದ ಕರೆದಿದ್ದಾನೆ. ದೃಷ್ಟಾಂತವನ್ನು ನೋಡುವುದರಲ್ಲಿ ಆ ಸಂಘವು ಸಹಾಬರ ಹಾಗೆಯೇ ಆದ ಕಾರಣದಿಂದ ಹೀಗೆ ಕರೆಯಲಾಗಿದೆ. ಯೋಚಿಸಿ ನೋಡಿರಿ, ಹದಿಮೂರು ಶತಮಾನದಿಂದ ಪ್ರವಾದಿತ್ವದ ಮಾರ್ಗದಲ್ಲಿರುವ ಇಂತಹ ಕಾಲಘಟ್ಟ ಯಾರಿಗೆ ಲಭಿಸಿದೆ? ನಮ್ಮ ಜಮಾಅತಿಗೆ ಹಲವು ಕಾರಣದಿಂದ ಸಹಾಬರೊಂದಿಗೆ ಹೋಲಿಕೆಯಿದೆ. ಸಹಾಬರು ನೋಡಿದ ರೀತಿಯಲ್ಲಿ ಅವರು ದೃಷ್ಟಾಂತಗಳನ್ನು ಕಾಣುತ್ತಾರೆ. ಸಹಾಬರು ಪಡೆದ ರೀತಿಯಲ್ಲಿ ಅವರು ಅಲ್ಲಾಹನ ದೃಷ್ಟಾಂತಗಳಿಂದ ಮತ್ತು ತಾಜಾ ಸಹಾಯಗಳಿಂದ ಪ್ರಕಾಶ ಮತ್ತು ದೃಢವಿಶ್ವಾಸವನ್ನು ಪಡೆಯುತ್ತಾರೆ. ಅಲ್ಲಾಹನ ಮಾರ್ಗದಲ್ಲಿ, ಜನರ ಅಪಹಾಸ್ಯ, ಪರಿಹಾಸ, ಶಾಪ ಹಾಕುವಿಕೆ ಮತ್ತು ಹಲವು

ರೀತಿಯ ನೋವು ಉಂಟುಮಾಡುವ ಮಾತುಗಳು, ಗೇಲಿಮಾತುಗಳು, ಸಂಬಂಧ ವಿಚ್ಛೇದನ ಮುಂತಾದರ ದುಃಖವನ್ನು ಸಹಾಬರಂತೆ ಸಹಿಸುತ್ತಾರೆ. ಸಹಾಬರ ಪಡೆದ ರೀತಿಯಲ್ಲಿ ಅವರು ಸಹ ಅಲ್ಲಾಹನ ಸ್ಪಷ್ಟವಾದ ದೈವಿಕ ಕುರುಹುಗಳಿಂದ ಮತ್ತು ದೈವಿಕ ಸಹಾಯಗಳು ಮತ್ತು ವಿವೇಕಯುತ ಶಿಕ್ಷಣದಿಂದ ಪರಿಶುದ್ಧ ಜೀವಿತವನ್ನು ಪಡೆಯುತ್ತಾರೆ. ಇದು ಬಹಳ ಮುಖ್ಯವಾದ ಸಂಗತಿಯಾಗಿದೆ. ಸದಾ ನೆನಪಿನಲ್ಲಿಡಬೇಕಾಗಿದೆ. ಪವಿತ್ರ ಖುರ್‌ಆನಿನ ಶಿಕ್ಷಣದಿಂದ ಪರಿಶುದ್ಧ ಜೀವಿತವನ್ನು ಪಡೆಯಬೇಕು. ಪವಿತ್ರ ಖುರ್‌ಆನ್ ಓದಿಕೊಂಡು ಚಿಂತಿಸಬೇಕು ಮತ್ತು ಇದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಅವರಲ್ಲಿ ಹಲವಾರು ವ್ಯಕ್ತಿಗಳು ಸಹಾಬರ ಹಾಗೆಯೇ ನಮಾಝ್‌ನಲ್ಲಿ ಅಳುತ್ತಾರೆ, ಸಾಷ್ಟಾಂಗ ಮಾಡುವ ಜಾಗಗಳನ್ನು ಕಣ್ಣೀರಿನಿಂದ ಒದ್ದೆಮಾಡುತ್ತಾರೆ. ಅವರಲ್ಲಿ ಅನೇಕರು ಸಹಾಬರಂತೆ ಸತ್ಯವಾದ ಕನಸುಗಳನ್ನು ಕಾಣುತ್ತಾರೆ, ದಿವ್ಯವಾಣಿಗಳನ್ನು ಪಡೆಯುತ್ತಾರೆ. ಅವರಲ್ಲಿ ಹಲವರು ಸ್ವಂತ ಪರಿಶ್ರಮದಿಂದ ಗಳಿಸಿದ ಸಂಪತ್ತನ್ನು ಅಲ್ಲಾಹನ ಸಂಪ್ರೀತಿಗಾಗಿ ನಮ್ಮ ಜಮಾಅತಿನಲ್ಲಿ ಸಹಾಬರ ಹಾಗೆ ಖರ್ಚು ಮಾಡುತ್ತಾರೆ. ಅವರಲ್ಲಿ ಅನೇಕರು ಮರಣವನ್ನು ನೆನಪಿನಲ್ಲಿಡುತ್ತಾರೆ. ಇದು ಸಹ ಬಹಳ ಮುಖ್ಯವಾದ ಸಂಗತಿಯಾಗಿದೆ. ಮರಣವನ್ನು ಸದಾ ನೆನಪಿಲ್ಲಿಡಬೇಕು. ಅವರು ತಮ್ಮ ಹೃದಯಗಳನ್ನು ಸಹಾಬರ ಹಾಗೆ ಸೌಮ್ಯವಾಗಿ ಮತ್ತು ನೈಜವಾದ ದೇವಭಕ್ತಿಯೊಂದಿಗೆ ಇರಿಸಿದ್ದಾರೆ. ಒಟ್ಟಿನಲ್ಲಿ ಇವೆಲ್ಲ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಬಹಳ ಮುಖ್ಯವಾದ ಸಂಗತಿಗಳಾಗಿವೆ. ಇವುಗಳನ್ನು ನಾವು ಯಾವಾಗಲೂ ನಮ್ಮ ಮುಂದಿರಿಸಬೇಕು. ಇದು ಅಲ್ಲಾಹನ ಸಂಘವಾಗಿದೆ. ಅದನ್ನು ಅಲ್ಲಾಹನೇ ಕಾಪಾಡುತ್ತಿದ್ದಾನೆ ಮತ್ತು ದಿನಂಪ್ರತಿ ಅವರ ಹೃದಯಗಳನ್ನು ಪರಿಶುದ್ಧಗೊಳಿಸುತ್ತಿದ್ದಾನೆ ಹಾಗೂ ಅವರ ಹೃದಯಗಳನ್ನು ವಿಶ್ವಾಸದ ಜ್ಞಾನದಿಂದ ತುಂಬಿಸುತ್ತಿದ್ದಾನೆ. ಯಾವ ರೀತಿಯಲ್ಲಿ ಸಹಾಬರನ್ನು ಆಕರ್ಷಿಸುತ್ತಿತ್ತೋ ಅದೇ ರೀತಿಯಲ್ಲಿ ಆಕಾಶೀಯ ದೃಷ್ಟಾಂತಗಳಿಂದ ಅವರನ್ನು ಅಲ್ಲಾಹನ ಕಡೆಗೆ ಆಕರ್ಷಿಸುತ್ತಿವೆ. ಇವೆಲ್ಲ ನಮ್ಮೊಳಗೆ ಸಹ ಉಂಟಾಗುತ್ತಿವೆಯೇ ಎಂದು ಹುಡುಕಿ ನೋಡಬೇಕಾಗಿದೆ. ಒಟ್ಟಿನಲ್ಲಿ, **ಆಖ಼ರೀನ ಮಿನ್‌ಹುಂ** ಎಂಬ ವಚನದಲ್ಲಿ ಉದ್ದೇಶಿಸಲಾದ ಎಲ್ಲ ಲಕ್ಷಣಗಳು ಈ ಜಮಾಅತಿನಲ್ಲಿ ಕಂಡುಬರುತ್ತವೆ. ಅಲ್ಲಾಹನು ಹೇಳಿದ ಸಂಗತಿ ಒಂದು ದಿನ ಈಡೇರಬೇಕಾದದ್ದು ಆವಶ್ಯವಾಗಿತ್ತು. (ಅಯ್ಯಾಮುಸ್ಸುಲಹ್, ರೂಹಾನಿ ಖಝಾಈನ್, ಸಂಪುಟ–14, ಪುಟ–304–304)

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ವಿವಿಧ ಪಂಗಡಗಳನ್ನು ಒಂದು ಸಮುದಾಯವನ್ನಾಗಿ ಮಾಡಲು ಮತ್ತು ಧಾರ್ಮಿಕ ಜಗಳಗಳನ್ನು ಕೊನೆಗೊಳಿಸಿ ಎಲ್ಲರನ್ನು ಒಂದೇ ಧರ್ಮದಲ್ಲಿ ಒಟ್ಟುಸೇರಿಸಲು ಅಲ್ಲಾಹನು ಉದ್ದೇಶಿಸಿದ್ದ ಕಾಲ ಇದೇ ಆಗಿದೆ. ಇದೇ ಕಾಲದಲ್ಲಿ ಎಬ್ಬಿಸಲ್ಪಡುವ ಅಲೆಗಳ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳಿದ್ದಾನೆ. **ವನುಫಿಖ ಫಿಸ್ಸೂರಿ ಫಜಮಅನಾಹುಂ ಜಮ್‌ಅ**. ಈ ವಚನವನ್ನು ಮೊದಲಿನ ವಚನದೊಂದಿಗೆ ಸೇರಿಸಿ ಓದಿದರೆ ಇದರ ಅರ್ಥವೇನೆಂದರೆ, ಯಾವ ಕಾಲದಲ್ಲಿ ಲೋಕದ ಅನೇಕ ಧರ್ಮಗಳ ಗದ್ದಲವೇಳುವುದೋ ಮತ್ತು ಒಂದು ಧರ್ಮ ಮತ್ತೊಂದು ಧರ್ಮದ ಮೇಲೆ ಒಂದು ಅಲೆ ಮತ್ತೊಂದು ಅಲೆಯ ಮೇಲೆ ಬೀಳುವಂತೆ ಬಿದ್ದು ಒಂದು ಮತ್ತೊಂದನ್ನು ನಾಶಮಾಡಲು ಇಚ್ಛಿಸುವುದೋ ಆ ಕಾಲದಲ್ಲಿ ಆಕಾಶ ಮತ್ತು ಭೂಮಿಯ ದೇವನು ಈ ಅಲೆಗಳು ಏಳುವ ಕಾಲದಲ್ಲಿ, ತಮ್ಮ ಕೈಯಿಂದ ಭೌತಿಕವಾದ ಯಾವುದೇ ಸಹಾಯವಿಲ್ಲದೆ ಒಂದು ಹೊಸ ಜಮಾಅತನ್ನು ಉಂಟುಮಾಡುವನು. ಅದರಲ್ಲಿ ಕ್ರಿಯಾಶೀಲರಾದ ಮತ್ತು ಅದಕ್ಕೆ ಸರಿಹೊಂದುವ ಎಲ್ಲರನ್ನು ಸೇರಿಸುವನು. ಧರ್ಮವೆಂದರೆ ಏನೆಂದು ಆಗ ಜನರಿಗೆ ಗೊತ್ತಾಗುವುದು. ಅವರಲ್ಲಿ ಜೀವ ಮತ್ತು ಯಥಾರ್ಥ ಸನ್ಮಾರ್ಗದ ಚೈತನ್ಯವನ್ನು ಊದಲಾಗುವುದು. ಅಲ್ಲಾಹನ ಬಗ್ಗೆಗಿನ ದೈವಿಕ ಜ್ಞಾನದ ಪಾನೀಯವನ್ನು ಅವರಿಗೆ ಕುಡಿಸಲಾಗುವುದು. ಇಂದಿನಿಂದ ಹದಿಮೂರು ಶತಮಾನಗಳ ಹಿಂದೆ ಪವಿತ್ರ ಖುರ್‌ಆನ್ ಲೋಕದಲ್ಲಿ ಹರಡಿದ ಈ ಭವಿಷ್ಯವಾಣಿಗಳು ಈಡೇರದೇ ಲೋಕ ಕೊನೆಗೊಳ್ಳದು. ಸಕಲ ಸಮುದಾಯಗಳು ಒಂದೇ ಧರ್ಮದಲ್ಲಿ ಒಟ್ಟುಗೂಡಲ್ಪಡಲಿರುವ ಕೊನೆಗಾಲದ ಬಗ್ಗೆ ಅಲ್ಲಾಹನು ಕೇವಲ ಒಂದು ಕುರುಹು ಮಾತ್ರ ಹೇಳಿಲ್ಲ. ಬದಲಿಗೆ ಅನೇಕ ಕುರುಹುಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಬರೆಯಲಾಗಿದೆ. ಉದಾಹರಣೆಗೆ, ಆ ಕಾಲದಲ್ಲಿ ಹಲವಾರು ನದಿಗಳ ಹೊರಡುವಿಕೆ, ಅನೇಕ ಭೌತಿಕ ಜ್ಞಾನಗಳು ಬಯಲಾಗುವುದು, ಹಲವಾರು ಖನಿಜಗಳು ಭೂಮಿಯಿಂದ ತೆಗೆಯಲ್ಪಡುವುದು, ಆ ಕಾಲದ ಆಧುನಿಕ ಸವಲತ್ತುಗಳ ಕಾರಣ ಪುಸ್ತಕಗಳು ಬಹಳ ಹೆಚ್ಚಾಗಿ ಪ್ರಕಾಶನಗೊಳ್ಳುವುದು, ಆ ದಿನಗಳಲ್ಲಿ ಬರಲಿರುವ ಹೊಸ ರೀತಿಯ ಸವಾರಿಗಳ ಕಾರಣದಿಂದ ಒಂಟೆಗಳು ಉಪಯೋಗವಿಲ್ಲದಂತೆ ಆಗುವುದು ಮತ್ತು ಇದರಿಂದ ಪರಸ್ಪರ ಭೇಟಿ ಸುಲಭವಾಗುವುದು, ಲೋಕದಲ್ಲಿ ಪರಸ್ಪರ ಸಂಬಂಧ ಸುಲಭಗೊಳ್ಳುವುದು, ಪರಸ್ಪರರಿಗೆ ಸುಲಭವಾಗಿ ಮಾಹಿತಿಗಳನ್ನು ತಲುಪಿಸಲು ಸಾಧ್ಯವಾಗುವುದು, (ಇಂದಿನ ಕಾಲದಲ್ಲಿ ಇನ್ನೂ ಹೆಚ್ಚು ಸೌಲಭ್ಯಗಳು ಉಂಟಾಗುತ್ತಿವೆ). ಮತ್ತೊಂದು ಕುರುಹು ಏನೆಂದರೆ, ಆ ದಿನಗಳಲ್ಲಿ ಆಕಾಶದಲ್ಲಿ ಒಂದೇ ತಿಂಗಳಲ್ಲಿ ಸೂರ್ಯ – ಚಂದ್ರ ಗ್ರಹಣ ಉಂಟಾಗುವುದು, ಅನಂತರ ಭೂಮಿಯಲ್ಲಿ ಕಠಿಣವಾದ ಪ್ಲೇಗ್ ರೋಗ ಹರಡುವುದು. ಎಲ್ಲಿಯ ವರೆಗೆ ಎಂದರೆ, ಪ್ಲೇಗ್ ರೋಗ ಬರದ ಯಾವುದೇ ಪಟ್ಟಣ ಅಥವಾ ಗ್ರಾಮ ಇಲ್ಲದಂತೆ ಆಗುವುದು. ಲೋಕದಲ್ಲಿ ಅನೇಕ ಮರಣಗಳು ಸಂಭವಿಸುವುದು. ಲೋಕ ಖಾಲಿಯಾದಂತೆ ಆಗುವುದು. ಕೆಲವು ಗ್ರಾಮಗಳು ಸಂಪೂರ್ಣವಾಗಿ ನಾಶವಾಗುವುವು. ಅದರ ಹೇಳಹೆಸರು ಇಲ್ಲದಂತಾಗುವುದು. ಕೆಲವು ಗ್ರಾಮಗಳು ಒಂದು ಮಟ್ಟಿಗೆ ಶಿಕ್ಷೆಯ ಹಿಡಿತದಲ್ಲಿ ಇದ್ದುಕೊಂಡು ಅನಂತರ ರಕ್ಷಣೆ ಪಡೆಯುವುದು.ಆ ದಿನಗಳು ಅಲ್ಲಾಹನ ಕಠಿಣವಾದ ಕೋಪದ ದಿನಗಳಾಗಿರುವುವು. ಏಕೆಂದರೆ ಅವನ ಪ್ರವಾದಿಗಾಗಿ ಆ ಕಾಲದಲ್ಲಿ ಪ್ರಕಟವಾದ ಕುರುಹುಗಳು ಮತ್ತು ದೃಷ್ಟಾಂತಗಳನ್ನು ಜನರು ಅಂಗೀಕರಿಸಲಿಲ್ಲ. ಜನರ ಸುಧಾರಣೆಗಾಗಿ ಬಂದ ಅಲ್ಲಾಹನ ಪ್ರವಾದಿಯನ್ನು ಅವರು ನಿರಾಕರಿಸಿದರು ಮತ್ತು ಸುಳ್ಳುವಾದಿ ಎಂದು ಹೇಳಿದರು. ನಾವು ಇರುವ ಈ ಕಾಲದಲ್ಲಿ ಈ ಎಲ್ಲ ಚಿಹ್ನೆಗಳು ಈಡೇರಿದುವು. ಪವಿತ್ರ ಖುರ್‌ಆನಿನಲ್ಲಿ ಬರೆಯಲಾದ ಎಲ್ಲ ಲಕ್ಷಣಗಳು ಪ್ರಕಟವಾದ ಕಾಲದಲ್ಲಿ ನನ್ನ ಆಗಮನವಾದದ್ದು ಬುದ್ಧಿವಂತರಿಗೆ ಆಲೋಚಿಸಲು ಸ್ಪಷ್ಟವಾದ ಪುರಾವೆಯಾಗಿದೆ. (ಲೆಕ್ಚರ್ ಲಾಹೋರ್, ರೂಹಾನಿ ಖಝಾಈನ್, ಸಂಪುಟ–20, ಪುಟ–182–184)

ಹಝ್ರತ್ ಮಸೀಹ್ ಮೌಊದ್‌ರ ಕಾಲದಲ್ಲಿ ಈ ಎಲ್ಲ ಗುರುತುಗಳು ಈಡೇರಿದುವು ಎಂಬುದಕ್ಕೆ ಚರಿತ್ರೆ ಸಾಕ್ಷಿಯಾಗಿದೆ. ಅವುಗಳಲ್ಲಿ ಕೆಲವು ಈಗಲೂ ಈಡೇರುತ್ತಿವೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈ ಕಾಲಘಟ್ಟದ ಈಗಿನ ಸ್ಥಿತಿಯನ್ನು ನೋಡಿಕೊಂಡು, ಹಲವು ರೀತಿಯ ದುರಾಚಾರ, ಪಾಪ ಮತ್ತು ದುರ್ಮಾರ್ಗಗಳಿಂದ ಭೂಮಿ ತುಂಬಿರುವುದನ್ನು ನೋಡಿಕೊಂಡು ಅಲ್ಲಾಹನು ನನ್ನನ್ನು ಸತ್ಯದ ಪ್ರಚಾರ ಮತ್ತು ಸುಧಾರಣೆಗಾಗಿ ನಿಯೋಜಿಸಿದನು. ಈ ಕಾಲವು ಹದಿಮೂರನೇ ಶತಮಾನವನ್ನು ಮುಕ್ತಾಯಗೊಳಿಸಿ ಹದಿನಾಲ್ಕನೇ ಶತಮಾನವನ್ನು ಆರಂಭಿಸಿದ್ದ ಕಾಲವಾಗಿತ್ತು. ಆಗ ನಾನು ಈ ಆಜ್ಞೆಯನ್ನು ಅನುಸರಿಸುತ್ತಾ ಜನಸಾಮಾನ್ಯರನ್ನು ಪತ್ರ, ನೋಟಿಸ್‌ಗಳು ಮತ್ತು ಭಾಷಣಗಳ ಮೂಲಕ ಕರೆಯಲು ಶುರುಮಾಡಿದೆ. ಭೂಮಿಯಿಂದ ಹೊರಟುಹೋಗಿದ್ದ ವಿಶ್ವಾಸವನ್ನು ಪುನಃ ಸ್ಥಾಪಿಸಲು ಈ ಶತಮಾನದ ಆರಂಭದಲ್ಲಿ ಧರ್ಮೋದ್ಧಾರಕ್ಕಾಗಿ ಅಲ್ಲಾಹನ ಕಡೆಯಿಂದ ಬರಲಿದ್ದ ವ್ಯಕ್ತಿ ನಾನೇ ಆಗಿದ್ದೇನೆ ಎಂದು ಹೇಳಿದೆ. ಹೀಗೆ ಅಲ್ಲಾಹನಿಂದ ಶಕ್ತಿ ಪಡೆದು ಅವನ ಕೈಯ ಆಕರ್ಷಣೆಯಿಂದ ಲೋಕವನ್ನು ಒಳಿತು, ದೇವಭಕ್ತಿ, ಸನ್ಮಾರ್ಗದ ಕಡೆಗೆ ಆಕರ್ಷಿಸಲು ಮತ್ತು ಅವರ ವಿಶ್ವಾಸಪರವಾದ ಮತ್ತು ಕರ್ಮಪರವಾದ ತಪ್ಪುಗಳನ್ನು ದೂರಮಾಡಲು ನಾನು ಬಂದಿದ್ದೇನೆ ಎಂದು ಹೇಳಿದೆ. ಅನಂತರ ಈ ಸಮುದಾಯಕ್ಕಾಗಿ ಮೊದಲಿನಿಂದಲೇ ವಾಗ್ದಾನ ಮಾಡಲ್ಪಟ್ಟ ಮಸೀಹ್ ನಾನಾಗಿದ್ದೇನೆ ಎಂದು ಕೆಲವು ವರ್ಷಗಳು ದಾಟಿಹೋದಾಗ ದಿವ್ಯವಾಣಿ ಮೂಲಕ ನನ್ನೊಡನೆ ಸ್ಪಷ್ಟವಾಗಿ ಹೇಳಲಾಯಿತು. ಇಸ್ಲಾಮಿನ ಅವನತಿಯ ಕಾಲದಲ್ಲಿ ಮತ್ತು ಪಥಭ್ರಷ್ಟತೆ ಹರಡುವ ಸಮಯದಲ್ಲಿ ನೇರವಾಗಿ ಅಲ್ಲಾಹನಿಂದ ಸನ್ಮಾರ್ಗವನ್ನು ಪಡೆಯುವವನು ಮತ್ತು ದಿವ್ಯಜ್ಞಾನವನ್ನು ಪುನಃ ಮನುಷ್ಯರ ಮುಂದೆ ಇರಿಸುವವನು ಹಾಗೂ ಯಾವ ವ್ಯಕ್ತಿಯ ಬಗ್ಗೆ ಹಝ್ರತ್ ಪೈಗಂಬರ್(ಸ) ಹದಿಮೂರು ಶತಮಾನಗಳ ಹಿಂದೆ ಸುವಾರ್ತೆ ನೀಡಿದ್ದರೋ ಆ ವ್ಯಕ್ತಿ ನಾನೇ ಆಗಿರುವೆನು ಎಂದು ನನಗೆ ಅಲ್ಲಾಹನು ತಿಳಿಸಿದನು. ಇದರ ಬಗ್ಗೆ ಅಲ್ಲಾಹನಿಂದ ಸ್ಪಷ್ಟವಾದ ಮತ್ತು ನಿರಂತರವಾದ ಸಂಭಾಷಣೆ ಮತ್ತು ಸಂಬೋಧನೆಗಳು ಲಭಿಸಿದುವು. ಹೀಗೆ ಸಂಶಯಕ್ಕೆ ಯಾವುದೇ ಎಡೆಯಿಲ್ಲದಂತಾಯಿತು. ಪ್ರತಿಯೊಂದು ದಿವ್ಯವಾಣಿ ಉಕ್ಕಿನಿಂದ ತಯಾರಿಸಿದ ಆಣಿಯಂತೆ ನನ್ನ ಹೃದಯದಲ್ಲಿ ನುಗ್ಗುತ್ತಿತ್ತು. ಈ ಎಲ್ಲ ದಿವ್ಯವಾಣಿಗಳು ಮಹತ್ತಾದ ಭವಿಷ್ಯವಾಣಿಗಳಿಂದ ಕೂಡಿದ್ದುವು ಆಗಿದ್ದುವು ಮತ್ತು ಅವು ಸ್ಪಷ್ಟವಾಗಿ ಈಡೇರುತ್ತಿದ್ದುವು. ಅವುಗಳ ಆಧಿಕ್ಯ, ನಿರಂತರತೆ, ಅಸಾಮಾನ್ಯ ಶಕ್ತಿಯಿಂದ ಇವು ಪವಿತ್ರ ಖುರ್‌ಆನಿನ ವಚನಗಳನ್ನು ಅವತೀರ್ಣಗೊಳಿಸಿದ ಏಕನಾದ ಅಲ್ಲಾಹನ ವಾಣಿಗಳೇ ಅಗಿವೆ ಎಂದು ಸಮ್ಮತಿಸಲು ಸಾಕಾಗಿತ್ತು. ನಾನು ಇಲ್ಲಿ ತೌರಾತ್ ಮತ್ತು ಇಂಜೀಲಿನ ಹೆಸರುಗಳನ್ನು ಹೇಳುತ್ತಿಲ್ಲ. ಏಕೆಂದರೆ ತೌರಾತ್ ಮತ್ತು ಇಂಜೀಲಿನ ವಚನಗಳು ಬದಲಾದುವು. ಈಗ ಆ ಗ್ರಂಥಗಳನ್ನು ಅಲ್ಲಾಹನ ವಾಣಿಯೆಂದು ಹೇಳಲು ಸಾಧ್ಯವಲ್ಲ. ಒಟ್ಟಿನಲ್ಲಿ ದಿವ್ಯವಾಣಿ ನನ್ನ ಮೇಲೆ ಅವತೀರ್ಣವಾಯಿತು. ಅವು ಎಷ್ಟು ಖಚಿತ ಮತ್ತು ಖಂಡಿತವಾಗಿತ್ತು ಎಂದರೆ, ಅದರ ಮೂಲಕ ನಾನು ಅಲ್ಲಾಹನನ್ನು ಪಡೆದೆ. ಆ ದಿವ್ಯವಾಣಿ ಆಕಾಶೀಯ ದೃಷ್ಟಾಂತಗಳ ಮೂಲಕ ದೃಢಜ್ಞಾನದ ಮಟ್ಟವನ್ನು ತಲುಪಿತ್ತು ಎಂದು ಮಾತ್ರವಲ್ಲ, ಬದಲಾಗಿ ಪವಿತ್ರ ಖುರ್‌ಆನಿನ ವಚನಗಳ ಪ್ರಕಾರ ಅವು ಸಾಬೀತಾದುವು. ನನಗೆ ಲಭಿಸಿದ ದಿವ್ಯವಾಣಿಗಳನ್ನು ಸತ್ಯಪಡಿಸಲು ಮಳೆಯಂತೆ ಆಕಾಶೀಯ ದೃಷ್ಟಾಂತಗಳು ವರ್ಷಿಸಿದುವು. ಆ ಮಹ್‌ದಿಯ ಕಾಲದಲ್ಲಿ ರಮಝಾನ್ ತಿಂಗಳಲ್ಲಿ ಸೂರ್ಯ–ಚಂದ್ರ ಗ್ರಹಣವಾಗುವುದು ಎಂದು

ಬರೆಯಲಾದಂತೆ ಅದೇ ದಿನಗಳಲ್ಲಿ ರಮಝ್ಹಾನನ ತಿಂಗಳಲ್ಲಿ ಸೂರ್ಯ – ಚಂದ್ರ ಗ್ರಹಣ ಸಹ ಉಂಟಾಯಿತು. ಪವಿತ್ರ ಖುರ್‌ಆನಿನಲ್ಲಿ ಭವಿಷ್ಯನುಡಿಯಲಾದಂತೆ ಅದೇ ದಿನಗಳಲ್ಲಿ ಪಂಜಾಬಿನಲ್ಲಿ ಪ್ಲೇಗ್ ರೋಗ ಬಹಳ ಹೆಚ್ಚಾಗಿ ಹರಡಿತು. ಆ ದಿನಗಳಲ್ಲಿ ಸಾಂಕ್ರಾಮಿಕ ರೋಗ ಹರಡುವುದು ಎಂದು ಹಿಂದಿನ ಪ್ರವಾದಿಗಳು ಸಹ ಭವಿಷ್ಯ ನುಡಿದ್ದಿದ್ದರು. ಯಾವುದೇ ಗ್ರಾಮ ಅಥವಾ ಪಟ್ಟಣ ಈ ರೋಗದಿಂದ ರಕ್ಷಣೆ ಪಡೆಯಲಾರವು ಎಂದು ಹೇಳಲಾಗಿತ್ತು. ಹೀಗೆಯೇ ಆಯಿತು ಮತ್ತು ಆಗುತ್ತಿವೆ. ಈ ದೇಶದಲ್ಲಿ ಪ್ಲೇಗ್ ರೋಗದ ಯಾವುದೇ ಕುರುಹು ಬರುವುದಕ್ಕೆ ಇಪ್ಪತ್ತು ವರ್ಷಗಳ ಹಿಂದೆಯೇ ನನಗೆ ಇದರ ಹರಡುವಿಕೆಯ ಮಾಹಿತಿಯನ್ನು ಅಲ್ಲಾಹನು ನೀಡಿದ್ದನು.

(ತಝ್ಕಿರತುಶ್ಶಹಾದತೈನ್, ರೂಹಾನ ಖಝಾಈನ್ ಸಂಪುಟ–20, ಪುಟ–3–4)

ಹಝ್ರತ್ ಮಸೀಹ್ ಮೌಊದ್(ಅ) ತನ್ನ ವಾದದ ಕುರಿತು ಹೇಳುತ್ತಾರೆ:

"ನಾನು ಸರಿಯಾದ ಸಮಯದಲ್ಲಿ ಆಗಮಿಸಿದ ವ್ಯಕ್ತಿಯಾಗಿರುವೆನು. ನನ್ನ ಕಾಲದಲ್ಲಿ ಸೂರ್ಯ–ಚಂದ್ರಗ್ರಹನ ಉಂಟಾಗುವುದು ಎಂದು ಪವಿತ್ರ ಖುರ್‌ಆನ್, ಹದೀಸ್, ಇಂಜೀಲ್ ಮತ್ತು ಇತರ ನಬಿಗಳು ಹೇಳಿದಂತೆ ಸೂರ್ಯ– ಗ್ರಹಣವುಂಟಾಯಿತು. ಎಲ್ಲ ಪ್ರವಾದಿಗಳ ಮತ್ತು ಪವಿತ್ರ ಖುರ್‌ಆನಿನ ಭವಿಷ್ಯವಾಣಿಯ ಪ್ರಕಾರ ನನ್ನ ಕಾಲದಲ್ಲಿ ಈ ದೇಶದಲ್ಲಿ ಅಸಾಮಾನ್ಯವಾದ ರೀತಿಯಲ್ಲಿ ಪ್ಲೇಗ್ ರೋಗ ಹರಡಿತು. ನನ್ನ ಕಾಲದಲ್ಲಿ ಸಹೀಹಾದ ಹದೀಸ್‌ಗಳಲ್ಲಿ ಹೇಳಲಾದಂತೆ ಹಜ್ಜ್ ಮಾಡುವುದರಿಂದ ತಡೆಯಲಾಯಿತು. ಮಸೀಹ್ ಇಬ್ನು ಮರ್‌ಯಮ್‌ನ ಕಾಲದಲ್ಲಿ ಪ್ರಕಟವಾದ ನಕ್ಷತ್ರ ನನ್ನ ಕಾಲದಲ್ಲಿ ಪ್ರಕಟವಾಯಿತು. ನನ್ನ ಕಾಲದಲ್ಲಿ ರೈಲು ಜಾರಿಯಾಯಿತು ಮತ್ತು ಒಂಟೆಗಳು ಉಪಯೋಗವಿಲ್ಲದಂತಾಯಿತು. ಸಮೀಪದಲ್ಲೇ ಮಕ್ಕ ಮತ್ತು ಮದೀನದ ಮಧ್ಯ ರೈಲು ಜಾರಿಯಾಗಿ ಎಲ್ಲ ಒಂಟೆಗಳು ಉಪಯೋಗವಿಲ್ಲದಂತೆ ಆಗುವ ಕಾಲ ಬರುವುದು. ಹದಿಮೂರು ವರ್ಷಗಳಿಂದ ಯಾತ್ರೆಗೆ ಉಪಯೋಗಿಸಲಾಗುತ್ತಿದ್ದ ಒಂಟೆಗಳು ಆಗ ವ್ಯರ್ಥವಾಗುವುದು. ಈಗ ಅಲ್ಲಿ ರೈಲು ಮಾರ್ಗದ ಮೂಲಕ ಸಂಪರ್ಕ ಉಂಟಾಗಿದೆ. ಆ ಸಮಯದಲ್ಲಿ ಒಂಟೆಗಳ ಬಗ್ಗೆ **ಲಯುತ್‌ರಕುನ್ನಲ್ ಖಲಾಸ ಫಲಾ ಯಸ್‌ಅ ಅಲೈಹ** ಎಂಬ ಸಹೀಹ್ ಮುಸ್ಲಿಮ್‌ನಲ್ಲಿ ಬಂದ ಹದೀಸ್ ಈಡೇರುವುದು. ಎಂದರೆ ಮಸೀಹ್ ಮೌಊದ್‌ರ ಕಾಲದಲ್ಲಿ ಒಂಟೆಗಳು ಉಪಯೋಗವಿಲ್ಲದಂತೆ ಆಗುವುದು ಮತ್ತು ಯಾರೂ ಅವುಗಳ ಮೇಲೆ ಯಾತ್ರೆ ಮಾಡಲಾರರು. ಯಾರ ಕೈಯಲ್ಲಿ ನೂರಾರು ದೃಷ್ಟಾಂತಗಳು ಪ್ರಕಟವಾಯಿತೋ ಆ ವ್ಯಕ್ತಿ ನಾನಾಗಿರುವೆನು. ದೃಷ್ಟಾಂತಗಳನ್ನು ತೋರಿಸುವುದರಲ್ಲಿ ನನ್ನೊಡನೆ ಹೋರಾಡಿ ಜಯಿಸಬಲ್ಲ ಯಾವನಾದರೂ ವ್ಯಕ್ತಿ ಭೂಮಿಯಲ್ಲಿದ್ದಾನೆಯೇ? ಇಲ್ಲಿಯ ವರೆಗೆ ಎರಡು ಲಕ್ಷಗಳಿಗಿಂತ ಅಧಿಕ ದೈವಿಕ ಕುರುಹುಗಳು ನನ್ನ ಕೈಗಳಿಂದ ಪ್ರಕಟವಾಗಿವೆ ಎಂದು ಯಾರ ಕೈಯಲ್ಲಿ ನನ್ನ ಜೀವವಿದೆಯೋ ಅವನ ಆಣೆಹಾಕಿಕೊಂಡು ನಾನು ಹೇಳುತ್ತೇನೆ. ಹಝ್ರತ್ ಪೈಗಂಬರ್(ಸ) ಬಂದು ನನ್ನ ಸತ್ಯತೆಯನ್ನು ರುಜುವಾತು ಮಾಡಿದ್ದಾಗಿ ಹತ್ತು ಸಾವಿರದಷ್ಟು ಅಥವಾ ಅದಕ್ಕಿಂತ ಹೆಚ್ಚಿನ ಜನರು ಕನಸಿನಲ್ಲಿ ಕಂಡರು. ನಾನು ಅಲ್ಲಾಹನ ಕಡೆಯಿಂದ ಆಗಿರುವೆನು ಎಂದು ಮೂರು ನಾಲ್ಕು ಲಕ್ಷದಷ್ಟು ಶಿಷ್ಯರನ್ನು ಹೊಂದಿರುವ ಈ ದೇಶದ ಕೆಲವು ದೈವಿಕ ಜನರಿಗೆ ಕನಸಿನಲ್ಲಿ ತೋರಿಸಲಾಯಿತು. ಅವರಲ್ಲಿ ಕೆಲವರು ನನ್ನ ಆಗಮನಕ್ಕೆ ಮೂವತ್ತು ವರ್ಷಗಳ ಹಿಂದೆಯೇ ಮೃತಪಟ್ಟಿದ್ದರು. ಉದಾಹರಣೆಗೆ ಈಸಾ ಖಾದಿಯಾನಿನಲ್ಲಿ ಜನಿಸಿದೆ ಮತ್ತು ಅವರು ಲುಧಿಯಾನಕ್ಕೆ ಬರುವರು ಎಂದು ಲುಧಿಯಾನದ ಗುಲಾಬ್‌ಶಾಹ್ ಎಂಬವರು ಜಮಾಲ್‌ಪೂರಿನ ಮಿಯಾ ಕರೀಂ ಬಕ್ಷ್‌ರಿಗೆ ಮುಂಚಿತವಾಗಿಯೇ ತಿಳಿಸಿದ್ದರು. ಮಿಯಾ ಕರೀಂ ಬಕ್ಷ್ ಸಾಹಿಬ್‌ರು ಒಬ್ಬ ಸಾತ್ವಿಕ, ಏಕದೇವವಿಶ್ವಾಸಿಯಾದ ಒಬ್ಬ ವೃದ್ಧ ವ್ಯಕ್ತಿಯಾಗಿದ್ದರು. ಅವರು ಲುಧಿಯಾನದಲ್ಲಿ ನನ್ನನ್ನು ಭೇಟಿಯಾದರು ಮತ್ತು ಈ ಎಲ್ಲ ಭವಿಷ್ಯವಾಣಿಯನ್ನು ನನಗೆ ಹೇಳಿದರು. ಆದ್ದರಿಂದ ಮೌಲವಿಗಳು ಅವರಿಗೆ ತುಂಬ ಕಷ್ಟವನ್ನು ಕೊಟ್ಟರು. ಆದರೆ ಅವರು ಅದರ ಪರಿವೆ ಮಾಡಲಿಲ್ಲ. ಈಸಾ ಇಬ್ನು ಮರ್‌ಯಂ ಜೀವಂತವಾಗಿಲ್ಲ, ಮೃತಪಟ್ಟಿರುವರು, ಅವರು ಲೋಕಕ್ಕೆ ಮರಳಿಬರಲಾರರು ಎಂದು ಗುಲಾಬ್‌ಶಾಹ್ ಹೇಳಿದ್ದಾಗಿ ಅವರು ನನ್ನೊಡನೆ ಹೇಳಿದರು. ಈ ಸಮುದಾಯಕ್ಕೆ ಮಿರ್ಝಾ ಗುಲಾಂ ಅಹ್ಮದ್ ಈಸಾ ಆಗಿರುವರು. ಅವರನ್ನು ಅಲ್ಲಾಹನು ತನ್ನ ವಿಧಿ ಮತ್ತು ಯುಕ್ತಿ ಪ್ರಕಾರ ಮೊದಲ ಈಸಾರಂತೆ ಮಾಡಿದ್ದಾನೆ. ಆಕಾಶದಲ್ಲಿ ಅವರ ಹೆಸರು ಈಸಾ ಎಂದು ಇರಿಸಲಾಗಿದೆ ಎಂದು ಅವರು ಹೇಳಿದರು. ಗುಲಾಬ್‌ಶಾಹ್ ಹೇಳಿದ್ದರು: ಹೇ ಕರೀಂಬಕ್ಷ್, ಆ ಈಸಾ ಪ್ರಕಟವಾಗುವಾಗ, ಮೌಲವಿಗಳು ಬಹಳ ಕಠಿಣವಾದ ರೀತಿಯಲ್ಲಿ ಅವರನ್ನು ವಿರೋಧಿಸುವರು. ಆದರೆ ಅವರು ವಿಫಲರಾಗುವರು. ಪವಿತ್ರ ಖುರ್‌ಆನಿನ ಬಗ್ಗೆ ಹೇಳಲಾಗುತ್ತಿರುವ ತಪ್ಪು ಸಂಗತಿಗಳನ್ನು ದೂರಮಾಡಲು ಮತ್ತು ಪವಿತ್ರ ಖುರ್‌ಆನಿನ ಸರಿಯಾದ ಮುಖವನ್ನು ಲೋಕಕ್ಕೆ ತೋರಿಸಲು ಅವರು ಬರುವರು.

(ತಝ್ಕಿರತುಶ್ಶಹಾದತೈನ್, ರೂಹಾನಿ ಖಝಾಈನ್ ಸಂಪುಟ–20, ಪುಟ–35–37)

ಈ ಶಿಷ್ಯನು ಆ ಈಸಾರನ್ನು ಕಾಣುವ ಕಾಲದ ವರೆಗೆ ಜೀವಂತವಾಗಿರುವರು ಎಂಬ ಸೂಚನೆಯೂ ಈ ಭವಿಷ್ಯವಾಣಿಯಲ್ಲಿ ಇತ್ತು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನೆನಪಿಡಿರಿ, ಅಲ್ಲಾಹನ ಹೆಸರು ಗಫೂರ್ ಎಂದೂ ಇದೆ. ಹೀಗಿರುವಾಗ ಪಶ್ಚಾತ್ತಾಪ ಮಾಡುವವರನ್ನು ಅಲ್ಲಾಹನೇ ಕ್ಷಮಿಸದೇ ಇರುವನೇ? ಈ ರೀತಿಯ ತಪ್ಪುಗಳು ಸಮುದಾಯದಲ್ಲಿ ಉಂಟಾಗಿದೆ. ಈ ತಪ್ಪುಗಳಲ್ಲಿ ಒಂದು ಜಿಹಾದಿನ ಬಗ್ಗೆ ಇರುವ ತಪ್ಪಾದ ವಿಶ್ವಾಸ. ನನಗೆ ಅಚ್ಚರಿಯಾಗುತ್ತದೆ, ಜಿಹಾದ್ ಮಾಡುವುದು ಈಗ ನಿಷಿದ್ಧವೆಂದು ನಾನು ಹೇಳುವಾಗ ಕೋಪಗೊಳ್ಳುತ್ತಾರೆ. ರಕ್ತಸಿಕ್ತ ಮಹ್‌ದಿಯ ಹದೀಸ್‌ಗಳು ಅಪಾಯಕಾರಿಯಾಗಿದೆ ಎಂದು ನೀವೇ ಸಮ್ಮತಿಸುತ್ತೀರಿ. ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಈ ವಿಷಯದಲ್ಲಿ ಪುಸ್ತಕವನ್ನು ಬರೆದಿದ್ದಾರೆ. ಈ ಹದೀಸ್ ಅಪಾಯಕಾರಿಯೆಂದು ಸಮ್ಮತಿಸಿದ್ದಾರೆ. ಮಿಯಾ ನಝೀರ್ ಹುಸೈನ್ ದೆಹಲವಿಯ ಅಭಿಪ್ರಾಯ ಸಹ ಇದೇ ಆಗಿದೆ. ಈಗ ಕೆಲವು ಪಂಡಿತರು ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ಹದೀಸನ್ನು ಪ್ರಬಲವೆಂದು ಅವರು ಭಾವಿಸುವುದಿಲ್ಲ. ಹೀಗಿರುವಾಗ ನನ್ನನ್ನು ಸುಳ್ಳುಗಾರ ಎಂದು ಏಕೆ ಹೇಳಲಾಗುತ್ತದೆ. ಸತ್ಯವೇನೆಂದರೆ, ಜಗಳಗಳನ್ನು ಕೊನೆಗೊಳಿಸುವುದು ಮತ್ತು ಲೇಖನಿ, ದುಆ ಹಾಗೂವಿಶೇಷವಾದ ಕಾಳಜಿಯಿಂದ ಇಸ್ಲಾಮಿಗೆ ಮೇಲುಗೈ ಉಂಟಾಗುವಂತೆ ಮಾಡುವುದೇ ಮಸೀಹ್ ಮೌಊದ್‌ರ ಕೆಲಸವಾಗಿದೆ. ಇಂದು ಅವರನ್ನು ನಂಬಿರುವ ನಮ್ಮ ಕೆಲಸವು ಲೇಖನಿ, ದುಆ ಮತ್ತು ಶ್ರದ್ಧೆಯೇ ಆಗಿವೆ. ಜನರಿಗೆ ಈ ಸಂಗತಿ ಮನವರಿಕೆಯಾಗುವುದಿಲ್ಲ ಮತ್ತು ಭೌತಿಕತೆಯ ಕಡೆಗೆ ಇರುವಂತಹ ಗಮನ ಧರ್ಮದ ಕಡೆಗೆ ಇಲ್ಲವೆಂಬುದು ದುಃಖಕರ. ನಾವು ಸಹ ನಮ್ಮ ಸ್ಥಿತಿಗತಿಗಳ ಬಗ್ಗೆ ಅವಲೋಕಿಸಬೇಕು. ನಂಬಿದ ನಂತರ ನಮ್ಮ ಗಮನ ಪುನಃ ಲೋಕದ ಕಡೆಗೆ ಬಹಳವಾಗಿ ಹೋಗುತ್ತಿದೆಯೇ ಎಂದು ನೋಡಬೇಕು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಲೋಕದ ಮಾಲಿನ್ಯ ಮತ್ತು ಕೊಳಕಿನಲ್ಲಿ ಮುಳುಗಿಕೊಂಡು ಪವಿತ್ರ ಖುರ್‌ಆನಿನ ಪರಿಜ್ಞಾನವನ್ನು ಪಡೆಯಬಹುದು ಎಂದು ಹೇಗೆ ಪ್ರತೀಕ್ಷೆ ಇರಿಸಲು ಸಾಧ್ಯ? **ಲಾ ಯಮುಸ್ಸುಹುಲ್ ಮುತಹ್ಹರೂನ್** ಎಂದು ಪವಿತ್ರ ಖುರ್‌ಆನಿನಲ್ಲಿ ಸ್ಪಷ್ಟವಾಗಿ ಬರೆಯಲಾಗಿದೆ. ಎಂದರೆ, ಪರಿಶುದ್ಧರಲ್ಲದವರು ಅದರ ಅರ್ಥವನ್ನು ಅರಿಯಲಾರರು. ನನ್ನ ಆಗಮನದ ಉದ್ದೇಶವೇನೆಂಬ ಸಂಗತಿಯನ್ನು ಮನಸಾರೆ ಕೇಳಿರಿ. ಇಸ್ಲಾಮಿನ ಪುನರುದ್ಧಾರ ಮತ್ತು ಸಹಾಯ ಮಾಡುವುದೇ ನನ್ನ ಆಗಮನದ ಉದ್ದೇಶವಾಗಿದೆ. ಹೊಸ ಶರೀಅತ್ ಅಥವಾ ಹೊಸ ಆದೇಶ ನೀಡಲು ಬಂದಿದ್ದೇನೆ ಎಂದು ಇದರಿಂದ ಅರ್ಥ ಮಾಡಿಕೊಳ್ಳಬಾರದು. ಅಥವಾ ಹೊಸ ಗ್ರಂಥ ಅವತೀರ್ಣವಾಗುವುದು ಎಂದಲ್ಲ ಇದರ ಅರ್ಥ. ಖಂಡಿತವಲ್ಲ, ಹೀಗೆ ಚಿಂತಿಸುವವನು ನನ್ನ ಪ್ರಕಾರ ದಾರಿಗೆಟ್ಟವನು ಮತ್ತು ಅಧರ್ಮಿಯಾಗಿರುವನು. ಹಝ್ರತ್ ಪೈಗಂಬರರ(ಸ) ಆಗಮನದೊಂದಿಗೆ ಶರೀಅತ್ ಮತ್ತು ಪ್ರವಾದಿತ್ವ ಕೊನೆಗೊಂಡಿದೆ. ಈಗ ಹೊಸ ಶರೀಅತ್ ಬರಲಿಕ್ಕಿಲ್ಲ. ಪವಿತ್ರ ಖುರ್‌ಆನ್ ಖಾತಮುಲ್‌ಕುತುಬ್ ಆಗಿದೆ. ಇದರಲ್ಲಿ ಒಂದು ಚುಕ್ಕಿಯನ್ನು ಕೂಡ ಹೆಚ್ಚುಕಮ್ಮಿ ಮಾಡಲು ಎಡೆಯಿಲ್ಲ. ಆದರೆ ಹಝ್ರತ್ ಪೈಗಂಬರರ(ಸ) ಅನುಗ್ರಹಗಳು, ವರದಾನಗಳು, ಪವಿತ್ರ ಖುರ್‌ಆನಿನ ಶಿಕ್ಷಣ ಮತ್ತು ನಿರ್ದೇಶನದ ಫಲಗಳು ಕೊನೆಗೊಂಡಿಲ್ಲ. ಅವು ಪ್ರತಿ ಕಾಲದಲ್ಲೂ ತಾಜಾವಾಗಿ ಇರುವುದು. ಈ ಅನುಗ್ರಹಗಳ ಮತ್ತು ಕೃಪೆಗಳ ಸಬೂತಿಗಾಗಿ ಅಲ್ಲಾಹನು ನನ್ನನ್ನು ಎಬ್ಬಿಸಿದ್ದಾನೆ. ಇಸ್ಲಾಮಿನ ಸ್ಥಿತಿ ಈಗ ರಹಸ್ಯವಲ್ಲ. ಎಲ್ಲ ರೀತಿಯ ಅವನತಿಗಳು ಮತ್ತು ದೌರ್ಬಲ್ಯಗಳಿಗೆಮುಸ್ಲಿಮರು ತುತ್ತಾಗಿದ್ದಾರೆ ಎಂದು ಒಮ್ಮತಾಭಿಪ್ರಾಯದಿಂದ ಸಮ್ಮತಿಸಲಾಗಿದೆ. ಎಲ್ಲ ರೀತಿಯಲ್ಲೂ ಅವರು ಬೀಳುತ್ತಿದ್ದಾರೆ. (ಇಂದಂತು ಇನ್ನೂ ಹೀನಾಯ ಸ್ಥಿತಿಯಾಗಿದೆ ಎಂದು ನಾವು ನೋಡುತ್ತಿದ್ದೇವೆ) ಅವರ ನಾಲಗೆಯಲ್ಲಿ ಇಸ್ಲಾಂ ಇದೆ. ಹೃದಯದಲ್ಲಿ ಇಲ್ಲ. ಇಸ್ಲಾಂ ಅನಾಥವಾಗಿದೆ. ಇಂತಹ ಸ್ಥಿತಿಯಲ್ಲಿ ಇಸ್ಲಾಮಿನ ನೆರವು ಮತ್ತು ಮುಸ್ಲಿಮರ ನೇತೃತ್ವವನ್ನು ವಹಿಸಲು ಮುಸ್ಲಿಮರ ಅವನತಿ ಮತ್ತು ದೌರ್ಬಲ್ಯದ ಕಾಲಘಟ್ಟದಲ್ಲಿ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ. ಅವನು ನನ್ನನ್ನು ಅವನ ವಾಗ್ದಾನದ ಪ್ರಕಾರ ಕಳುಹಿಸಿದ್ದಾನೆ. ಏಕೆಂದರೆ, ಅವನು ಹೀಗೆ ಹೇಳಿದ್ದನು: **ಇನ್ನಾ ನಹ್‌ನು ನಝ್ಝಲ್‌ನಝ್ಝಿಕ್‌ರ ವ ಇನ್ನಾ ಲಹೂ ಲಹಾಫಝೂನ್**. ಈ ಸಮಯದಲ್ಲಿ ಸಹಾಯ, ನೆರವು ಮತ್ತು ಸಂರಕ್ಷಣೆ ಮಾಡದೇ ಇದ್ದರೆ, ಅದಕ್ಕಾಗಿ ಬೇರೆ ಯಾವ ಸಮಯ ಬರುವುದು? ಬದ್ರ್ ಯುದ್ಧದ ಸಂದರ್ಭದಲ್ಲಿ ಉಂಟಾದ ಸ್ಥಿತಿಯೇ ಈಗ ಹದಿನಾಲ್ಕನೇ ಶತಮಾನದಲ್ಲಿ ಉಂಟಾಗಿದೆ. ಬದ್ರ್ ಯುದ್ಧದ ಬಗ್ಗೆ ಅಲ್ಲಾಹನು ಹೇಳುತ್ತಾನೆ. **ವಲಖದ್ ನಸರಕುಮುಲ್ಲಾಹು ಬಿಬದರಿನ್ ವ ಅಂತುಂ ಅಧಿಲ್ಲ**. ಎಂದರೆ ಬದ್ರ್ ಯುದ್ಧದಲ್ಲಿ ನೀವು ದುರ್ಬಲರಾಗಿದ್ದಾಗ ಅಲ್ಲಾಹನು ನಿಮ್ಮ ನೆರವಿಗೆ ಬಂದನು. ಇದರಲ್ಲೂ ಸತ್ಯದಲ್ಲಿ ಒಂದು ಭವಿಷ್ಯವಾಣಿ ಇತ್ತು. ಎಂದರೆ ಹದಿನಾಲ್ಕನೇ ಶತಮಾನದಲ್ಲಿ ಇಸ್ಲಾಂ

ದುರ್ಬಲಗೊಳ್ಳುವಾಗ ಅಲ್ಲಾಹನ ಸಂರಕ್ಷಣೆಯ ವಾಗ್ದಾನ ಪ್ರಕಾರ ಅದರ ಸಹಾಯವನ್ನು ಅಲ್ಲಾಹನು ಮಾಡುವನು. ಹೀಗಿರುವಾಗ ಅಲ್ಲಾಹನು ಇಸ್ಲಾಮಿನ ಸಂರಕ್ಷಣೆ ಮತ್ತು ಸಹಾಯ ಮಾಡುವಾಗ ನೀವು ಏಕೆ ಅಚ್ಚರಿಗೊಳ್ಳುತ್ತೀರಿ?

ವಿರೋಧಿಗಳ ಕೊಳಕು ಮಾತಿನ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಹೇಳುತ್ತಾರೆ: ನನ್ನನ್ನು ದಜ್ಜಾಲ್ ಮತ್ತು ಕಝ್ಝಾಬ್ ಎಂದು ಕರೆಯುವುದರಿಂದ ಮತ್ತು ನನ್ನ ಮೇಲೆ ದೋಷಾರೋಪಗಳನ್ನು ಹೊರಿಸುವುದರಿಂದ ನನಗೆ ದುಃಖವಿಲ್ಲ. ಹಿಂದಿನ ಪ್ರವಾದಿಗಳೊಂದಿಗೆ ವರ್ತಿಸಿದ ರೀತಿ ನನ್ನೊಂದಿಗೆ ಕೂಡ ಖಂಡಿತ ಆಗಲೇ ಬೇಕಿತ್ತು. ನಮ್ಮ ನೇತಾರ ಮತ್ತು ಸರದಾರರಾದ ಹಝ್ರತ್ ಪೈಗಂಬರರ ಹಾದಿಯಲ್ಲಿ ಬಂದಿದ್ದ ವಿಪತ್ತುಗಳು ಮತ್ತು ಕಷ್ಟತೆಗಳ ಒಂದಂಶ ಕೂಡ ನನಗೆ ಬಂದಿಲ್ಲ. ಅದರ ಉದಾಹರಣೆ ಬೇರೆ ಯಾವ ಪ್ರವಾದಿಗಳ ಚರಿತ್ರೆಯಲ್ಲೂ ಕಾಣಲು ಸಾಧ್ಯವಲ್ಲ. ಹಝ್ರತ್ ಪೈಗಂಬರ್(ಸ) ಇಸ್ಲಾಮಿಗಾಗಿ ಸಹಿಸಿದ ದುಃಖದ ಬಗ್ಗೆ ಬರೆಯಲು ಹೇಳಲು ಸಾಧ್ಯವಲ್ಲ. ಅವರು ಎಂತಹ ಮಹೋನ್ನತರಾದ ಪ್ರವಾದಿಯಾಗಿದ್ದರು ಎಂದು ಇದರಿಂದಲೇ ಗೊತ್ತಾಗುತ್ತದೆ. ಅಲ್ಲಾಹನ ಸಹಾಯ ಅವರೊಂದಿಗೆ ಇರುತ್ತಿರದಿದ್ದರೆ ಆ ಕಷ್ಟತೆಗಳ ಪರ್ವತವನ್ನು ಎತ್ತಲು ಸಾಧ್ಯವಾಗುತ್ತಿರಲಿಲ್ಲ. ಬೇರೆ ಪ್ರವಾದಿಯಾಗಿದ್ದರೆ ಅವರಿಂದಲೂ ಅದು ಸಾಧ್ಯವಾಗುತ್ತಿರಲಿಲ್ಲ. ಆದರೆ ಇಷ್ಟೆಲ್ಲ ವಿಪತ್ತುಗಳೊಂದಿಗೆ ಮತ್ತು ದುಃಖಗಳೊಂದಿಗೆ ಹಝ್ರತ್ ಪೈಗಂಬರ್(ಸ) ಹರಡಿದ ಇಸ್ಲಾಮಿನ ಈಗಿನ ಸ್ಥಿತಿಯ ಬಗ್ಗೆ ನಾನು ಏನು ಹೇಳಲಿ?

(ಲೆಕ್ಚರ್ ಲುಧಿಯಾನ, ರೂಹಾನಿ ಖಝಾಈನ್, ಸಂಪುಟ–20, ಪುಟ–279–280)

ಮುಸ್ಲಿಮರು ಇಸ್ಲಾಮನ್ನು ಯಾವ ಸ್ಥಿತಿಗೆ ತಲುಪಿಸಿದ್ದಾರೆ? ಅದರೊಂದಿಗೆ ಅಲ್ಲಾಹನ ಕಡೆಯಿಂದ ಇಸ್ಲಾಮಿನ ಪುನರುದ್ಧಾರಕ್ಕಾಗಿ ಬಂದ ವ್ಯಕ್ತಿಯನ್ನು ನಂಬಲು ಕೂಡ ತಯಾರಾಗುತ್ತಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ:

ಇಸ್ಲಾಮನ್ನು ವಿಜಯಿಸುವ ಮತ್ತು ಇತರ ಧರ್ಮಗಳ ಮೇಲೆ ಮೇಲುಗೈ ಸಾಧಿಸುವಂತಹ ಮಾರ್ಗವನ್ನು ನಾನು ಸಂಪೂರ್ಣವಾಗಿ ನನ್ನ ಬರಹಗಳ ಮೂಲಕ ಮುಂದಿರಿಸಿದ್ದೇನೆ. ನನ್ನ ಪುಸ್ತಕಗಳು ಯುರೋಪ್ ಮತ್ತು ಅಮೇರಿಕಗೆ ಕಳುಹಿಸಲಾಗುತ್ತದೆ. ಅಲ್ಲಾಹನು ಆ ಸಮುದಾಯಕ್ಕೆ ಗ್ರಹಿಕೆಯನ್ನು ದಯಪಾಲಿಸಿದ್ದಾನೆ. ಅವರು ದೇವದತ್ತವಾದ ಅಂತರ್‌ದೃಷ್ಟಿಯಿಂದ ಈ ಸಂಗತಿಯನ್ನು ಮನವರಿಕೆ ಮಾಡಿರುವರು. ಆದರೆ ಇದನ್ನು ಒಬ್ಬ ಮುಸ್ಲಿಮನ ಮುಂದೆ ಇರಿಸುವಾಗ ಅವನ ಬಾಯಿಯಲ್ಲಿ ನೊರೆ ಬರುತ್ತದೆ. ಹುಚ್ಚನ ಹಾಗೆ ಅಥವಾ ಕೊಲ್ಲಲು ಬರುವಂತೆ ವರ್ತಿಸುತ್ತಾನೆ. ಈಗಂತು ಅಹ್ಮದಿಯರೊಡನೆ ಹೀಗೆಯೇ ವರ್ತಿಸಲಾಗುತ್ತಿದೆ. ಉತ್ತಮ ಪುರಾವೆಯೊಂದಿಗೆ ಸಂವಾದ ಮಾಡಲು ಪವಿತ್ರ ಖುರ್‌ಆನ್ ಹೇಳುತ್ತದೆ. ಶತ್ರುವಾಗಿದ್ದರೂ ಸೌಮ್ಯತೆ ಮತ್ತು ಉತ್ತಮ ವರ್ತನೆಯಿಂದ ಸ್ನೇಹಿತನಾಗಲು ಹಾಗೂ ಆರಾಮ ಮತ್ತು ಸಮಾಧಾನದಿಂದ ಮಾತುಗಳನ್ನು ಕೇಳುವಂತಾಗಲು ಹೀಗೆ ನಮಗೆ ಕಲಿಸಲಾಗಿದೆ. ನಾನು ಅಲ್ಲಾಹನ ಹೆಸರಲ್ಲಿ ಆಣೆಯಿಟ್ಟು ಹೇಳಿದ ನಂತರ ಮತ್ತು ನನ್ನ ಪರವಾಗಿ ಪ್ರಕಟವಾದ ದೃಷ್ಟಾಂತಗಳನ್ನು ನೋಡಿದ ನಂತರ ಕೂಡ ನನ್ನನ್ನು ಸುಳ್ಳುವಾದಿ ಮತ್ತು ಅಲ್ಲಾಹನ ಮೇಲೆ ಸುಳ್ಳು ಸೃಷ್ಟನೆ ಮಾಡುವವನು ಎಂದು ಹೇಳುತ್ತಿರುವಿಯಾದರೆ, ನಾನು ಅಲ್ಲಾಹನ ಹೆಸರಲ್ಲಿ ಆಣೆಹಾಕಿಕೊಂಡು ಕೇಳುತ್ತೇನೆ, ಅಲ್ಲಾಹನ ಸಹಾಯ ಮತ್ತು ನೆರವು ಸದಾ ಲಭಿಸುತ್ತಿರುವ ಒಬ್ಬ ಸುಳ್ಳುವಾದಿಯ ಉದಾಹರಣೆಯನ್ನು ನನಗೆ ತೋರಿಸಿರಿ. ನಾನು ಸತ್ಯವಂತನಾಗಿದ್ದೇನೆ ಎಂದು ನಾನು ಅಲ್ಲಾಹನ ಆಣೆಹಾಕಿಕೊಂಡು ಹೇಳುತ್ತೇನೆ. ಅಲ್ಲಾಹನ ಸಹಾಯ ಹಝ್ರತ್ ಮಸೀಹ್ ಮೌಊದ್‌ರೊಂದಿಗೆ(ಅ) ಇದೆ ಎಂಬುದಕ್ಕೆ ಇಂದು ಲೋಕದಲ್ಲಿ ಹರಡಿರುವ ಅಹ್ಮದಿಯಾ ಜಮಾಅತ್ ಒಂದು ಸ್ಪಷ್ಟವಾದ ಪುರಾವೆಯಲ್ಲವೇ. ಅಲ್ಲಾಹನು ಪ್ರತಿಯೊಂದು ವ್ಯವಹಾರ ಮತ್ತು ವಿಪತ್ತಿನಲ್ಲಿ ನನಗೆ ನೆರವು ನೀಡುತ್ತಾನೆ ಮತ್ತು ಲಕ್ಷಾಂತರ ಜನರ ಹೃದಯಗಳಲ್ಲಿ ನನ್ನ ಮೇಲಿನ ಪ್ರೀತಿಯನ್ನು ಅಲ್ಲಾಹನು ಉಂಟುಮಾಡಿದ್ದಾನೆ.

ಆಕಾಶದಿಂದ ವರ್ಷಿಸುತ್ತಿರುವ ಪ್ರಕಾಶಗಳು ಮತ್ತು ಅನುಗ್ರಹಗಳಿಗೆ ಮುಸ್ಲಿಮರು ಬೆಲೆಕೊಡಬೇಕು. ಸಮಯಕ್ಕೆ ಸರಿಯಾಗಿ ಅವರಿಗೆ ನೆರವು ಲಭಿಸಿರುವ ಕಾರಣ ಅಲ್ಲಾಹನಗೆ ಕೃತಜ್ಞತೆ ಅರ್ಪಿಸಬೇಕು. ಆದರೆ ಅವರು ಅಲ್ಲಾಹನ ಅನುಗ್ರಹಕ್ಕೆ ಬೆಲೆಕೊಡುವುದಿಲ್ಲವಾದರೆ ಅಲ್ಲಾಹನು ಅವರನ್ನು ಪರಿವೆ ಮಾಡುವವನಲ್ಲ. ಅವನು ಅವನ ಕೆಲಸವನ್ನು ಮಾಡುತ್ತಿರುವನು.

ಆದರೆ ಈ ಜನರು ದುಃಖಿಸುವರು. ಇತರ ಧರ್ಮಗಳನ್ನು ಅಳಿಸಲು ಮತ್ತು ಇಸ್ಲಾಮಿಗೆ ವಿಜಯ ಮತ್ತು ಶಕ್ತಿ ನೀಡಲು ಅಲ್ಲಾಹನು ನಿರ್ಧಾರ ಮಾಡಿದ್ದಾನೆ ಎಂದು ನಾನು ಬಹಳ ಶಕ್ತವಾಗಿ, ಪರಿಪೂರ್ಣ ದೃಢವಿಶ್ವಾಸ ಮತ್ತು ಅಂತರ್ದೃಷ್ಟಿಯಿಂದ ಹೇಳುತ್ತಿದ್ದೇನೆ. ಈಗ ಅಲ್ಲಾಹನ ನಿರ್ಧಾರವನ್ನು ಎದುರಿಸುವ ಯಾವುದೇ ಕೈ ಅಥವಾ ಶಕ್ತಿಯಿಲ್ಲ. ನೆನಪಿಡಿರಿ, ಅಲ್ಲಾಹನು ನನ್ನ ಮೂಲಕ ನಿಮಗೆ ಈ ಮಾಹಿತಿಯನ್ನು ನೀಡುತ್ತಿದ್ದಾನೆ. ನಾನು ನನ್ನ ಸಂದೇಶವನ್ನು ತಲುಪಿಸಿದ್ದೇನೆ. ಈಗ ಅದನ್ನು ಕೇಳುವುದು ಕೇಳದಿರುವುದು ನಿಮಗೆ ಬಿಟ್ಟದ್ದು. ಹಝ್ರತ್ ಈಸಾ(ಅ) ಮೃತಪಟ್ಟಿರುವರು ಎಂಬುದು ಸತ್ಯವಾದ ಸಂಗತಿಯಾಗಿದೆ. ಬರಬೇಕಿದ್ದ ವಾಗ್ದತ್ತ ಮಸೀಹ್ ನಾನೇ ಆಗಿದ್ದೇನೆ ಎಂದು ನಾನು ಅಲ್ಲಾಹನ ಹೆಸರಲ್ಲಿ ಆಣೆಹಾಕಿಕೊಂಡು ಹೇಳುತ್ತಿದ್ದೇನೆ. ಈಸಾರ ಮರಣದಲ್ಲೇ ಇಸ್ಲಾಮಿನ ಜೀವಿತವಿದೆ ಎಂಬುದು ಸಹ ಖಚಿತವಾದ ಸಂಗತಿಯಾಗಿದೆ. (ಲೆಕ್ಚರ್ ಲುಧಿಯಾನ, ರೂಹಾನಿ ಖಝಾಈನ್, ಸಂಪುಟ–20, ಪುಟ–290)

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ದಿನಂಪ್ರತಿ ವಿವಿಧ ರೀತಿಯ ದೃಷ್ಟಾಂತಗಳನ್ನು ತೋರಿಸಿ ನನ್ನ ಮೂಢರಾದ ವಿರೋಧಿಗಳನ್ನು ಅಪಮಾನಿತರನ್ನಾಗಿ ಮಾಡುತ್ತಿದ್ದಾನೆ. ನಾನು ಅಲ್ಲಾಹನ ಆಣೆಹಾಕಿಕೊಂಡು ಹೇಳುತ್ತೇನೆ, ಅಲ್ಲಾಹನು ಇಬ್ರಾಹೀಮ್‌ರೊಡನೆ ಮಾತನಾಡಿದ ಹಾಗೆ, ಇಸ್‌ಹಾಖ್, ಇಸ್ಮಾಈಲ್, ಯಾಖೂಬ್, ಯೂಸುಫ್, ಮೂಸಾ ಮತ್ತು ಮಸೀಹ್ ಇಬ್ನು ಮರ್‌ಯಮ್‌ರೊಡನೆ ಸಂಭಾಷಣೆ ನಡೆಸಿದ ಹಾಗೆಯೇ, ಎಲ್ಲರಿಗಿಂತ ನಂತರ ನಮ್ಮ ಹಝ್ರತ್ ಪೈಗಂಬರರಿಗೆಸ ಅತ್ಯಂತ ಪ್ರಕಾಶಪೂರಿತ ಮತ್ತು ಪರಿಶುದ್ಧ ದಿವ್ಯವಾಣಿಯನ್ನು ಅವತೀರ್ಣಗೊಳಿಸಿದ ಹಾಗೆ, ಅಲ್ಲಾಹನು ನನಗೂ ಸಹ ಅಲ್ಲಾಹನೊಂದಿಗೆ ಸಂಭಾಷಣೆ ನಡೆಸುವ ಸೌಭಾಗ್ಯವನ್ನು ದಯಪಾಲಿಸಿದನು. ಆದರೆ ಈ ಸೌಭಾಗ್ಯ ನನಗೆ ಹಝ್ರತ್ ಪೈಗಂಬರರರನ್ನು ಅನುಸರಿಸಿದ ಕಾರಣದಿಂದ ಲಭಿಸಿತ್ತು. ನಾನು ಹಝ್ರತ್ ಪೈಗಂಬರರ(ಸ) ಸಮುದಾಯದವನಾಗಿರದಿರುತ್ತಿದ್ದರೆ ಮತ್ತು ಹಝ್ರತ್ ಪೈಗಂಬರ್‌ರನ್ನು(ಸ) ಅನುಸರಿಸದೇ ಇರುತ್ತಿದ್ದರೆ, ಲೋಕದ ಎಲ್ಲ ಪರ್ವತಗಳಿಗೆ ಸಮವಾಗಿ ನನ್ನ ಸತ್ಕರ್ಮಗಳು ಇರುತ್ತಿದ್ದರೂ ಎಂದಿಗೂ ಅಲ್ಲಾಹನೊಂದಿಗೆ ಮಾತುಕತೆ ಮತ್ತು ಸಂಭಾಷಣೆ ನಡೆಸುವ ಸೌಭಾಗ್ಯವನ್ನು ನಾನು ಪಡೆಯುತ್ತಿರಲಿಲ್ಲ. ಏಕೆಂದರೆ ಮುಹಮ್ಮದೀ ಪ್ರವಾದಿತ್ವದ ಹೊರತುಪಡಿಸಿ ಬಾಕಿಯೆಲ್ಲ ಪ್ರವಾದಿತ್ವಗಳು ಮುಚ್ಚಲ್ಪಟ್ಟಿವೆ. ಶರೀಅತ್ ತರುವ ಯಾವುದೇ ನಬಿ ಬರಲು ಸಾಧ್ಯವಲ್ಲ. ಶರೀಅತ್ ಇಲ್ಲದೇ ನಬಿ ಬರಬಹುದು. ಆದರೆ ಪ್ರವಾದಿಯಾಗಿ ಬರುವ ವ್ಯಕ್ತಿ ಹಝ್ರತ್ ಪೈಗಂಬರರ ಸಮುದಾಯದವರಾಗಿರಬೇಕು. ಉಮ್ಮತೀ ಆಗಿರಬೇಕು. ಆದ್ದರಿಂದ ಈ ಆಧಾರದಲ್ಲಿ ನಾನು ಉಮ್ಮತೀ ಮತ್ತು ನಬಿ ಆಗಿರುವೆನು. ನನ್ನ ನುಬುವ್ವತ್ ಎಂದರೆ ಅಲ್ಲಾಹನೊಡನೆ ಸಂಭಾಷಣೆಯ ಸೌಭಾಗ್ಯ ಹಝ್ರತ್ ಪೈಗಂಬರರ ಪ್ರವಾದಿತ್ವದ ಒಂದು ನೆರಳಾಗಿದೆ. ಅದಲ್ಲದೇ ನನ್ನ ಪ್ರವಾದಿತ್ವ ಏನೂ ಅಲ್ಲ. ಅದೇ ಮುಹಮ್ಮದೀ ಪ್ರವಾದಿತ್ವ ನನ್ನಲ್ಲಿ ಪ್ರಕಟವಾಗಿದೆ. ನಾನು ಉಮ್ಮತಿ ಮತ್ತು ಕೇವಲ ನೆರಳಿನಂತೆ ಆಗಿರುವುದರಿಂದ ಇದರಿಂದ ಹಝ್ರತ್ ಪೈಗಂಬರರ ಗೌರವಕ್ಕೆ ಯಾವುದೇ ಧಕ್ಕೆ ಉಂಟಾಗಲಾರದು. ನನ್ನೊಡನೆ ಅಲ್ಲಾಹನು ಮಾತುಕತೆ ನಡೆಸುತ್ತಾನೆ ಎಂಬುದು ಖಚಿತವಾದ ಸಂಗತಿಯಾಗಿದೆ. ಇದರ ಬಗ್ಗೆ ನಾನು ಒಂದು ಕ್ಷಣಕ್ಕೂ ಸಂಶಯಪಟ್ಟರೆ ನಾನು ಕಾಫಿರ್ ಆಗುವನು. ಸೂರ್ಯನನ್ನು ಮತ್ತು ಅದರ ಪ್ರಕಾಶವನ್ನು ನೋಡಿಕೊಂಡು ಯಾರೂ ಅದು ಸೂರ್ಯ ಮತ್ತು ಪ್ರಕಾಶವೆಂಬುದರ ಬಗ್ಗೆ ಯಾವುದೇ ಸಂಶಯವನ್ನು ಹೊಂದದ ಹಾಗೆಯೇ ನಾನು ನನಗೆ ಅವನು ಅವತೀರ್ಣಗೊಳಿಸುವ ದಿವ್ಯವಾಣಿಯ ಬಗ್ಗೆ ಸಂಶಯಪಡುವುದಿಲ್ಲ. ಅಲ್ಲಾಹನ ಗ್ರಂಥವನ್ನು ನಂಬುವಂತೆ ನಾನು ಅವುಗಳನ್ನು ಸಹ ನಂಬುತ್ತೇನೆ.

(ತಜಲ್ಲಿಯಾತೆ ಇಲಾಹಿಯ್ಯ, ರೂಹಾನ ಖಝಾಈನ್, ಸಂಪುಟ–20, ಪುಟ–411–412)

ಇನ್ನೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ನನ್ನನ್ನು ಯಾವ ಕೆಲಸಕ್ಕಾಗಿ ಕಳುಹಿಸಿರುವನೋ ಅದೇನೆಂದರೆ, ಅಲ್ಲಾಹನ ಮತ್ತು ಸೃಷ್ಟಿಗಳ ಸಂಬಂಧದಲ್ಲಿ ಉಂಟಾದ ಮಾಲಿನ್ಯವನ್ನು ದೂರಮಾಡಿಕೊಂಡು ಪ್ರೀತಿ ಮತ್ತು ನಿಷ್ಠೆಯ ಸಂಬಂಧವನ್ನು ಪುನಃ ಸ್ಥಾಪಿಸುವುದಾಗಿದೆ, ಸತ್ಯದ ಪ್ರಕಟನೆಯಿಂದ ಧಾರ್ಮಿಕ ಯುದ್ಧಗಳನ್ನು ಕೊನೆಗೊಳಿಸಿ ಮೈತ್ರಿಸಂಧಾನದ ಬುನಾದಿ ಹಾಕುವುದಾಗಿದೆ. ಲೋಕದ ಕಣ್ಣುಗಳಿಂದ ಮರೆಯಾಗಿರುವ ಧಾರ್ಮಿಕ ಸತ್ಯವನ್ನು ಬಯಲುಗೊಳಿಸುವುದಾಗಿದೆ, ಸ್ವಾರ್ಥದ ಅಂಧಕಾರದಲ್ಲಿ ಹುದುಗಿರುವ ಆಧ್ಯಾತ್ಮಿಕತೆಯ ಮಾದರಿಯನ್ನು ತೋರಿಸುವುದಾಗಿದೆ ಮತ್ತು ಪರಿಶುದ್ಧ ಮತ್ತು ಪ್ರಕಾಶಮಯವಾದ ಏಕದೇವವಿಶ್ವಾಸವನ್ನು ಪುನಃ ಸ್ಥಾಪಿಸುವುದಾಗಿದೆ. ಇವೆಲ್ಲವೂ ನನ್ನ ಶಕ್ತಿಯಿಂದ ಅಲ್ಲ, ಬದಲಿಗೆ ಆಕಾಶ ಮತ್ತು ಭೂಮಿಯ ದೇವನಾದ ಅಲ್ಲಾಹನ ಶಕ್ತಿಯಿಂದ ಅಗುವುವು. ಅಲ್ಲಾಹನು ನನ್ನನ್ನು ನಿಯೋಜಿಸಿದ ನಂತರ ಲೋಕದಲ್ಲಿ ಒಂದು ಮಹತ್ತಾದ ಬದಲಾವಣೆಯನ್ನು ಅಲ್ಲಾಹನು ಮಾಡಿರುವುದನ್ನು ನಾನು ನೋಡುತ್ತಿದ್ದೇನೆ. ಹಝ್ರತ್ ಈಸಾರನ್ನು ದೇವನೆಂದು ಹೇಳುವ ಅಮೇರಿಕ ಮತ್ತು ಯುರೋಪಿನ ಜನರಲ್ಲಿ ಕೆಲವು ಅನ್ವೇಷಕರು ಸ್ವತಃ ಈ ವಿಶ್ವಾಸವನ್ನು ಕೈಬಿಡುತ್ತಿದ್ದಾರೆ. ತಂದೆ ತಾತಂದಿರ ಕಾಲದಿಂದ ವಿಗ್ರಹಗಳನ್ನು ಪೂಜಿಸುತ್ತಾ ಬಂದಿರುವ ಸಮುದಾಯದ ಜನರಿಗೆ ಈಗ ವಿಗ್ರಹದಿಂದ ಏನೂ ಪ್ರಯೋಜನವಿಲ್ಲವೆಂದು ಗೊತ್ತಾಗಿದೆ. ಅವರೆಲ್ಲರೂ

ಏಕದೇವನ ಸಮೀಪಕ್ಕೆ ತಲುಪಿದ್ದಾರೆ. ಕೆಲವೇ ಕಾಲಗಳಲ್ಲಿ ಅಲ್ಲಾಹನ ಅನುಗ್ರಹದಿಂದ ಅವನ ವಿಶೇಷವಾದ ಸಹಾಯದಿಂದ ಈ ಜನರು ಏಕದೇವನ ಸಮಾಧಾನದ ಭವನದಲ್ಲಿ ಪ್ರವೇಶಿಸುವರು ಎಂದು ನಾನು ಪ್ರತೀಕ್ಷೆ ಇರಿಸುತ್ತೇನೆ. ನನ್ನ ಈ ಪ್ರತೀಕ್ಷೆ ಭಾವನಾತ್ಮಕವಾದುದಲ್ಲ. ಬದಲಿಗೆ ಅಲ್ಲಾಹನ ಪರಿಶುದ್ಧ ದಿವ್ಯವಾಣಿ ಮೂಲಕ ನನಗೆ ಸುವಾರ್ತೆ ಲಭಿಸಿದೆ. ಈ ಎಲ್ಲ ವಿವಿಧ ಸಮುದಾಯಗಳು ಒಂದು ದಿನ ಒಂದು ಸಮುದಾಯವಾಗುವುದು.

(ಲೆಕ್ಚರ್ ಲಾಹೋರ್, ರೂಹಾನಿ ಖಝಾಇನ್, ಸಂಪುಟ–20, ಪುಟ–180–181)

ಲೋಕದಲ್ಲಿ ನೆಲೆಸಿರುವ ಜನರು, ವಿಶೇಷವಾಗಿ ಮುಸ್ಲಿಮರು ಈ ಸತ್ಯವನ್ನು ಮತ್ತು ಹಝ್ರತ್ ಮಸೀಹ್ ಮೌಊದ್‌ರ(ಅ) ವಾದವನ್ನು ಮನವರಿಕೆ ಮಾಡುವಂತೆ ಅಲ್ಲಾಹನು ಮಾಡಲಿ ಮತ್ತು ಬೇಗನೇ ಮಸೀಹ್ ಮತ್ತು ಮಹ್‌ದಿಯ ಬೈಅತ್ ಮಾಡುವವರಾಗಲಿ.

ಪಾಕಿಸ್ತಾನ ಮತ್ತು ಅಲ್‌ಜೀರಿಯದ ಅಹ್ಮದಿಯರಿಗಾಗಿ ದುಆ ಮಾಡಲು ಪುನಃ ಮನವಿ ಮಾಡುತ್ತೇನೆ: ಅಲ್ಲಿಯ ಸ್ಥಿತಿ ಪುನಃ ಬಹಳ ಕೆಟ್ಟುಹೋಗುತ್ತಿದೆ. ಸಂಪೂರ್ಣವಾದ ಶಾಂತಿ ಸಮಾಧಾನದ ವಾತಾವರಣ ಉಂಟಾಗಿದೆ ಎಂದು ಹೇಳುವಂತಿಲ್ಲ. ಪಾಕಿಸ್ತಾನದಲ್ಲಿ ಪ್ರತಿದಿನ ಏನಾದರೊಂದು ಘಟನೆ ನಡೆಯುತ್ತಾ ಇರುತ್ತದೆ. ಅದೇ ರೀತಿಯಲ್ಲಿ ಅಲ್‌ಜೀರಿಯದಲ್ಲೂ ಅಲ್ಲಿಯ ಸರ್ಕಾರದ ಕೆಲವು ಅಧಿಕಾರಿಗಳ ಉದ್ದೇಶಗಳು ಸರಿಯಲ್ಲವೆಂದು ತೋರುತ್ತದೆ. ಪುನಃ ಮೊಕದ್ದಮೆಗಳನ್ನು ಮಾಡಲು ಬಯಸುತ್ತಿದ್ದಾರೆ. ಅಲ್ಲಾಹನು ಪಾಕಿಸ್ತಾನದ, ಅಲ್‌ಜೀರಿಯದ ಮತ್ತು ಲೋಕದ ಪ್ರತಿ ದೇಶದಲ್ಲಿ ಪ್ರತಿಯೊಬ್ಬ ಅಹ್ಮದಿಯನ್ನು ತನ್ನ ಸಂರಕ್ಷಣೆಯಲ್ಲಿ ಇರಿಸಲಿ. ಅಹ್ಮದಿಯರು ಸಹ ಹಿಂದಿಗಿಂತ ಹೆಚ್ಚಾಗಿ ಅಲ್ಲಾಹನ ಕಡೆಗೆ ಬಾಗಲು ಗಮನಹರಿಸಬೇಕು. ಅಲ್ಲಾಹನಿಗೆ ಸಲ್ಲಬೇಕಾದ ಹಕ್ಕುಗಳನ್ನು ಮತ್ತು ಜನರ ಹಕ್ಕುಗಳನ್ನು ಈಡೇರಿಸುವವರಾಗಬೇಕು. ತಮ್ಮ ಸ್ಥಿತಿಗಳನ್ನು ಉತ್ತಮಗೊಳಿಸಬೇಕು ಮತ್ತು ಅಲ್ಲಾಹನೊಂದಿಗೆ ವಿಶೇಷವಾದ ಸಂಬಂಧವನ್ನು ಸ್ಥಾಪಿಸುವವರಾಗಬೇಕು. ಅಲ್ಲಾಹನು ನಮಗೆಲ್ಲರಿಗೂ ಅದರ ಸೌಭಾಗ್ಯ ನೀಡಲಿ.

*************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಗತ ಪ್ರವಾದಿಗಳ ಅಹವಾಲುಗಳೇ ಮತ್ತು ಆ ಸಮುದಾಯಗಳ ವಿನಾಶವೇ? ಅವರು ಹೇಳಿದರು. 'ಇಲ್ಲ ಫಸ್ತಖಿಮ್ ಕಮಾ ಉಮಿರ್ಥ್' ವಚನವು ನನ್ನನ್ನು ವೃದ್ಧನನ್ನಾಗಿ ಮಾಡಿದೆ. ಅಂತೆಯೇ ದಾರಿಮಿ ಮತ್ತು ಅಬೂದಾವೂದ್ ತನ್ನ ಮರಾಸೀರಿನಲ್ಲಿ ಮತ್ತು ಬೈಹಖಿ ಶುಬಲ್ ಈಮಾನಿನಲ್ಲಿ ಕಅಬ್‌ರಿಂದ ವರದಿಯಾಗಿದೆ. ರಸೂಲುಲ್ಲಾಹ್(ಸ) ನುಡಿದರು. ಇಖ್‌ಯಉಲ್ ಹೂದ್ ಯೌಮುಲ್ ಜುಮಅತಿ, ಶುಕರವಾರದ ದಿನ ಸೂರ: ಹೂದ್ ಪಠಿಸಿರಿ. ಇದರಿಂದಲು ಸಹ ತಿಳಿದುಬರುವುದೇನೆಂದೆರ ಈ ವಚನ ಸಂಘಟನೆಯ ಶಿಸ್ತಿಗೆ ಸಂಬಂಧಿಸಿದಾಗಿದೆ. ಏಕೆಂದರೆ ಜುಮುಅ ದಿವಸವು ಸಹ ಸಂಘಟನಾ ದಿನವಾಗಿದೆ. ಯಾವ ಅಧ್ಯಾಯವು ರಸೂಲುಲ್ಲಾಹ್(ಸ) ರವರಂತಹ ಹೃದಯ ವೈಶಾಲ್ಯಯುಳ್ಳವರ ಮೇಲೆ ಎಷ್ಟೊಂದು ಪ್ರಭಾವ ಬೀರಿದೆ ಎಂದರೆ ಅವರನ್ನು ವೃದ್ಧನನ್ನಾಗಿ ಮಾಡಿದೆ. ಅಂದ ಮೇಲೆ ನಮ್ಮ ಮೇಲೆ ಯಾವ ಪ್ರಭಾವ ಬೀರುವುದಿಲ್ಲ ಎಂದರೆ ಎಷ್ಟು ಆಶ್ಚರ್ಯಕರವಲ್ಲವೆ. ಅದಾಗ್ಯೂ ಆ ಸಾಧನೆಗೆ ತಲುಪಬೇಕಾಗಿದೆ. ನಮಗೆ ಇನ್ನೂ ಹೆಚ್ಚು ಭಯಪಡುವ ಅಗತ್ಯವಿದೆ.

ವಾಸ್ತವವೇನೆಂದರೆ ಇಸ್ಲಾಂ ಧರ್ಮವು ಕೇವಲ ವೈಯಕ್ತಿಕ ವಿಜಯ ಬಯಸುವುದಿಲ್ಲ. ಎಲ್ಲ ರೀತಿಯಲ್ಲೂ ಇಡೀ ಸಮುದಯ ವಿಜಯ ಸಾಧಿಸದಿದ್ದರೆ ಅದು ನಮ್ಮ ಸೋಲೇ ಸರಿ. 'ಲಾ ತತ್‌ಗೌ ತಾತ್ಪರ್ಯ ಅದೇ ಆಗಿದೆ. ಸಮುದಾಯವನ್ನು ಕಡೆಗಣಿಸುವುದು ಅತಿಕರ್ಮವಾಗಿದೆ. ಏಕೆಂದರೆ ಕಡೆಗಣಿಸುವ ಪರಿಣಾಮವಾಗಿ ಮತ್ತೆ ಪಾಪಕೃತ್ಯಗಳು ಹೆಚ್ಚಾಗುವುವು. ಒಬ್ಬನೇ ಉನ್ನತಿ ಸಾಧಿಸಿದರೆ ಲೋಕಕ್ಕೆ ಏನೂ ಪ್ರಯೋಜನವಿಲ್ಲ. ಏಕೆಂದರೆ ಅವನು ಮರಣ ಹೊಂದರೆ ಮತ್ತೆ ಅದೇ ಅಂಧಕಾರ. ಎಲ್ಲರ ಸುಧಾರಣೆಯೇ ನಿಜವಾದ ವಿಜಯವಾಗಿದೆ. ಪಾಪಗಳನ್ನು ಅಳಿಸಿ ಹಾಕಬೇಕಾಗಿದೆ. ಆದರೆ ವಿಷಾದದ ಸಂಗತಿ ಏನೆಂದರೆ ಇಂತಹ ಶಿಕ್ಷಣವಿದ್ದಾಗಲೂ ಮುಸಲ್ಮಾನನು ಕೇವಲ ತನ್ನ ವಿದ್ಯೆಯಲ್ಲಿ ಪ್ರಗತಿಯಲ್ಲಿ ಹಿಂದುಳಿಯಲಿಲ್ಲ. ಬದಲು ಲೌಕಿಕ ವಿದ್ಯೆ ಮತ್ತು ಪ್ರಗತಿಯಲ್ಲೂ ಹಿಂದುಳಿದಿದ್ದಾರೆ. ಅವರು ಮಾನವ ಕುಲದ ಸತ್ಕಾರ್ಯಗಳಲ್ಲಿ ಭಗವಹಿಸುತ್ತಿಲ್ಲ. ಅದಾಗ್ಯೂ ಇತರ ಸಮುದಯಗಳು ಎಲ್ಲ ವಿಭಾಗದ ವಿದ್ಯಾಕ್ಷೇತ್ರಗಳಲ್ಲಿ ಪ್ರಗತಿ ಹೊಂದುವ ಪ್ರಯತ್ನದಲ್ಲಿದ್ದಾರೆ.

**(ತಫ್ಸೀರ್ ಕಬೀರ್, ಸಂಪುಟ–3, ಪುಟ–265, ಮುದ್ರಣ ಖಾದಿಯಾನ್ 2010)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಖುರ್‌ಆನ್ ಸಾಹಿತ್ಯಾತ್ಮಕವಾಗಿಲ್ಲ. ಅಲ್ಲದೇ ಸರಿಯೂ ಇಲ್ಲ. ನೀವು ಭಾವಿಸಿದಂತೆ ನಾನು ಅದರಲ್ಲಿ ಯಾವ ಸಾಹಿತ್ಯವಾಗಲಿ, ವಾಕ್‌ಚಾತುರ್ಯವಾಗಲಿ ಕಾಣುವುದಿಲ್ಲ ಮತ್ತು ಅವನು ಅರಬಿ ಬಾಷೆಯ ಪಾಂಡಿತ್ಯದ ದಾವೆ ಮಾಡುವರು, ಹಝ್ರತ್ ರಸೂಲುಲ್ಲಾಹ್(ಸ) ರವರ ಬಗ್ಗೆ ಲಜ್ಜೆಗೆಟ್ಟು ಮಿಥ್ಯವಾದಿಯೆಂದು ವಾದಿಸುತ್ತಿದ್ದನು. ಪವಿತ್ರ ಖುರ್‌ಆನ್‌ನ ವಾಕ್‌ಚಾತುರ್ಯವನ್ನು ನಿರಾಕರಿಸಿ ಗರ್ವದಿಂದ ನ್ಯೂನತೆಗಳನ್ನು ಎತ್ತಿ ಹಿಡಿಯುವನು. ಅಂದ ಹಾಗೆ ಅವನು ತನ್ನನ್ನು ಉಮ್ರಾವು ಬೈಸನ ಸಹೋದರ ಸಂಬಂಧಿಯಂತೆ ವರ್ತಿಸುತ್ತಾನೆ. ತನ್ನನ್ನು ಮೌಲ್ವಿ ಎನ್ನುತ್ತಾನೆ ಮತ್ತು ವರ್ಗದಿಂದ ನಡೆಯುತ್ತಾನೆ.

ಇದಾದ ನಂತರ ತನ್ನನ್ನು ಮೌಲ್ವಿಯೆಂದು ಭಾವಿಸುವ ಪ್ರತಿಯೊಬ್ಬ ಕ್ರೈಸ್ತರನ್ನು ಸಂಬೋಧಿಸಿ ಅವರೆಲ್ಲರನ್ನು ಪ್ರತಿವಾದಿಸಲು ಆಹ್ವಾನಿಸುತ್ತೇವೆ. ಅವರುಗಳೆಲ್ಲರೂ ಸೇರಿ ಇಂತಹ ಗ್ರಂಥವನ್ನು ರಚಿಸಿದರೆ ನಮ್ಮ ಕಡೆಯಿಂದ ಅವರಿಗೆ ಐದು ಸಾವಿರ ರೂಪಾಯಿಗಳ ಬಹುಮಾನ ನೀಡುವೆವು. ಅದನ್ನು ನಾವು ಮೊದಲೇ ಬರೆದುಕೊಟ್ಟಿರುತ್ತೇವೆ. (ನೂರುಲ್ ಹಖ್, ಪುಟ 155).

**ಇಸ್ಲಾಮ್‌ನ ಸ್ಥಾಪಕರು ಹಾಗೂ ಪವಿತ್ರ ಖುರ್‌ಆನ್‌ನೊಂದಿಗಿರುವ ಹಝ್ರತ್ ಮಸೀಹ್ ಮೌಊದ್(ಅ) ರವರ ಅಸೀಮ ಪ್ರೀತಿ ಮತ್ತು ಆತ್ಮಾಭಿಮಾನ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ.

ನೆನಪಿಡಬೇಕಾದ ವಿಷಯವೆಂದರೆ ಈ ಬಹುಮಾನವು ನಮ್ಮ ಗ್ರಂಥಕ್ಕೆ ಎದುರಾಗಿ ಅಂತಹುದೇ ಅದಕ್ಕೆ ಸಮನಾದ ಸಾಮ್ಯತೆಯಿಂದ ಕೂಡಿದ ಮತ್ತು ಸಹಮತ ಹೊಂದಿದ ರೀತಿ ಸಾಬೀತುಪಡಿಸಬೇಕು. ಆಗ ಮಾತ್ರ ಈ ಬಹುಮಾನಕ್ಕೆ ಅರ್ಹರಾಗುವರು. ಆದರೆ ಈ ತರಹದ ಗ್ರಂಥ ರಚಿಸಲು ನಿರಾಕರಿಸಿ ನರಿಗಳ ಹಾಗೆ ಕುಳಿತುಬಿಟ್ಟರೆ, ಆ ಸಾಮರ್ಥ್ಯಗಳನ್ನು ತೋರ್ಪಡಿಸಿಲ್ಲವಾದರೆ ಪವಿತ್ರ ಖುರ್‌ಆನ್ನು ಅವಮಾನಿಸುವ ಈ ಬುದ್ಧಿ ಬಿಡಬೇಕು. ಒಂದು ವೇಳೆ ಅಲ್ಲಾಹನ ಗ್ರಂಥದ ಮೇಲೆ ಇಲ್ಲಸಲ್ಲದ ಟೀಕೆ ಟಿಪ್ಪಣಿಯಿಂದ ದೂರ ಇರದಿದ್ದರೆ ಮತ್ತು ರಸೂಲುಲ್ಲಾಹ್(ಸ) ರವರನ್ನು ಅಪಪ್ರಚಾರ ಮಾಡುವುದರಿಂದ ನಿಲ್ಲಿಸದಿದ್ದರೆ, ಇದೇ ರೀತಿಯ ಅಸಭ್ಯ ವರ್ತನೆ ಮುಂದುವರೆಸಿದರೆ ಅಲ್ಲಾಹನ ಕಡೆಯಿಂದ ಅವರ ಮೇಲೆ ಸಾವಿರ ಶಾಪಗಳಿವೆ. ಅಂದ ಹಾಗೆ ಸಮುದಾಯವೆಲ್ಲ ಆಮೀನ್ ಎಂದು ಹೇಳಲಿ. (ನೂರುಲ್ ಹಖ್ ಪುಟ–158).

ಪ್ರತಿಯೊಬ್ಬ ಸಜ್ಜನ ಸಂತಾನನಾದವನು, ದುರ್ನಡತೆ ಹೊಂದಿದ ಮಹಿಳೆ ಅಥವಾ ದಜ್ಜಾಲಿನ ಸಂತಾನದಿಂದಿರುವವನು. ಅವನು ಎರಡು ಮಾತುಗಳಲ್ಲಿ ಒಂದನ್ನು ಅವಶ್ಯವಾಗಿ ಸ್ವೀಕರಿಸುವನು ಅಥವಾ ಸುಳ್ಳನ್ನು ಬಹಿರಂಗಗೊಂಡ ನಂತರ ಅದರಿಂದ ದೂರವಾಗುವನು ಅಥವಾ ನಮ್ಮ ಈ ಗ್ರಂಥದ ರೀತಿಯ ಗ್ರಂಥ ರಚಿಸಿ ತೋರಿಸುವನು. ಆದರೆ ಆ ವ್ಯಕ್ತಿ ಅವನು ನಮ್ಮ ಗ್ರಂಥದ ರೀತಿಯಲ್ಲಿ ಗ್ರಂಥವು ರಚಿಸಿ ತೋರಿಸಲಿಲ್ಲ ಮತ್ತು ಪವಿತ್ರ ಖುರ್‌ಆನ್‌ನ ಮೇಲೆ ಟೀಕೆ ಟಿಪ್ಪಣಿ ಮಾಡುವುದರಿಂದಲೂ ದೂರ ಸರಿಯಲಿಲ್ಲ. ಖುರ್‌ಆನ್‌ನ ಸಾಹಿತ್ಯ ವಾಕ್‌ಚಾತುರ್ಯಗಳ ಮೇಲೆ ಪ್ರಹಾರ ಮಾಡುವುದರಿಂದ ದೂರ ಉಳಿಯದಿದ್ದರೆ, ನಾವು ಈ ಗ್ರಂಥದಲ್ಲಿ ಬರೆದ ಎಲ್ಲ ಆ ಮಾತುಗಳು ಸಾಕ್ಷಿಗಳಾಗುವುವು. ಅವರ ಮೇಲೆ ಅಲ್ಲಾಹನ ಶಾಪ ಮತ್ತು ಅವನ ಎಲ್ಲ ದೇವದೂತರ ಹಾಗೂ ಸಂಗಡಿಗರ ಶಾಪ. ಅಂದ ಹಾಗೆ ಇಡೀ ಸಮುದಾಯ ಹೇಳಲಿ. ಆಮೀನ್, ಆಮೀನ್ ಆಮೀನ್.

**ಇಮಾಮುದ್ದೀನನ ಕೊರಳಲ್ಲಿ ಸಾವಿರ ಅಪಮಾನಜನಕ ಶಾಪಗಳ ಉದ್ಧವಾದ ಹುರಿಹಗ್ಗ.**

ಇಮಾಮುದ್ದೀನ್ ಇಷ್ಟೆಲ್ಲ ಆತ್ಮಾಭಿಮಾನಕ್ಕೆ ಉತ್ತೇಜಿಸಿದರೂ ಮತ್ತು ನಾಚಿಕೆ ಒಡ್ಡಿದರೂ ಅದನ್ನು ಲೆಕ್ಕಿಸಲಿಲ್ಲ. ಅವನು ಸುಳ್ಳುವಾದ ಮತ್ತು ದುರ್ನಡತೆಯಿಂದ ದೂರವಾಗಲಿಲ್ಲ. ನೂರುಲ್ ಹಖ್ ಗ್ರಂಥದಂತ ಗ್ರಂಥವನ್ನು ರಚಿಸಿ ತೋರಿಸಲಿಲ್ಲ. ಆದುದರಿಂದ ಅಂತ್ಯ ತೀರ್ಮಾನದ ದಿನದವರೆಗೆ ಅವನ ಕೊರಳಲ್ಲಿ ಸಾವಿರ ಶಾಪಗಳ ಉದ್ಧವಾದ ಹುರಿಹಗ್ಗ ಸುತ್ತಿದಂತೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ. ಇಷ್ಟೆಲ್ಲ ಶಾಪಗಳು ಹಾಕಿದ ನಂತರವೂ, ಅದಕ್ಕಿಂತ ಸಾಯುವುದು ಅವರಿಗೆ ಎಷ್ಟೋ ಉತ್ತಮವಾಗುತ್ತಿತ್ತೇನೋ. ಪಾದರಿ ಇಮಾಮುದ್ದೀನ್ ಮತ್ತು ಇತರರು ಪಂಜಾಬ್ ಮತ್ತು ಭಾರತದ ಇತರೆಡೆ ತನ್ನನ್ನು ಮೌಲ್ವಿ ಎಂದು ಕರೆಯಿಸಿಕೊಳ್ಳುತ್ತಿದ್ದ ಹಾಗೂ ಕ್ರೈಸ್ತರು ಅರಬಿ ತಜ್ಞರಂತೆ ಮಾತನಾಡುತ್ತಿದ್ದರು. ಅವರಿಗೆ ಉತ್ತರ ಬರೆಯಲಾಗಲಿಲ್ಲ. ಅದಾಗ್ಯೂ ಅನವಶ್ಯಕ ಆರೋಪ ಮಡುವುದರಿಂದಲೂ ದೂರ ಸರಿಯಲಿಲ್ಲ. ಅಲ್ಲದೇ ಅದೇ ದಿನಗಳಲ್ಲಿ ಪಾದರಿ ಇಮಾಮುದ್ದೀನ್ ಅತ್ಯಂತ ಲಜ್ಜೆಗೇಡಿತನದಿಂದ ಪವಿತ್ರ ಖುರ್‌ಆನ್‌ನ ಅನುವಾದವನ್ನು ಮುದ್ರಿಸಿ ತನ್ನ ಕಡೆಯಿಂದ ಅದರ ಮೇಲೆ ಟೀಕಾಪ್ರಹಾರ ಮಾಡಿ ಆ ಸಾವಿರ ಶಾಪಗಳಿಗೆ ಮೊದಲ ವಾರಸುದಾರನಾದನು" (ಅನ್ವಾರುಲ್ ಇಸ್ಲಾಂ, ರೂಹಾನಿ ಖಝಾಯಿನ್,

ಸಂಪುಟ–9, ಪುಟ–29).

ಅದೇ ಗ್ರಂಥದ 60ನೇ ಪುಟದಲ್ಲಿ ಅವರು ನುಡಿದರು. ನೂರುಲ್ ಹಕ್ ಗ್ರಂಥಕ್ಕೆ ಉತ್ತರ ನೀಡುವುದರಿಂದ ವಿವಶನಾದ ಪಾದರಿ ಇಮಾಮುದ್ದೀನ್‌ನ ಕೊರಳಿಗೆ ಸಾವಿರ ಶಾಪಗಳ ಉದ್ಧವಾದ ಅಪಮಾನಜನಕ ಹುರಿಹಗ್ಗ ಹಾಕಿಸಿಕೊಳ್ಳಲು ಅರ್ಹನಾದ ಮತ್ತು ಅವರೆಲ್ಲ ಸಹೋದರ ಬಳಗವು ಸಹ."

ಮುಂದೆ ಇನ್‌ಶಾಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಮತ್ತೊಂದು ಬಹುಮಾನದ ಪಂಥಹ್ವಾನ ಕುರಿತು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಹಾಕಲಾಗಿತ್ತು. ಮತ್ತು Gate (ದ್ವಾರ) ಸಹ ನಿರ್ಮಿಸಲಾಗಿತ್ತು. ಈ ಕ್ಷೇತ್ರದಲ್ಲಿ ರಿಜಿಸ್ಟ್ರೇಷನ್ ಕಾರ್ಡ್‌ಗಳ checking ಮಾಡಿದ ನಂತರವೇ ದಾಖಲಾಗಬಹುದಿತ್ತು.

Tent ಗಳ ಈ ವಸತಿ ಭಾಗದ ವೀಕ್ಷಣೆಯ ನಡುವೆ ನೂರಾರು ಕುಟುಂಬಗಳು ತಮ್ಮ ಪ್ರೀತಿಯ ಇಮಾಮರನ್ನು ಸಮೀಪದಿಂದ ನೋಡಿದರು. ಪ್ರತಿಯೊಬ್ಬರು ತಮ್ಮ ಈ ಅದೃಷ್ಟದ ಬಗ್ಗೆ ಹೆಮ್ಮೆ ಪಟ್ಟುಕೊಂಡರು.

ಅನಂತರ ಹುಝೂರ್ 5 ಗಂಟೆ 50 ನಿಮಿಷಕ್ಕೆ ಲಜ್ನಗಳ ಸ್ಥಳಕ್ಕೆ ಆಗಮಿಸಿ ಲಜ್ನ ವಿಭಾಗಗಳನ್ನು ಪರಿಶೀಲಿಸಿದರು. ನಂತರ ಯುವಕರ ವಿಭಾಗಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದರು.

ಲಜ್ನ ಜಲ್ಸ ಸ್ಥಳ ವೀಕ್ಷಿಸಿದ ನಂತರ ಹುಝೂರ್ ಪುರುಷರ ಜಲ್ಸ ಸ್ಥಳಕ್ಕೆ ಆಗಮಿಸಿದರು. ಅಲ್ಲಿ ಕಾರ್ಯಕ್ರಮದನ್ವಯ ಜಲ್ಸ ಸಾಲಾನ ಕಾರ್ಯಕರ್ತರು, ಸಹಾಯಕರು ಬಗ್ಗೆ ಅಫ್‌ಸರ್ ಜಲ್ಸ ಸಾಲಾನ ಅತ್‌ಪೀ ಇಳ್ವ ರಾಸ್, ಅಫ್ಸರ್ ಖಿದ್‌ಮತ್ ಖಲ್ಕ್, ವಿವರಣೆ ನೀಡಿದರು.

**ಹುಝೂರ ಅನ್ವರ್(ಅತಬಅ)ರ ಜಲ್ಸ ಸಾಲಾನ ಜರ್ಮನಿ 2015 ವೀಕ್ಷಣೆಯ ಸಂದರ್ಭದಲ್ಲಿ ಸಂಬೋಧನೆ**

ನಂತರ ಹುಝೂರ್ ವೇದಿಕೆಗೆ ಆಗಮಿಸಿದರು. ಸಮಾರಂಭದ ಪ್ರಾರಂಭವು ಪವಿತ್ರ ಖುರ್‌ಆನ್‌ನ ಪಠಣದೊಂದಿಗೆ ಆರಂಬವಾಯಿತು. ಅನಂತರ ಹುಝೂರ್ ಸಭೆಯನ್ನು ಸಂಬೋಧಿಸಿದರು.

ತಶಹುದ್, ತಅವ್ವುಧ್ ಮತ್ತು ತಸ್ಮಿಯಾ ಹೇಳಿದರು. ಅಲ್ಲಾಹನ ಅನುಗ್ರಹದಿಂದ ಅಹ್ಮದಿಯ ಜಮಾಅತಿನ ಜಲ್ಸ ಸಾಲಾನ ನಾಳೆಯಿಂದ ಪ್ರಾರಂಭವಾಗಲಿದೆ. ಇಲ್ಲಿ ಆಸೀನರಗಿರುವಂತಹವರು ನಿಮ್ಮಲ್ಲಿ ಹೆಚ್ಚಿನವರು ತನ್ನನ್ನು ತಾನು ಜಲ್ಸದ ಅತಿಥಿಗಳ ಸೇವೆಯನ್ನು ಪ್ರಸ್ತುತಪಡಿಸಿದವರಲ್ಲಿ ಆಗುತ್ತೀರಿ. ನಿಮಗೆಲ್ಲರಿಗೆ ಇದೊಂದು ದೊಡ್ಡ ಗೌರವದ ವಿಷಯವಾಗಿದೆ. ಹಲವರು ಇದರಲ್ಲಿ ಹಲವು ವರ್ಷಗಳಿಂದ ಸೇವೆ ಸಲ್ಲಿಸುತ್ತ ಬಂದವರಾಗಿದ್ದಾರೆ. ನಿಶ್ಚಯವಾಗಿಯೂ ನಿಮ್ಮ ಅನುಭವದಲ್ಲಿ ಬಂದಿರಬಹುದು. ಈ ಸೇವೆಗಳು ಅಲ್ಲಾಹನ ಅನುಗ್ರಹಗಳಿಂದ ತಮ್ಮ ಶಾಂತಿ ತೃಪ್ತಿಗೆ ಕಾರಣವಾಗುತ್ತಿವೆ.

ಹಝ್ರತ್ ಮಸೀಹ್ ಮೌಊದ್(ಅ) ರವರ ಅತಿಥಿಗಳನ್ನು ಮನ: ಪೂರ್ವಕವಾಗಿಯೇ ಸ್ವಾಗತವಾಗುವುದು. ಅಲ್ಲಾಹನು ನಿಮ್ಮ ಈ ಸೇವೆಗಳನ್ನು ಮೆಚ್ಚುವಂತದ್ದಾಗಿದೆ. ನಿಶ್ಚಯವಾಗಿಯೂ ಅಲ್ಲಾಹನು ಮೆಚ್ಚಿದ ಕಾರ್ಯಗಳಿಗೆ ಹೆಚ್ಚಿನ ಅನುಗ್ರಹ ದೊರೆಯುತ್ತವೆ. ಆದುದರಿಂದ ಅಲ್ಲಾಹನು ನಿಮಗೆಲ್ಲರಿಗೆ ಅತ್ಯುತ್ತಮ ರೀತಿಯಲ್ಲಿ ಸೇವೆ ಸಲ್ಲಿಸುವ ಭಾಗ್ಯ ದಯಪಾಲಿಸಲಿ ಮತ್ತು ಅದರ ಅಜರ್ (ಪುಣ್ಯ) ನೀಡುವಂತಾಗಲಿ.

ಗತ ವರ್ಷ ಕೆಲವು ನ್ಯೂನತೆಗಳು, ದುರ್ಬಲತೆಗಳು ವ್ಯವಸ್ಥೆಯಲ್ಲಿ ಇದ್ದವು. ಅದರಲ್ಲಿ ಒಂದು Sound System ಆಗಿತ್ತು. ಈ ಸಲ ಅಸಂಖ್ಯಾತ ಸಣ್ಣ Loud Speaker ಹಚ್ಚಲಾಗಿದೆ. ಆದಷ್ಟು ಮಟ್ಟಿಗೆ ಉತ್ತಮ ರೀತಿಯಲ್ಲಿ ಸುಧಾರಿಸುವ ಪ್ರಯತ್ನ ಆಗಿದೆ ಎಂದು ನಂಬಿರುತ್ತೇನೆ. ಕೆಲವರನ್ನು ಚೆಕ್ ಮಾಡಲು ಲಂಡನ್‌ನಿಂದ ನಾನು ಕಳುಹಿಸಿದ್ದೆ. ಈ ರೀತಿಯಲ್ಲಿ ಚೆಕ್ ಮಾಡಲು ಅವರದ್ದೇ ಆದ ಒಂದು ಅನುಭವವೂ ಇದೆ. ಒಬ್ಬರು ಮತ್ತೊಬ್ಬರ ಅನುಭವದಿಂದ ಪ್ರಯೋಜನ ಪಡಬೇಕಾಗಿದೆ. ಅಲ್ಲಾಹನು ನೀವು ಮಾಡಿದಂತಹ ಈ ವ್ಯವಸ್ಥೆಯು ಆದಷ್ಟು ಮಟ್ಟಿಗೆ ಉತ್ತಮವಾಗಲಿ ಎಂದು ಹಾರೈಸುತ್ತೇನೆ.

ಮಹಿಳೆಯರಿಂದ ಹೆಚ್ಚಾಗಿ ದೂರು ಕೇಳಿಬರುವುದೇನೆಂದರೆ ಅಲ್ಲಿ ಧ್ವನಿಯಂತೂ ಸರಿಯಾಗಿಯೇ ಬರುತ್ತದೆ. ಆದರೆ ಪ್ರತಿಧ್ವನಿ ಎಷ್ಟರ ಮಟ್ಟಿಗೆ ಇರುತ್ತದೆಂದರೆ ಧ್ವನಿ ಸ್ಪಷ್ಟವಾಗಿ ಕೇಳಿಸುವುದಿಲ್ಲ. ವಾಕ್ಯಗಳು ಸರಿಯಾಗಿ ಅರ್ಥವಾಗುವುದಿಲ್ಲ. ವಿಶೇಷವಾಗಿ ಇಲ್ಲಿಂದ ಧ್ವನಿ ಮಾಡಿದಾಗ ಅಲ್ಲಿ ಸರಿಯಾಗಿ ಹೋಗುತ್ತದೆಯೇ ಇಲ್ಲವೆಂಬುದು ಚೆಕ್ ಮಾಡಿಕೊಳ್ಳಬೇಕಾಗಿದೆ.

ತನ್ನತನ ಮತ್ತು ಎಲ್ಲ ಸರಿಯಾಗಿದೆ ಎಂಬ ಊಹೆಯಲ್ಲಿ ಇರಬಾರದು. ವ್ಯವಸ್ಥೆ ಮಾಡುವವರೆಲ್ಲರೂ ಚೆಕ್ ಮಾಡಿಕೊಳ್ಳಬೇಕು. ಸಾಮರ್ಥ್ಯವಿದ್ದಷ್ಟು ಪ್ರಯತ್ನ ಮಾಡಬೇಕು. ಎಲ್ಲಿ ನ್ಯೂನತೆ ಇದೆ, ಹಾಗೂ ಮುಂದೆ ಅದನ್ನು ನಿಮಗೆ ಮಾಡಲು ಸಾಧ್ಯವಿಲ್ಲವೆಂದಾದರೆ ದುಆ ಮಾಡಬೇಕು. ಅಲ್ಲಾಹನು ದುಆ ಮೂಲಕವೂ ಕಾರ್ಯಗಳನ್ನು ಉತ್ತಮಗೊಳಿಸುತ್ತಾನೆ.

ಅದೇ ರೀತಿ ಹಿಂದಿನ ವರ್ಷ ಬಂದ ಅತಿಥಿಗಳ ಕುರಿತು ನನಗೆ ವರದಿಯೇ ದೊರೆಯಲಿಲ್ಲ, ವಿಶೇಷವಾಗಿ ಮಹಿಳೆಯರಿಂದ ವರದಿ ದೊರಕಿತ್ತು. ಮಕ್ಕಳಿಗೆ ಮತ್ತು ಮಹಿಳೆಯರಿಗೆ ರಾತ್ರಿ ಮೂರು ಗಂಟೆಯವರೆಗೆ ತನ್ನ ಹಾಸಿಗೆ ಅಥವಾ ಇತರ ಒದಗಿಸಬೇಕಾದ ವ್ಯವಸ್ಥೆ ಮಾಡಬೇಕಾಯಿತು. ಅವರ ದೂರು ಎನಿತ್ತೆಂದರೆ ಕೆಲವರಿಗೆ ಸಾಲಿನಿಂದ ಹೊರಗಿರಿಸಿ ತಮಗೆ ಬೇಕಾದನ್ನು ಕೊಡಲಾಗುತ್ತಿತ್ತು. ಮತ್ತು ಕೆಲವರಿಗೆ ನಿರಾಕರಿಸಲಾಗುತಿತ್ತು. ಈ ತಾರತಮ್ಯ ಎಂದೂ ಆಗಬಾರದಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ರವರು ಆತಿಥ್ಯಕ್ಕೆ ಮಿತಿಯೇ ಇರಲಿಲ್ಲ. ಅವರು ಎಲ್ಲ ಅತಿಥಿಗಳಿಗೆ ವರ್ಷವಿಡಿ ಅವರ ಅಗತ್ಯಗನುಗುಣವಾಗಿ ಪೂರೈಸಲು ಪ್ರಯತ್ನ ಮಾಡುತ್ತಿದ್ದರು. ಆದರೆ ಜಲ್ಸದ ದಿನಗಳಲ್ಲಿ ಅವರು ನುಡಿದರು. ವಿವಿಧ ದೇಶಗಳ ಅತಿಥಿಗಳು ಬರುತ್ತಾರೆ. ಆದುದರಿಂದ ಜಲ್ಸದಲ್ಲಿ ಪ್ರತಿಯೊಬ್ಬರಿಗೆ ಸಮಾನ ರೀತಿಯಲ್ಲಿ ವರ್ತಿಸಬೇಕಾಗುತ್ತದೆ. ಆದುದರಿಂದ ಯಾರೊಬ್ಬರಿಗೂ ಭಿನ್ನ ರೀತಿಯಲ್ಲಿ ವರ್ತಿಸಬಾರದು. ಲಜ್ನ ಕಡೆಯಿಂದ ಈ ದೂರು ಬಂದಿದೆ. ನಮಗೆ ಎರಡು ಸಾವಿರ Bed (ಹಾಸಿಗೆ) ನೀಡಲಾಗಿತ್ತು ಅದೆಲ್ಲ ಬಳಕೆಯಾಗಿವೆ. ಜನರಿಗೆ ಕೊಟ್ಟಾಗಿದೆ. ಆದುದರಿಂದ ಆಯೋಜಕರು ಆದಷ್ಟು ಬೇಗ ಇನ್ನು ಹೆಚ್ಚಿನ ವ್ಯವಸ್ಥೆ ಮಾಡಬೇಕು. ರಾತ್ರಿ ಇನ್ನಷ್ಟು ಅತಿಥಿಗಳು ಬಂದರೆ ಅವರಿಗೆ ಹಾಸಿಗೆ ಇಲ್ಲದಂತಾಗಬಾರದು. ಇದ್ದರೆ ಅವರಿಗೆ ಒದಗಿಸಬೇಕು. ಇಲ್ಲದಿದ್ದರೆ ತರುವ ಪ್ರಯತ್ನ ಮಾಡಬೇಕು. ಪುರುಷರಿಗೆ ಬೇಕಾದರೆ ಕೊಡಬೇಡಿ. ಆದರೆ ಮಹಿಳೆಯರಿಗೆ ಮಕ್ಕಳಿಗೆ ಅವಶ್ಯವಾಗಿ ಒದಗಿಸಬೇಕು. ಪುರುಷರಿಗೆ ಇಂದು ರಾತ್ರಿ ಹಾಸಿಗೆಯ ಅಭಾವವಿದ್ದರೆ ಸಹಿಸಿಕೊಳ್ಳಬೇಕು. ನಾಳೆ ಇನ್‌ಶಾಅಲ್ಲಾಹ್ ವ್ಯವಸ್ಥೆ ಆಗಬಹುದು.

ಒಟ್ಟಿನಲ್ಲಿ ಈ ವರ್ಷ ಅದೇ ರೀತಿ ಬೇರೆ ವ್ಯವಸ್ಥೆಗಳ ಬಗ್ಗೆ ನನಗೆ ತಿಳಿಸಲಾಗಿದೆ. ಸುಧಾರಣೆಯ ಪ್ರಯತ್ನ ಮಾಡಲಾಗಿದೆ ಎಂದು. ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ. ಉಳಿದ ವ್ಯವಸ್ಥೆಗಳಿವೆ. ಅಲ್ಲಾಹನು ಇವೆಲ್ಲ ವ್ಯವಸ್ಥೆಗಳನ್ನು ಸರಿಯಾದ ರೀತಿಯಲ್ಲಿ ನೆರವೇರುವಂತೆ ಮತ್ತು ಅತಿಥಿಗಳ ಹಕ್ಕುಗಳನ್ನು ನಿಮಗೆಲ್ಲರಿಗು ಪಾಲಿಸುವ ಭಾಗ್ಯ ದೊರೆಯುವಂತಾಗಲಿ.

ಹಾಸಿಗೆಯ ವಿಷಯದಲ್ಲಿ ನಾನು ಮಾತನಾಡಿದ್ದೇನೆ. ಲಜ್ನ ಅಧ್ಯಕ್ಷೆಗೆ ನಾನು ಹೇಳಿರುತ್ತೇನೆ. ನೀವು ಮತ್ತು ನಿಮ್ಮ ಆಮಿಲ ಯಾರೆಲ್ಲ ಅಧಿಕಾರಿಗಳಿದ್ದಾರೆ ಅವರು ತಮ್ಮ ಹಾಸಿಗೆಗಳನ್ನು ಅತಿಥಿಗಳಿಗೆ ನೀಡಿರಿ. ನಿಮಗೆ ಸ್ವಯಂ ಕೆಳಗೆ ಮಲಗುವ ಅಗತ್ಯ ಬಿದ್ದರೆ ಚಿಂತೆ ಇಲ್ಲ. ಅದೇ ರೀತಿ ಕಾರ್ಯಕರ್ತರು ಮತ್ತು ಅಧಿಕಾರಿಯ ಅತಿಥಿಗಳಿಗೆ ಹಾಸಿಗೆಯ ಕೊರತೆ ಕಂಡುಬಂದರೆ ತಮ್ಮ ಹಾಸಿಗೆಯನ್ನು ಅವರಿಗೆ ನೀಡಬೇಕು. ಈಗ ದುಆ ಮಾಡೋಣ.

ಅನಂತರ ಹುಝೂರ್ ದುಆ ಮಾಡಿಸಿದರು. ಅನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು. ಜಲ್ಸಗಳ ಮೂರು ದಿನವಸಗಳಲ್ಲೂ ಹುಝೂರ್ ಅವರ ವಸತಿ ಅದೇ ವಿಶಾಲವಾದ ಕಟ್ಟಡದ ಒಂದು ಭಾಗದಲ್ಲಿತ್ತು.

9.45 ಗಂಟೆಗೆ ಹುಝೂರ್ ಜಲ್ಸ ಸ್ಥಳದ ಪುರುಷರ ಸಭಾಂಗಣದಲ್ಲಿ ಆಗಮಿಸಿ ನಮಾಝ್ ಮಗ್ರಿಬ್ ಇಶಾಅ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**5 ಜೂನ್ 2015 ಶುಕ್ರವಾರ**

ಹುಝೂರ್ ಮುಂಜಾನೆ ನಾಲ್ಕೂವರೆ ಗಂಟೆಗೆ ಪುರುಷರ ಜಲ್ಸ ಸ್ಥಳದಲ್ಲಿ ಬಂದು ನಮಾಝ್ ಫಜ್ರ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರ್ ಅಂಚೆಗಳನ್ನು ನೋಡಿಕೊಂಡರು. ವಿವಿಧ ರೀತಿಯ ಕಚೇರಿ ಕಾರ್ಯಗಳ ನಿರ್ವಹಣೆಯಲ್ಲಿ ತೊಡಗಿದರು.

ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಜಮಾಅತ್ ಜರ್ಮನಿಯ 40ನೇ ಜಲ್ಸ ಸಾಲಾನದ ಪ್ರಥಮ ದಿನವಾಗಿತ್ತು. ಮಧ್ಯಾಹ್ನ 1.55 ಗಂಟೆಗೆ ಹುಝೂರ್ ಧ್ವಜಾರೋಹಣಗೈಯಲು ಜಲ್ಸ ಸ್ಥಳದ ನಾಲ್ಕೂ ಸಭಾಂಗಣಗಳ ಮಧ್ಯದ ಒಂದು ಮುಕ್ತ ಅಂಗಳಕ್ಕೆ ಆಗಮಿಸಿ ಲಿವಾಯೆ ಅಹ್ಮದಿಯತ್ (ಅಹ್ಮದಿಯಾ ಧ್ವಜ) ಹಾರಿಸಿದರು. ಜೊತೆಯಲ್ಲಿ ಅಮೀರ್ ಸಾಹಿಬ್ ಜರ್ಮನ್, ಜರ್ಮನಿಯ ರಾಷ್ಟ್ರೀಯ ಧ್ವಜ ಹಾರಿಸಿದರು. ಲಿವಾಯೇ ಅಹ್ಮದಿಯತ್ ಹಾರಿಸುತ್ತಿರುವಾಗ ಜಮಾಅತ್ ಬಾಂಧವರು "ರಬ್ಬನಾ ತಖಬ್ಬಲ್ ಮಿನ್ನಾ ಇನ್ನಕ ಅಂತಸ್ ಸಮೀವುಲ್ ಅಲೀಮ್" ದುಆ ಪಠಿಸುತ್ತಿದ್ದರು.

MTA International ಜಲ್ಸ ಸ್ಥಳದಿಂದ ಇದರ ನೇರ ಪ್ರಸಾರವನ್ನು ಮುಂಜಾನೆಯಿಂದಲೇ ಪ್ರಾರಂಭಿಸಿತ್ತು ಧ್ವಜಾರೋಹಣದ ಈ ಸಮಾರಂಭವು ಲೋಕದಾದ್ಯಂತ ಬಿತ್ತರಿಸಲಾಯಿತು.

ಅನಂತರ ಹುಝೂರ್ ಜಲ್ಸ ಸ್ಥಳಕ್ಕೆ ಆಗಮಿಸಿ ಜುಮಅ ಕುತುಬಾ ನೀಡಿದರು. ಅದರೊಂದಿಗೆ ಜಲ್ಸ ಉದ್ಘಾಟನೆಗೊಂಡಿತು.

(ಹುಝೂರರ ಈ ಖುತ್‌ಬ ಜುಮುಅ ಬದರ್ ಪತ್ರಿಕೆಯ 25 ಜೂನ್ 2015 ಸಂಚಿಕೆ ಸಂಖ್ಯೆ 26 ರಲ್ಲಿ ಪ್ರಕಟಣೆಗೊಂಡಿದೆ)

ಹುಝೂರರ ಈ ಖುತ್‌ಬ ಜುಮಅ ಮೂರು ಗಂಟೆಯ ತನಕ ಜಾರಿಯಲ್ಲಿತ್ತು ಅನಂತರ ಹುಝೂರ್ ಜುಮಅ ನಮಾಝ್‌ನೊಂದಿಗೆ ಅಸರ್ ನಮಾಝ್ ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝುಗಳ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿ ನಿಲಯಕ್ಕೆ ತೆರಳಿದರು.

ಹುಝೂರರ ಈ ಖುತುಬ ಜುಮಅ MTA International ನಲ್ಲಿ ನೇರ ಪ್ರಸಾರ ಮಾಡಲಾಯಿತು. ಸ್ಥಳದಲ್ಲಿಯೇ ಕೆಳಗೆ ನಮೂದಿತ ಹನ್ನೊಂದು ಭಾಷೆಗಳಲ್ಲಿ ಅದರ ಅನುವಾದ ಜೊತೆ ಜೊತೆಯಲ್ಲಿಯೇ ಮಾಡಲಾಯಿತು. ಅರಬಿ, ಇಂಗ್ಲೀಷ್, ಜರ್ಮನ್, ತುರ್ಕಿ, ಪಾರ್ಸಿ, ರೂಸಿ (ರಷ್ಯನ್), ಅಲ್ಬಾನಿಯನ್, ಬೋಸ್ನಿಯನ್, ಬಲಗಾರಿಯನ್, ಬಾಂಗ್ಲ, ಮತ್ತು ಫ್ರೆಂಚ್.

ಅಲ್ಲದೆ ಅರಬಿ, ಬಾಂಗ್ಲಾ ಮತ್ತು ಫ್ರೆಂಚ್ ಭಾಷಾಂತರ ಜರ್ಮನಿಯಿಂದ ನೇರವಾಗಿ MTA ಯಲ್ಲಿ ಬಿತ್ತರಿಸಲಾಯಿತು. ಮತ್ತು ಇಂಗ್ಲೀಷ್ ಭಾಷಾಂತರ ಲಂಡನ್ನಿನಿಂದ ನೇರ ಪ್ರಸಾರ ಮಾಡಲಾಯಿತು.

ರೇಡಿಯೋದಲ್ಲಿ ಜರ್ಮನ್ ಭಾಷೆ ಅಲ್ಲದೇ ಇತರ ವಿಭಿನ್ನ ಭಾಷೆಗಳ ಅನುವಾದ ಬಿತ್ತರಗೊಳ್ಳುತ್ತಿತ್ತು.

ಈ ಹಿಂದಿನ ಸಮಯ ಹುಝೂರ್ ವಿವಿಧ ಕಚೇರಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಇಂದು ಕಾರ್ಯಕ್ರಮದನ್ವಯ ರಷ್ಯನ್, ಕ್ರೋಶಿಯಾ ಮತ್ತು ಲಿಥ್ವಾನಿಯದಿಂದ ಬಂದ ತಂಡಗಳೊಂದಿಗೆ ಹುಝೂರರ ಭೇಟಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. 8 ಗಂಟೆಗೆ ಹುಝೂರ್ ಆಗಮಿಸಿದರು. ತಂಡಗಳಲ್ಲಿ ಭಾಗಿಯದ ಜನರು ಕೆಲವು ಪ್ರಶ್ನೆಗಳನ್ನು ಕೇಳಿದರು. ಅದರ ಉತ್ತರ ಕೊಡಲಾಯಿತು. ಇಲ್ಲಿ ಸಂಕ್ಷಿಪ್ತವಾಗಿ ಆ ಸಭೆಗಳ ವಿವರ ನೀಡಲಾಗುತ್ತಿದೆ.

**ರಷ್ಯನ್ ತಂಡದವರ ಭೇಟಿ**

ಮೊದಲು ರಷ್ಯನ್ ದೇಶದ ತಂಡವು ಹುಝೂರರೊಂದಿಗೆ ಭೇಟಿ ಮಾಡುವ ಭಾಗ್ಯ ಪಡೆದರು. ಪ್ರಸಕ್ತ ವರ್ಷ ರಷ್ಯನ್ ದೇಶಗಳಿಂದ 40 ಜನರ ಒಂದು ತಂಡ ಜಲ್ಸ ಸಾಲಾನ ಜರ್ಮನಿಯಲ್ಲಿ ಭಾಗವಹಿಸಿದ್ದರು. ಅದರಲ್ಲಿ ರಷ್ಯನ್, ತಾತಾರ್, ತಾಜಿಕ್, ಆರ್‌ಮಿಲಿಯನ್, ಉಝುಬಿಕ್, ಖಾಝಿಬ್ ಮತ್ತು ಚೇಚನ್ ಮುಂತಾದ ಸಮುದಾಯಗಳ ಜನರು ಭಾಗಿಯಾಗಿದ್ದರು. ಆ ತಂಡಗಳಲ್ಲಿ ಭಾಗಿಯಾದ ಜನರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಹುಝೂರ್ ಭೇಟಿಯ ಪ್ರಾರಂಭದಲ್ಲಿ ಅವರ ಕುಶಲೋಪರಿಯನ್ನು ವಿಚಾರಿಸಿ ಸರತಿಯಂತೆ ಎಲ್ಲರ ಪರಿಚಯ ಪಡೆದರು.

ಕಜಕಿಸ್ತಾನದಿಂದ ಅತಿಥಿಯೋರ್ವರಾದ ಇಸ್ಲಾಮ್ ಸಾಹಿಬ್ ಹೇಳಿದರು. ನಾನು 2000 ಇಸವಿಯಲ್ಲಿ ಬೈಅತ್ ಮಾಡಿದ್ದರು ಇಂದು ತನ್ನ ಜೀವನದಲ್ಲಿ ಮೊದಲ ಬಾರಿಗೆ ಹುಝೂರ್‌ರವರನ್ನು ಭೇಟಿಯಾಗುತ್ತಿದ್ದೇನೆ.

ಕಿರ್‌ಗಿಸ್ತಾನಕ್ಕೆ ಸಂಬಂಧಿಸಿದ ಮಿತ್ರರೊಬ್ಬರು ನೂರಿಮ್ ಸಾಹಿಬ್ ಹೇಳಿದರು. ನಾನು ಇಂದು ಬೈಅತ್ ಮಾಡಲು ನಿರ್ಧರಿಸಿದ್ದೇನೆ. ಇನ್ನೋರ್ವ ಅತಿಥಿ ಹೇಳಿದರು. ಹಿಂದಿನ ವರ್ಷ ಹುಝೂರ್ ತನ್ನ ಪತ್ನಿಗೋಸ್ಕರ ಒಂದು ಔಷಧಿ ಹೇಳಿಕೊಟ್ಟಿದ್ದರು. ಆಕೆ ಈಗ ಅಲ್ಲಾಹನ ಅನುಗ್ರಹದಿಂದ ಚೆನ್ನಾಗಿದ್ದಾರೆ. ನಾನು ಹುಝೂರರಿಗೆ ಕೃತಜ್ಞತೆಯನ್ನು ಅರ್ಪಿಸಬಯಸುತ್ತೇನೆ.

ಇನ್ನೋರ್ವ ಅತಿಥಿ ವಿಕ್ಟರ್ ಸಾಹಿಬ್ ಹೇಳಿದರು. "ನಾನು ಮೊದಲು ಕ್ರೈಸ್ತನಾಗಿದ್ದೆ. ಅಲ್ಲಾಹನ ಅನುಗ್ರಹದಿಂದ ನಾಲ್ಕು ತಿಂಗಳ ಹಿಂದೆ ಅಹ್ಮದಿಯತ್ ಸ್ವೀಕರಿಸಿದ್ದೇನೆ."

ಜಾರ್ಜಿಯಾ, ಆರ್‌ಮೇನಿಯಾ, ತಜಕಿಸ್ತಾನ ಮತ್ತು ಚಚೇನಿಯಾಕ್ಕೆ ಸಂಬಂಧಿಸಿದ ಅತಿಥಿಗಳು ಸಹ ತಮ್ಮ ಪರಿಚಯ ಮಾಡಿಕೊಟ್ಟರು. ಚಚೇನಿಯಾದ ಓರ್ವ ಅತಿಥಿಯ ಹೇಳಿದರು. "ನಾನು ಅಹ್ಮದಿ ಅಲ್ಲ. ಅಹ್ಮದಿಯತ್ತನ್ನು ಕಲಿಯುತ್ತಿದ್ದೇನೆ. ಆದರೆ ನನ್ನ ತಂದೆ ಅಲ್ಲಾಹನ ಅನುಗ್ರಹದಿಂದ ಅಹ್ಮದಿ ಆಗಿದ್ದಾರೆ ಮತ್ತು ಅಲ್ಲಿಯ ಇಮಾಮರಾಗಿದ್ದಾರೆ."

ಹುಝೂರ್ ಅತಿಥಿಗಳೊಡನೆ ಕೇಳಿದರು. "ಇಂದು ಜಲ್ಸದ ಮೊದಲ ದಿನವಾಗಿದೆ ನಿಮ್ಮಲ್ಲಿ ಎಷ್ಟು ಜನರು ಪ್ರಥಮ ಬಾರಿ ಬಂದವರಾಗಿದ್ದೀರಿ. ನಿಮಗೆ ಜಲ್ಸ ಹೇಗೆ ಅನಿಸಿದೆ?"

ಆಗ ಅತಿಥಿಗಳು ಹೇಳಿದರು. "ಎಂದಿನಂತೆ ನಾವು ತುಂಬ ಭಾವುಕರಾಗಿದ್ದೇವೆ. ನಮಗೆ ಇಲ್ಲಿ ಬಂದು ತುಂಬ ಹಿತವೆನಿಸುತ್ತಿದೆ."

ಅತಿಥಿಯೋರ್ವರು ಪ್ರಶ್ನೆ ಕೇಳಿದರು. ಹಲವರು ಹೇಳುತ್ತಾರೆ. ಇಸ್ಲಾಮ್ ಶಾಂತಿಯ ಧರ್ಮವಾಗಿದೆ. ಪ್ರೀತಿಯ ಧರ್ಮವಾಗಿದೆ ಎಂದು, ಇಸ್ಲಾಮ್ ಶಾಂತಿ ಹಾಗೂ ಪ್ರೀತಿಯ ಧರ್ಮ ಆಗಿದ್ದರೆ ಇಸ್ಲಾಮಿನಲ್ಲಿ ಅಷ್ಟೊಂದು ಕಠಿಣ ಶಿಕ್ಷೆಗಳು ಏಕಿವೆ? ಕಲ್ಲು ಹೊಡೆದು ಕೊಲ್ಲುವ ಶಿಕ್ಷೆ ಏಕೆ ಇಡಲಾಗಿದೆ?

ಆಗ ಹುಝೂರ್ ಹೇಳಿದರು: ಎಲ್ಲಿಯವರೆಗೆ ಪವಿತ್ರ ಖುರ್‌ಆನ್‌ನಲ್ಲಿ ಶಿಕ್ಷೆಗೆ ಸಂಬಂಧಿಸಿದ ಶಿಕ್ಷಣ ಅವತರಿಸುವವರೆಗೆ ಯಹೂದಿ ಶಿಕ್ಷಣದ ಪ್ರಕಾರ ಶಿಕ್ಷೆಗಳು ದೊರೆಯುತ್ತಿದ್ದವು. ಇಸ್ಲಾಮಿ ಶಿಕ್ಷಣದ ಪ್ರಕಾರ ಶಿಕ್ಷೆಗಳಲ್ಲಿ ಬಹಳಷ್ಟು ಮೃದು ಧೋರಣೆಗಳು ಅನುಸರಿಸಲಾಗುತ್ತಿವೆ. ಯಹೂದಿ ಶಿಕ್ಷಣದನ್ವಯ ಕಲ್ಲುಗಳಿಂದ ಹೊಡೆದು ಕೊಲ್ಲುವ ಶಿಕ್ಷೆಯಿತ್ತು. ಆದರೆ ನಂತರ ಪವಿತ್ರ ಖುರಆನ್ ಬಾರುಕೋಲಿನಿಂದ ಹೊಡೆಯುವ ಶಿಕ್ಷೆ ವಿಧಿಸಿದೆ.

ಹುಝೂರ್ ಹೇಳಿದರು. ಒಂದು ವರದಿಯಲ್ಲಿ ಬರುತ್ತಿದೆ. ಹಝ್ರತ್ ರಸೂಲುಲ್ಲಾಹ್(ಸ) ರವರ ಬಳಿ ಒಬ್ಬ ವ್ಯಕ್ತಿ ಬಂದು ಮತ್ತು ಹೇಳಿದ. ಓ ಅಲ್ಲಾಹನ ಪ್ರವಾದಿಯರೇ! ನಾನು ವ್ಯಭಿಚಾರ ಎಸಗಿದ್ದೇನೆ. ಅಲ್ಲಾಹನ ಗ್ರಂಥದ ಆಜ್ಞೆ ನನ್ನ ಮೇಲೆ ಪ್ರಯೋಗಿಸಿ, ರಸೂಲುಲ್ಲಾಹ್(ಸ) ಅವನಿಂದ ತಮ್ಮ ಮುಖ ತಿರುಗಿಸಿಕೊಂಡರು, ಅವನು ಮತ್ತೊಮ್ಮೆ ಹೇಳಿದ, ನನ್ನಿಂದ ತಪ್ಪಾಗಿದೆ, ಅವರು ಮತ್ತೆ ಮುಖ ತಿರುಗಿಸಿಕೊಂಡರು. ಆ ವ್ಯಕ್ತಿ ಮೂರನೆಯ ಸಲ ಹೇಳಿದ. ಓ ಅಲ್ಲಾಹನ ಪ್ರವಾದಿಯರೇ! ನಾನು ಈ ತಪ್ಪನ್ನು ಮಾಡಿರುತ್ತೇನೆ. ನನ್ನ ಮೇಲೆ ಅಲ್ಲಾಹನ ಗ್ರಂಥದ ಆಜ್ಞೆ ಪ್ರಯೋಗಿಸಿರಿ. ಅವನು ನಾಲ್ಕು ಸಲ ಅದೇ ತರಹ ಹೇಳಿದ, ಆಗ ರಸೂಲುಲ್ಲಾಹ್(ಸ) ಅವನನ್ನು ಕಲ್ಲುಗಳಿಂದ ಹೊಡೆಯುವ ಆಜ್ಞೆ ನೀಡಿದರು. ಅದಾಗ್ಯೂ ಅವನಿಗೆ ಕಲ್ಲುಗಳಿಂದ ಹೊಡೆಯುತ್ತಿದ್ದಾಗ ಅವನು ಕಲ್ಲುಗಳ ಹೊಡೆತ ತಾಳಲಾರದೆ ಓಡಿ ಹೋದನು. ಆಗ ಜನರು ಅವನನ್ನು ಹಿಡಿದರು ಮತ್ತು ಹತ್ಯೆಗೈದರು. ರಸೂಲುಲ್ಲಾಹ್(ಸ) ರವರ ಮುಂದೆ ಈ ಘಟನೆ ವಿವರಿಸಿದಾಗ ಅವರು ಹೇಳಿದರು. ನೀವು ಅವನನ್ನು ಏಕೆ ಬಿಟ್ಟು ಬಿಡಲಿಲ್ಲ. ಅವನು ಪಶ್ಚಾತ್ತಾಪ ಪಡಬಹುದಾಗಿತ್ತು. ಮತ್ತು ಅಲ್ಲಾಹನು ಅವನ ಪಶ್ಚಾತ್ತಾಪ ಸ್ವೀಕರಿಸುತ್ತಿದ್ದನು.

ಹುಝೂರ್ ಹೇಳಿದರು. ಅದೇ ರೀತಿಯ ಹಲವು ವರದದಿಗಳಿವೆ. ಉಗ್ರರು ಇಂತಹ ವರದಿಗಳನ್ನೇ ಆಯ್ದುಕೊಂಡಿದ್ದಾರೆ. ಅದಾಗ್ಯೂ ಪವಿತ್ರ ಖುರ್‌ಆನ್‌ನಿಂದ ಈ ಮಾತುಗಳು ದೃಢಪಟ್ಟಿಲ್ಲ.

ಹುಝೂರ್ ಹೇಳಿದರು. ರಸೂಲುಲ್ಲಾಹ್(ಸ) ರವರ ಬಳಿ ಒಬ್ಬ ವ್ಯಕ್ತಿ ಬಂದು ಹೇಳಿದನು. ನಾನು ಅಲ್ಲಾಹನ ಸೀಮೆಗಳನ್ನು ಉಲ್ಲಂಘಿಸಿರುತ್ತೇನೆ. ನನ್ನ ಮೇಲೆ ನಿರ್ಬಂಧ ಹೇರಿರಿ.

ರಸೂಲುಲ್ಲಾಹ್(ಸ) ಅವನಿಂದ ಏನನ್ನೂ ಕೇಳಲಿಲ್ಲ. ಅದಾದ ನಂತರ ನಮಾಝಿನ ಸಮಯ ಬಂದಿತು. ರಸೂಲುಲ್ಲಾಹ್(ಸ) ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಮತ್ತೆ ಆ ವ್ಯಕ್ತಿಯೇ ಹುಝೂರ್(ಸ) ಬಳಿ ಬಂದು ಹೇಳಿದ. ನನ್ನಿಂದ ಅಲ್ಲಾಹನ ಸೀಮೋಲ್ಲಂಘನೆ ಆಗಿದೆ. ನನ್ನ ಮೇಲೆ ನಿರ್ಬಂಧ ಹೇರಿರಿ. ಹಝ್ರತ್ ರಸೂಲುಲ್ಲಾಹ್(ಸ) ಕೇಳಿದರು. ನೀವು ನಮ್ಮ ಜೊತೆ ನಮಾಝ್ ನಿರ್ವಹಿಸಲಿಲ್ಲವೆ? ಅವನು ಹೇಳಿದ ಹೌದು ನಿರ್ವಹಿಸಿರುತ್ತೇನೆ. ರಸೂಲುಲ್ಲಾಹ್(ಸ) ಹೇಳಿದರು. ಹಾಗಾದರೆ ಅಲ್ಲಾಹನು ನಿಮ್ಮ ಪಾಪವನ್ನು ಕ್ಷಮಿಸಿದನು. ಅಂದರೆ ಇಸ್ಲಾಮಿ ಶಿಕ್ಷೆಗಳು ಕಠಿಣವಾಗಿರುವುದರ ಜೊತೆಯಲ್ಲಿ ಮೃದುತ್ವವೂ ಇದೆ. ಹಝ್ರತ್ ರಸೂಲುಲ್ಲಾಹ್(ಸ) ಸಾಕ್ಷಾತ್ ಸರ್ವಲೋಕಗಳಿಗಾಗಿ ಅನುಗ್ರಹಿತ ರಾದವವರಾಗಿದ್ದಾರೆ.

ಮೊದಲು ಕ್ರೈಸ್ತರಾಗಿದ್ದ ಓರ್ವ ರಷ್ಯನ್ ಮಿತ್ರರಿಗೆ ಇದೆ ವರ್ಷ ಮಾರ್ಚಿನಲ್ಲಿ ಅಹ್ಮದಿಯತ್ ಸ್ವೀಕರಿಸುವ ಭಾಗ್ಯ ದೊರೆತಿದೆ. ಅವರು ತೀರ ಕುತೂಹಲದಿಂದ ಹುಝೂರರ ಆಗಮನವನ್ನು ನಿರೀಕ್ಷಿಸುತ್ತಿದ್ದರು. ಈ ಶುಭ ಸಂದರ್ಭದಲ್ಲಿ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಭಾವಚಿತ್ರ ತೆಗೆಯುವ ಅವಕಾಶ ಸಿಕ್ಕಿದಾಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ. ಭಾವಚಿತ್ರ ತೆಗೆಯುವ ಮುಂಚೆಯೇ ಹುಝೂರರ ಶುಭಹಸ್ತವನ್ನು ಚುಂಬಿಸಿದರು. ನಂತರ ತಿಳಿಸಿದರು. ನನ್ನ ಇಡೀ ಜೀವನದ ಸಂತೋಷಗಳಲ್ಲಿ ಇದು ಅವಿಸ್ಮರಣೀಯವಾಗಿದೆ. ಕೇವಲ ಮೂರು ತಿಂಗಳ ಒಳಗೆಯೇ ಪ್ರೀತಿಯ ಹುಝೂರರನ್ನು ಭೇಟಿಯಾಗುವೆನು ಎಂದು ತಾನು ಊಹಿಸಿಯೂ ಇರಲಿಲ್ಲ.

ಓರ್ವ ಮಹಿಳೆ ತನ್ನ ಅಂಗವಿಕಲ ಮಗುವಿನ ಜೊತೆಗೆ ಬಂದಿದ್ದರು. ಆಕೆಗೆ ತನ್ನ ಭಾವನೆಯನ್ನು ಅಧುಮಿಡಲು ಸಾಧ್ಯವಾಗಲಿಲ್ಲ. ಸುಮಾರು ಅರ್ಧ ಗಂಟೆಗಳ ಕಾಲ ಅಳ ಹತ್ತಿದಳು. ಮತ್ತು ಹೇಳಿದಳು. ನಾನು ಇಡೀ ಜೀವನದಲ್ಲಿ ಇಂತಹ ಒಬ್ಬರು ಪವಿತ್ರ ಮನುಷ್ಯರೊಂದಿಗೆ ಭೇಟಿಯಾಗುವೆನೆಂದು ಯೋಚಿಸಿರಲಿಲ್ಲ. ಅವರು ಈ ರೀತಿ ನಮ್ಮೊಡನೆ ಪ್ರೀತಿಯ ವ್ಯವಹಾರ ಮಾಡುವರು ಎಂದು ಯೋಚಿಸಿರಲಿಲ್ಲ. ಆ ಅಂಗವಿಕಲರಿಗೆ 11 ವರ್ಷಗಳಿಂದ ನಡೆಯಲು ಆಗುತ್ತಿರಲಿಲ್ಲ. ಆದರೆ ಎಲ್ಲ ಮಾತುಗಳು ಗ್ರಹಿಸಿಕೊಳ್ಳುತ್ತಿದ್ದ ಮತ್ತು ಸಾಂಕೇತಿಕ ರೂಪದಲ್ಲಿ ಕೆಲವು ಶಬ್ದಗಳ ಮೂಲಕ ಉತ್ತರ ನೀಡುತ್ತಿದ್ದ. ಹುಝೂರರೊಂದಿಗೆ ನಿಮ್ಮ ಭೇಟಿ ಹೇಗಿತ್ತು ಎಂದು ಕೇಳಿದಾಗ ಅವನು ಮುಗುಳ್ನಗುತ್ತ ಕೈಯನ್ನು ಮೇಲಕ್ಕೆತ್ತಿ ಹೇಳಿದನು. "ಖರಾಷೂ" ಅಂದರೆ ತುಂಬ ಒಳ್ಳೆಯದಿತ್ತು.

2000 ಇಸವಿಯಲ್ಲಿ ಬೈಅತ್ ಮಾಡಿದ್ದ ತುಂಬ ನಿಷ್ಠಾವಂತ ಅಹ್ಮದಿಯಾಗಿರುವ ಕಜಕಿಸ್ತಾನದ ಓರ್ವ ಯುವಕನ ಖಲೀಫರೊಂದಿಗಿನ ಮೊದಲ ಭೇಟಿಯಾಗಿತ್ತು. ಬೇಟಿಯ ನಂತರ ಅವರು ಹೇಳಿದರು. ಹುಝೂರರನ್ನು ನೋಡಿದಾಗ ನನಗೆ ಜೀವನದಲ್ಲಿ ಮೊದಲ ಬಾರಿಗೆ ಅನಿಸಿತು. ನಾನು ಮಾತನಾಡಲು ಸಾಧ್ಯವಿಲ್ಲ. ಏಕೆಂದರೆ ಅಲ್ಲಾಹನ ಖಲೀಫರು ಕೆಲವು ಹೆಜ್ಜೆಗಳ ಸಮೀಪವಿದ್ದರು. ನನ್ನ

ಮೇಲೆ ಆಧ್ಯಾತ್ಮಿಕ ಭೀತಿ ಉಂಟಾಯಿತು. ನಂತರ ಅದು ಮೆಲ್ಲ ಮೆಲ್ಲನೆ ದೂರವಾಯಿತು. ಮತ್ತು ಅಪರಿಮಿತ ಪ್ರೀತಿ ಅದರ ಜಾಗ ಪಡೆಯಿತು. ಹುಝೂರ್ ನನಗೆ ಭಾವಚಿತ್ರ ತೆಗೆಯಿಸಿಕೊಳ್ಳಲು ಕರೆದಾಗ ನಾನು ಸಹಜವಾಗಿ ಅಪ್ಪಿಕೊಳ್ಳ ಬಯಸುತ್ತಿದ್ದೆ. ತುಂಬ ಕಠಿಣವಾಗಿ ತನ್ನನ್ನು ಸುಧಾರಿಸಿಕೊಂಡೆ, ಅಷ್ಟರಲ್ಲಿಯೇ ನನಗೆ ಭಾಸವಾಯಿತು. ನಾನು ಹುಝೂರರ ಕೈಯನ್ನು ಬಲವಾಗಿ ಹಿಡಿದುಕೊಂಡಿದ್ದೇನೆ ಎಂದು.

ರಷ್ಯನ್ ತಂಡದಲ್ಲಿ ಬಾಝ್ಖೂನ್ (ತಾತಾರಿಸ್ತಾನ್) ಯಿಂದ ಗುಲನಾಹದ್ ಸಾಹಿಬ ಮೊದಲ ಬಾರಿಗೆ ಜಲ್ಸಕ್ಕೆ ಆಗಮಿಸಿದರು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತ ಹೇಳಿದರು. ನಾನು ಮೊದಲ ಬಾರಿಗೆ ಇಂಥ ಜಲ್ಸ ಒಂದರಲ್ಲಿ ಭಾಗಿಯಾಗಿದ್ದೇನೆ. ಇದು ನನಗೆ ಒಂದು ಹೊಸ ಅನುಭವವಾಗಿತ್ತು. ಈ ಜಲ್ಸವು ನನ್ನ ವಿಶ್ವಾಸವನ್ನು ವೃದ್ಧಿಗೊಳಿಸಿದೆ. ನಾನು ಕಂಡಿದ್ದು ಹುಝೂರ್ ಎಲ್ಲಿ ಹೋಗುತ್ತಿದ್ದರೂ ಪ್ರತಿಯೊಬ್ಬರ ಪ್ರಯತ್ನವು ಅಲ್ಲಿ ತಲುಪಿ ಸಲಾಂ ಹೇಳಬೇಕು ಎನ್ನುವುದಾಗಿತ್ತು. ಈ ಪ್ರೀತಿಯೂ ಎರಡೂ ಕಡೆಯಿಂದ ಉಕ್ಕಿ ಬರುವಂತಿತ್ತು. ಹುಝೂರ್‌ರಿಂದ ಯಾರು ಸಲಾಮ್‌ನ ಉತ್ತರ ಪಡೆಯುತ್ತಿದ್ದರೋ ಅವರ ಸಂತೋಷಕ್ಕೆ ಪಾರವೇ ಇರುತ್ತಿರಲಿಲ್ಲ. ನಾನು ನನ್ನ ಜೀವನದಲ್ಲಿ ಮೊದಲ ಬಾರಿಗೆ ಅಷ್ಟೊಂದು ದೊಡ್ಡ ಸಮೂಹ ಮುಸಲ್ಮಾನರಲ್ಲಿ ಕಂಡಿದ್ದೇನೆ. ಅದರೆಲ್ಲರೂ ಒಂದೇ ಉದ್ದೇಶಕ್ಕಾಗಿ ಬಂದು ಸೇರಿದ್ದರು. ಎಲ್ಲ ವ್ಯವಸ್ಥೆಗಳು ಮತ್ತು ಕಾರ್ಯಕ್ರಮಗಳು ನೊಡಿ ನಾನು ಅಚ್ಚರಿಗೊಂಡೆ. ಹೀಗೆ ಎಲ್ಲಾ ಕಾರ್ಯಗಳು ಒಂದು ವ್ಯವಸ್ಥೆ ಅಡಿಯಲ್ಲಿ ನಡೆಯುತ್ತಿವೆ. ಅಷ್ಟೊಂದು ದೊಡ್ಡ ಸಮಾವೇಶದಲ್ಲಿ ಕಿಂಚಿತ್ತೂ ಅವ್ಯವಸ್ಥೆ ಕಾಣಲಿಲ್ಲ. ನನಗೆ ಜಲ್ಸವು ಎಷ್ಟೊಂದು ಹಿಡಿಸಿದೆ ಎಂದರೆ ನಾನು ಈಗ ಮುಂದಿನ ವರ್ಷವು ಬರಲು ಪ್ರಯತ್ನ ಮಾಡುವೆನು.

ಮಾಸ್ಕೋದಿಂದ ಬಂದ ಕುಟುಂಬದಲ್ಲಿ ಗಸ್ವಾನ್ ಸಾಹಿಬ್ ತನ್ನ ರಷ್ಯನ್ ಪುತ್ರರೊಂದಿಗೆ ಬಂದಿದ್ದರು. ಅವರ ಒಬ್ಬ ಮಗ ಫ್ರಾನ್ಸ್‌ನಿಂದ ಬಂದಿದ್ದ. ಗಸ್ಥಾನ್ ಸಾಹಿಬ್ ಸೀರಿಯಾದವರಾಗಿದ್ದರು. ಆದರೆ ಮಾಸ್ಕೋದಲ್ಲಿ ನೆಲೆಸಿದ್ದರು. ರಷ್ಯಾನ್ ಸಾಹಿಬ್ 2010 ರಲ್ಲಿ ತನ್ನ ಎರಡನೇ ರಷ್ಯನ್ ಪತ್ನಿ ಮತ್ತು ಮಕ್ಕಳ ಸಮೇತ ಬೈಅತ್ ಮಾಡುವ ಭಾಗ್ಯ ಪಡೆದಿದ್ದರು. ರಷ್ಯನ್ ಸಾಹಿಬ್ ಈ ವರ್ಷ ಮೊದಲ ಭಾರಿಗೆ ಜರ್ಮನಿ ಜಲ್ಸದಲ್ಲಿ ಭಾಗವಹಿಸಿದ್ದರು. ಜಲ್ಸ ಸಾಲಾನ ಯು.ಕೆ ಯಲ್ಲಿ ಎರಡು ಸಲ ಭಾಗವಹಿಸಿದ್ದರು. ಅವರು ಜಲ್ಸ ಸಾಲಾನದಿಂದ ತುಂಬ ಪ್ರಭಾವಿತರಾದರು ಮತ್ತು ಎಲ್ಲ ಕಾರ್ಯಕ್ರಮಗಳನ್ನು ನೆಚ್ಚಿಕೊಂಡರು. ವಿಶೇಷವಾಗಿ ಹುಝೂರರ ಭಾಷಣಗಳಿಂದ ತುಂಬ ಪ್ರಭಾವಿತರಾದರು. ಹುಝೂರರ ಸಂಬಂಧ ರಷ್ಯನ್ ಸಾಹಿಬ್ 2010 ರಲ್ಲಿ ತನ್ನ ಎರಡನೇ ರಷ್ಯನ್ ಪತ್ನಿ ಮತ್ತು ಮಕ್ಕಳ ಸಮೇತ ಬೈಅತ್ ಮಾಡುವ ಭಾಗ್ಯ ಪಡೆದಿದ್ದರು. ರಷ್ಯನ್ ಸಾಹೇಬ್ ಈ ವರ್ಷ ಮೊದಲ ಬಾರಿಗೆ ಜರ್ಮನಿ ಜಲ್ಸದಲ್ಲಿ ಭಾಗವಹಿಸಿದ್ದರು. ಜಲ್ಸ ಸಾಲಾನ ಯು.ಕೆಯಲ್ಲಿ ಎರಡು ಸಲ ಭಾಗವಹಿಸಿದ್ದರು. ಅವರು ಜಲ್ಸ ಸಾಲಾನದಿಂದ ತುಂಬಾ ಪ್ರಭಾವಿತರಾದರು ಮತ್ತು ಎಲ್ಲ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡರು. ವಿಶೇಷವಾಗಿ ಹುಝೂರರ ಭಾಷಣಗಳಿಂದ ತುಂಬ ಪ್ರಭಾವಿತರಾದರು. ರಷ್ಯನ್ ಸಾಹಿಬರಿಗೆ ಹುಝೂರರ ಬಗ್ಗೆ ಇದ್ದ ಪ್ರೀತಿಯು ಅವರ್ಣನಿಯವಾಗಿತ್ತು. ಭೇಟಿಯ ಸಂದರ್ಭದಲ್ಲಿ ಪದೇ ಪದೇ ಹುಝೂರರ ಪವಿತ್ರ ಹಸ್ತವನ್ನು ಚುಂಬಿಸುತ್ತಿದ್ದರು.

ಈ ವರ್ಷ ಜಲ್ಸ ಸಾಲಾನದಲ್ಲಿ ಅವರ ಮೊದಲ ಪತ್ನಿಯ ಒಬ್ಬ ಮಗ ಸಹ ಬಂದಿದ್ದನು. ಅವನು ಹಾಲೆಂಡಿನಲ್ಲಿ ಶಿಕ್ಷಣ ಪಡೆಯುತ್ತಿದ್ದಾನೆ. ಅವನು ಅಲ್ಲಾಹನ ಅನುಗ್ರಹದಿಂದ ತನ್ನ ಸ್ವಪ್ನದ ಪ್ರಕಾರ ಬೈಅತ್ ಮಾಡುವ ಭಾಗ್ಯ ಪಡೆದಿದ್ದನು.

ಸ್ವೀಡನ್‌ನಿಂದ ಓರ್ವ ರಷ್ಯನ್ ಮಿತ್ರ ಐತೋರೆ ಸಾಹಿಬ್ ಸಹ ತನ್ನ ಕುಟುಂಬ ಜೊತೆಯಲ್ಲಿ ಈ ಜಲ್ಸದಲ್ಲಿ ಭಾಗವಹಿಸಿದ್ದರು. ಆ ಕುಟುಂಬವು 2013 ರಲ್ಲಿ ಅಹ್ಮದಿಯತ್ ಸ್ವೀಕರಿಸಿತ್ತು. ಆದರೆ ಇಲ್ಲಿಯವರೆಗೆ ಹುಝೂರರೊಂದಿಗೆ ಭೇಟಿಯಾಗುವ ಭಾಗ್ಯ ಲಭಿಸಿರಲಿಲ್ಲ. ಅವರಿಗೆ ಹುಝೂರರ ಕಾರ್ಯಬಾಹುಳ್ಯದ ಜ್ಞಾನವಿತ್ತು. ಆದ್ದರಿಂದ ಹೇಳುತ್ತಿದ್ದರು. ಹುಜೂರರನ್ನು ಭೇಟಿಯಾಗದಿದ್ದರೂ ಚಿಂತೆಯಿಲ್ಲ. ಅವರಿಗೆ ಬಹಳಷ್ಟು ಕೆಲಸಗಳಿರುತ್ತವೆ. ನಾವು ಅವರನ್ನು ನಮಾಝಿಗೆ ಹಾಗೂ ಜಲ್ಸಕ್ಕೆ ಬರುವಾಗ, ಹೋಗುವಾಗ ನೋಡಿಕೊಳ್ಳೋಣ.

ಆದರೆ ಜಲ್ಸ ಮಧ್ಯದಲ್ಲಿಯೇ ಅವರ ಭೇಟಿ ಹುಝೂರರೊಂದಿಗೆ ಆಯಿತು. ಭೇಟಿ ಮುಗಿಸಿ ಹೊರಬಂದ ನಂತರ ತುಂಬ ಭಾವುಕರಾಗಿ ಹೇಳತೊಡಗಿದರು. ಇಂದಿನ ದಿನ ನನ್ನ ಜೀವನದ ಅತ್ಯಂತ ಅದೃಷ್ಟದ ದಿನವಾಗಿದೆ. ಏಕೆಂದರೆ ಇಂದು ನಾವು ಹುಝೂರರನ್ನು ನೋಡಿದೆವು, ಹಸ್ತಲಾಘವ ಮಾಡಿದೆವು ಮತ್ತು ಭಾವಚಿತ್ರ ತೆಗೆಸಿಕೊಂಡಿದ್ದೇವೆ.

ಸ್ವೀಡನ್ನಿನ ಮುಬಲ್ಲಿಗ್ ಸಾಹೇಬ್ ಹೇಳಿದರು. ನಾನು ಅವರಿಗೆ ಸಂಜೆ ಊಟ ಮಾಡಲು ಸಭಾಂಗಣದತ್ತ ಕರೆದುಕೊಂಡು ಹೋಗುತ್ತಿದ್ದೆ. ಅವರು ಬಹುವೇಗದಿಂದ ಮುಂದೆ ಹೋಗುತ್ತಿದ್ದರು. ನಾನು ಹಿಂದಿನಿಂದ ಧ್ವನಿ ಏರಿಸಿದೆ. ನನ್ನ ಜೊತೆ ನಡೆಯಿರಿ. ನೀವು ಬಹುವೇಗವಾಗಿ ಹೋಗುತ್ತಿದ್ದೀರಲ್ಲ. ಆಗ ಅವರು ಹೇಳಿದರು. ಇಂದು ನನ್ನಲ್ಲಿ ಒಂದು ಹೊಸ ಚೈತನ್ಯ ಬಂದಿದೆ. ನನಗೆ ಇಂದು ದ್ವಿತೀಯ ಜನ್ಮ ಪಡೆದಂತೆ ಭಾಸವಾಗುತ್ತಿದೆ.

ಊಟವಾದ ನಂತರ ನಾನು ಹೇಳಿದೆ. ನಮಾಝುಗಳನ್ನು ಸಹ ಹುಝೂರರ ನೇತೃತ್ವದಲ್ಲಿ ನಿರ್ವಹಿಸಿದೆವು. ಈಗ ರಾತ್ರಿಯೂ ಹೆಚ್ಚು ಆಗಿದೆ. ನೀವು ದಣಿದಿರಬೇಕು. ಈಗ ಹೋಟೆಲ್‌ಗೆ ಹೋಗೋಣ ಅಲ್ಲವೇ? ಆಗ ಹೇಳಿದರು. ಚಹ ಕುಡಿದು ಹೋಗೋಣ. ನಾನು ಹೇಳಿದೆ. ಆಯಿತು. ಚಹ ಕುಡಿಯೋಣ. ಆದರೆ ಚಹ ಹೋಟೆಲ್‌ಲ್ಲಿಯೂ ಕುಡಿಯಬಹುದಾಗಿತ್ತಲ್ಲ. ಅಲ್ಲಿಯೂ ವ್ಯವಸ್ಥೆಯಿದೆ. ಆಗ ಉತ್ತರ ನೀಡಿದರು. ಜಲ್ಸದ ಚಹದಲ್ಲಿರುವಂತಹ ರುಚಿ ಎಲ್ಲೂ ಸಿಗುವುದಿಲ್ಲ. ಮತ್ತು ಅತ್ಯಂತ ವಿನಮ್ರತೆಯಿಂದ ಹೇಳಿದರು. ನಾನು ಹಾಗೆ ಸುಮ್ಮನೆ ಈ ಮಾತು ಹೇಳುತ್ತಿಲ್ಲ. ಬದಲು ನನಗೆ ವಿಶ್ವಾಸವಿದೆ. ಹುಝೂರರ ಹೆಜ್ಜೆಗಳು ಯಾವ ಸ್ಥಳದಲ್ಲಿ ಬೀಳುತ್ತದೆಯೋ ಅಲ್ಲಿ ನೀರು ಸಹ ಅನುಗ್ರಹಿತವಾಗಿರುತ್ತದೆ. ಆದುದರಿಂದ ಇಲ್ಲಿಯ ನೀರಿನಲ್ಲಿ ಎಷ್ಟೊಂದು ಅನುಗ್ರಹ ಸೇರಿಕೊಂಡಿದೆ ಎಂದರೆ ಇಲ್ಲಿಯ ಹಾಗೆ ರುಚಿ ಎಲ್ಲೂ ದೊರೆಯುವುದಿಲ್ಲ.

ಸ್ವೀಡನ್ನಿನ ಮುಬಲ್ಲಿಗ್‌ಗಳು ಹೇಳುತ್ತಾರೆ. ಜಲ್ಸದ ಅಂತಿಮ ದಿನದಂದು ನಾವು ಮರಳಿ ನಮ್ಮ ವಾಹನದತ್ತ ಹೋಗುತ್ತಿದ್ದಾಗ ಜಲ್ಸ ಸ್ಥಳದ ಹೊರಗೆ ಜನಸಂದಣಿ ನೆರೆದಿತ್ತು. ಅವರ ಪತ್ನಿ ನನ್ನೊಂದಿಗೆ ಕೇಳಿದರು. ಅಷ್ಟೊಂದು ಜನ ಏಕೆ ಸೇರಿದ್ದಾರೆ. ಆಗ ನಾನು ಹೇಳಿದೆ. ಹುಝೂರ್ ಈಗ ಇಲ್ಲಿಂದ ತೆರಳುವವರಿದ್ದಾರೆ. ಅದಕ್ಕಾಗಿ ಅವರ ದರ್ಶನ ನಿಮಿತ್ತ ನಿಂತುಕೊಂಡಿದ್ದಾರೆ. ಈ ಮಾತು ಕೇಳುತ್ತಿದ್ದಂತೆಯೇ ಮಗ ಮತ್ತು ಮಗಳ ಎಲ್ಲ ಸಾಮಾನು ಸ್ವಯಂ ತಾಯಿಯೇ ಎತ್ತಿಕೊಂಡು ಹೇಳಿದರು. ಓಡಿರಿ. ನೀವು ಆ ಜನರೊಡನೆ ಹೋಗಿ ನಿಲ್ಲಿರಿ ಮತ್ತು ಹುಝೂರರ ದರ್ಶನ ಪಡೆಯಿರಿ. ಮಕ್ಕಳ ವಯಸ್ಸು 11, 12 ವರ್ಷಗಳದ್ದಾಗಿತ್ತು. ಅವರಿಗೆ ಹೇಳಿದರು. ಬೇಗ ಹೋಗಿರಿ. ಏಕೆಂದರೆ ಅವರ ದರ್ಶನಕ್ಕಾಗಿ ಕೆಲವು ಸೆಕೆಂಡುಗಳು ಮಾತ್ರ ದೊರೆಯುವುದು. ಮಕ್ಕಳು ವೇಗದಿಂದ ಹೋಗುತ್ತಿರುವಾಗಲೂ ಹಿಂದಿನಂದ ಗಟ್ಟಿ ಧ್ವನಿಯಲ್ಲಿ ಹೇಳುತ್ತಿದ್ದರು ಓಡಿಕೊಂಡು ಹೋಗಿರಿ. ನಂತರ ಅವರು ಸ್ವಯಂ ಅಲ್ಲಿ ಬಂದರು ಮತ್ತು ಮಕ್ಕಳ ಜೊತೆಯಲ್ಲಿ ಕಾದು ನಿಂತುಕೊಂಡರು. ಮಕ್ಕಳು ಆಚೆ ಈಚೆ ನೋಡುತ್ತಿದ್ದರೆ ಅವರ ಮುಖ ಹಿಡಿದು ಹುಝೂರ್ ಬರುವ ಬಾಗಿಲಿನತ್ತ ತಿರುಗಿಸಿ ಹೇಳುತ್ತಿದ್ದರು. ಹುಝೂರ್ ಯಾವ ಕ್ಷಣದಲ್ಲೂ ಆಗಮಿಸಬಹುದಾಗಿದೆ.

ಮುಬಲ್ಲಿಗರು ಹೇಳುತ್ತಾರೆ. ಇನ್ನೊಂದು ಘಟನೆ ವಿವರಿಸಲು ಯೋಗ್ಯವಾಗಿದೆ. ಅದೇನೆಂದರೆ ತೋರೆ ಸಾಹಿಬರ ಬಲಗಾಲಿನಲ್ಲಿ (nurves) ಸಮಸ್ಯೆಯಿತ್ತು. ಆದುದರಿಂದ ಸ್ವೀಡನ್ನಿನಿಂದ ಜರ್ಮನಿಗೆ ಬರುತ್ತಿರುವಾಗ ಪ್ರತಿ ಒಂದು ಗಂಟೆಗೆ ಹೇಳುತ್ತಿದ್ದರು. ವಾಹನ ನಿಲ್ಲಿಸಿ ನನ್ನ ಕಾಲಿನಲ್ಲಿ ಬಹಳ ಬೇನೆಯಿದೆ. ಅದೇ ರೀತಿ ಪದೇ ಪದೇ ನಮಗೆ ವಾಹನ ನಿಲ್ಲಿಸಬೇಕಾಗಿತ್ತು. ಮತ್ತು ಅವರು ಸ್ವಲ್ಪ ನಡೆದಾಡಿದ ನಂತರ ಮತ್ತೆ ಪ್ರಯಾಣ ಬೆಳೆಸಬೇಕಾಗುತಿತ್ತು. ಆದರೆ ಜಲ್ಸದಿಂದ ನಿರ್ಗಮಿಸುತ್ತಿರುವಾಗ ನಿರಂತರ 17 ತಾಸು ಪ್ರಯಾಣದಲ್ಲಿ ಅವರು ಒಮ್ಮೆಯೂ ನನಗೆ ವಾಹನ ನಿಲ್ಲಿಸಲು ಹೇಳಲಿಲ್ಲ. ಮತ್ತು ತುಂಬ ಸಂತೋಷಭರಿತರಾಗಿದ್ದರು. ಮನೆಯ ಹತ್ತಿರ ತಲುಪಿದಾಗ ನಾನು ಅವರಿಗೆ ಕೇಳಿದೆ. ಪ್ರಯಾಣದಿಂದ ಹಿಂದುರುಗಿ ಬರುವಾಗ ನೀವು ಒಮ್ಮೆಯಾದರೂ ಕಾಲಿನ ನೋವಿನ ಬಗ್ಗೆ ಚಕಾರ ಎತ್ತಲಿಲ್ಲ. ಏನು ಕಾರಣ? ತಕ್ಷಣದಿಂದ ಹಿಂದೆ ಕುಳಿತಿದ್ದ ಅವರ ಪತ್ನಿಯ ಕಡೆ ಅಚ್ಚರಿಯಿಂದ ನೋಡುತ್ತಾ ಹೇಳಿದರು. ನಿಜವಾಗಿಯೂ ನನ್ನ ಕಾಲಿನಲ್ಲಿ ಸಮಸ್ಯೆ ಇತ್ತೆಂಬುದನ್ನು ಸಹ ನನಗೆ ನೆನಪಾಗಲಿಲ್ಲ. ಹೇಳಿದರು ನಿಶ್ಚಯವಾಗಿಯೂ ಹುಝೂರರ ಅನುಗ್ರಹದಿಂದಾಗಿ ಕೇವಲ ನನಗೆ ನೋವು ಆಗಲಿಲ್ಲ ಅಷ್ಟೇ ಅಲ್ಲದೆ ನೋವಿತ್ತು ಎಂಬುದು ಸಹ ನೆನಪಿರಲಿಲ್ಲ.

ಭೇಟಿಯ ಅಂತಿಮ ಕ್ಷಣಗಳಲ್ಲಿ ಎಲ್ಲ ಸದಸ್ಯರು ತನ್ನ ಪ್ರೀತಿಯ ನೇತಾರರೊಡನೆ ಭಾವಚಿತ್ರ ತೆಗೆಯಿಸಿಕೊಳ್ಳುವ ಭಾಗ್ಯ ಪಡೆದರು. ಹುಝೂರ್ ತಂಡದ ಎಲ್ಲ ಸದಸ್ಯರಿಗೆ ಲೇಖನಿ ನೀಡಿದರು ಮತ್ತು ಪ್ರೀತಿಪೂರ್ವಕವಾಗಿ ಎಲ್ಲ ಸಣ್ಣ ವಯಸ್ಸಿನ ಮಕ್ಕಳಿಗೆ ಚಾಕ್ಲೇಟ್ ನೀಡಿದರು.

**(ಮುಂದುವರಿಯುವುದು)**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:

**NATIONAL TOLL FREE**

**1800–103–2131**

**ವಿಶೇಶ ಸೂಚನೆ**

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.

ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 29 April 2021, Issue No. 17

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)

**(ಬದರ್ ಸಂಚಿಕೆ 16ರ ವರದಿಯ ಉಳಿದ ಭಾಗ)**

### ಕಾರ್ಯಕರ್ತರ ವೀಕ್ಷಣೆ ಮತ್ತು ಜಲ್ಸ ಸಾಲಾನ ಜರ್ಮನಿ 2015 ವ್ಯವಸ್ಥೆ ಪರಿಶೀಲನೆ

ಇಂದು ಕಾರ್ಯಕ್ರಮದನ್ವಯ 160 ಕಿ.ಮೀ ದೂರದಲ್ಲಿರುವ ಜಲ್ಸ ಸ್ಥಳ KARLSRUHE ಗೆ ಪ್ರಯಾಣಿಸಬೇಕಾಗಿತ್ತು. 6.20 ಗಂಟೆಗೆ ಹುಝೂರ್ ಆಗಮಿಸಿದರು. ಜಲ್ಸ ಆಯೋಜನೆಗೊಳ್ಳುವ ಈ ಸ್ಥಳ K. MESSE ಎನ್ನಲಾಗುತ್ತದೆ. ಅದರ ಒಟ್ಟು ವಿಸ್ತೀರ್ಣ ಒಂದು ಲಕ್ಷ 50 ಸಾವಿರ ಚದರ ಮೀಟರ್ ಆಗಿದೆ. ಅದರ covered ಭಾಗ 70 ಸಾವಿರ ಚ. ಮೀಟರ್ ಆಗಿದೆ. ಅದರಲ್ಲಿ 4 ದೊಡ್ಡ ಸಭಾಂಗಣಗಳಿವೆ. ಈ ನಾಲ್ಕು ಸಭಾಂಗಣಗಳು A.C. (ಹವಾನಿಯಂತ್ರಿತ) ಆಗಿವೆ. ಪ್ರತಿ ಸಭಾಂಗಣದ ವಿಸ್ತೀರ್ಣ 1250 ಚ. ಮೀಟರ್ ಮತ್ತು ಪ್ರತಿ ಸಭಾಂಗಣದಲ್ಲಿ ಹನ್ನೆರಡು ಸಾವಿರ ಆಸನಗಳ ಮೇಲೆ ಜನರು ಕುಳಿತುಕೊಳ್ಳಬಹುದಾಗಿದೆ. ಪ್ರತಿ ಸಭಾಂಗಣದಲ್ಲಿ ಹದಿನೆಂಟು ಸಾವಿರ ಜನರು ನಮಾಝ್ ನಿರ್ವಹಿಸಬಹುದಾಗಿದೆ. ಒಟ್ಟಿನಲ್ಲಿ ಈ ನಾಲ್ಕು ಸಭಾಂಗಣಗಳಿಗೆ 128 ಶೌಚಾಲಯಗಳಿವೆ. ಇಲ್ಲಿ ಹತ್ತು ಸಾವಿರ ವಾಹನಗಳನ್ನು parking ಮಾಡುವ ಸ್ಥಳವಿದೆ.

ಸುಮಾರು ಒಂದು ಗಂಟೆ 40 ನಿಮಿದ ಪ್ರಯಾಣದ ನಂತರ 5 ಗಂಟೆಗೆ ಹುಜೂರ್ ಜಲ್ಸ ಸ್ಥಳ ತಲುಪಿದರು. ಮು. ಮುಹಮ್ಮದ್ ಇಲ್ಯಾಸ್ ಸಾಹಿಬ್ ಮಜೂಕ್ ಅಫಸರ್ ಜಲ್ಸ ಸಾಲಾನ ಜರ್ಮನಿ ಮತ್ತು ಮುಕರ್ರಮ್ ಹಾಫಿಝ್ ಮುಝಫ್ಫರ್ ಅಹ್ಮದ್ ಇಮ್ರಾನ್ ಹಸ್ತಲಾಘವ ಮಾಡಿದರು. ಹುಝೂರ್ (ಅಬಿಅ) ಒಳಗೆ ಪ್ರವೇಶ ಮಾಡಿದಾಗ ಕಾರ್ಯಕರ್ತರು ಪೂರ್ಣ ಉತ್ಸಾಹದಿಂದ ಘೋಷಣೆ ಹಾಕಿದರು.

ಅನಂತರ ಜಲ್ಸ ಸಾಲಾನ ವ್ಯವಸ್ಥೆಗಳ ಪರಿಶೀಲನೆ ಪ್ರಾರಂಭವಯಿತು. ನಾಯಿಬ್ ಅಫಸರ್ ಜಲ್ಸ ಸಾಲಾನ ಒಂದು ಸಾಲಿನಲ್ಲಿ ನಿಂತುಕೊಂಡಿದ್ದರು. ಹುಝೂರ್ ಪ್ರೀತಿಯಿಂದ ಅವರ ಬಳಿಯಿಂದ ಹೋದರು ಮತ್ತು ಕೈ ಮೇಲಕ್ಕೆತ್ತಿ ಅಸ್‌ಸಲಾಮು ಅಲೈಕುಂ ಹೇಳಿದರು. ಪ್ರಾರಂಭದಲ್ಲಿ ಖಿದ್ಮತ್ ಖಲ್ಕ್ ವಿಭಾಗ, ಕಾರ್ಡ್ ಚೆಕಿಂಗ್ ಸಿಸ್ಟಂ ಮತ್ತು ಅಫ್‌ಸರ್ ಸಾಹಿಬ್ ಜಲ್ಸ ಸಾಲಾನ ಮತ್ತು ಜರ್ಮನಿಯಿಂದ ಹೊರಗಿನ ಅತಿಥಿಗಳ ವಸತಿನಿಲಯದ ಕಚೇರಿಗಳಿದ್ದವು. ಹುಝೂರ್ ಈ ಕಚೇರಿಗಳ ಬಗ್ಗೆ ಮತ್ತು ವಿಭಾಗಗಳ ಬಗ್ಗೆ ವಿಚಾರಿಸಿದರು ಮತ್ತು ಅವರ ಬಳಿಯಿಂದ ಹೋಗುತ್ತ MTA ವಿಭಾಗಕ್ಕೆ ಆಗಮಿಸಿದರು ಮತ್ತು ಇಲ್ಲಿ MTA ಯ ವಿವಿಧ ವಿಭಾಗಗಳನ್ನು ವೀಕ್ಷಿಸಿದರು.

MTA ಜರ್ಮನಿ ಈ ವರ್ಷವು drone video Camera ಬಳಸಿದ್ದರು. ಈ ಕ್ಯಾಮರಾ ರಿಮೋಟ್ ಕಂಟ್ರೋಲ್ ಮೂಲಕ ವಾಯುವಿನಲ್ಲಿ ಎತ್ತರಕ್ಕೆ ಏರುತ್ತದೆ. ಆ ಮೂಲಕ ಜಲ್ಸದ ಹೊರಗಿನ ದೃಶ್ಯಗಳನ್ನು ತೋರಿಸಲಾಗುತ್ತದೆ.

ವ್ಯವಸ್ಥಾಪಕರು ಹುಝೂರರ ಉಪಸ್ಥಿತಿಯಲ್ಲಿ ಆ ಕ್ಯಾಮರವನ್ನು ಗಾಲಿಯಲ್ಲಿ ಎತ್ತರಕ್ಕೇರಿಸಿದರು. ಅದು ಬಹು ಎತ್ತರದವರೆಗೆ ಹೋಗುತಿತ್ತು. ಹುಝೂರ್ MTA ಪ್ರಸಾರ ಕಾರ್ಯಕ್ರಮಗಳ ಬಗ್ಗೆ ಇತರ ಸಂಬಂಧಿತ ಕಾರ್ಯಗಳ ಬಗ್ಗೆ ಕೇಳಿದರು ಮತ್ತು ನಿರ್ದೇಶನಗಳನ್ನು ನೀಡಿದರು.

ಅನಂತರ ಹುಝೂರ್ ಗ್ರಂಥಗಳ ಸ್ಟೋರ್ ಮತ್ತು ಸ್ಟಾಲ್‌ಗಳನ್ನು ವೀಕ್ಷಿಸಿದರು. ಇಲ್ಲಿ ಸುಸಜ್ಜಿತ ರೀತಿಯಲ್ಲಿ ಮೇಜುಗಳ ಮೇಲೆ ಮತ್ತು ವಿವಿಧ stands ಗಳ ಮೇಲೆ ಗ್ರಂಥಗಳನ್ನು ಇಡಲಾಗಿತ್ತು. ಅಲ್ಲಿಂದ ಸುಲಭ ರೀತಿಯಲ್ಲಿ ಗ್ರಾಹಕರು ಪುಸ್ತಕಗಳನ್ನು ಪಡೆಯಬಹುದಾಗಿತ್ತು.

ವೀಕ್ಷಣೆಯ ನಡುವೆ Humanity First ವಿಭಾಗದ ಕಚೇರಿಗೆ ಹುಝೂರ್ ಆಗಮಿಸಿದರು. ಅಲ್ಲಿರುವ ವಿವಿಧ ವಸ್ತುಗಳನ್ನು ಮತ್ತು ಅದರ ಕಾರ್ಯಕ್ರಮಗಳ ಕುರಿತು ಚೇರ್‌ಮನ್ H.F. ಜರ್ಮನಿಯರೊಡನೆ ವಿಚಾರಿಸಿ ಅಲ್ಲಿಂದ ಕೆಲವು ವಸ್ತುಗಳನ್ನು ಖರೀದಿಸಿ ನಿರ್ದೇಶನಗಳನ್ನು ನೀಡಿದರು.

ನೂರು ಮಸೀದಿಗಳ ಆಸ್ತಿ ವಿಭಾಗವನ್ನು ಸಹ ಹುಝೂರ್ ವೀಕ್ಷಿಸಿದರು. ಇಲ್ಲಿ ಜರ್ಮನಿಯಲ್ಲಿ ನಿರ್ಮಾಣಗೊಳ್ಳುವ ವಿಭಿನ್ನ ಮಸೀದಿಗಳ ನಮೂನೆ ಇಡಲಾಗಿದೆ. ಅಲ್ಲಿಯೇ ಮಸೀದಿಯ ನಿರ್ಮಾಣದ ಉಪಯೋಗಿಸಲ್ಪಡುವ ಸಾಮಾಗ್ರಿಗಳ ನಮೂನೆಯೂ ಇಡಲಾಗಿತ್ತು.

ಅದೇ ಕ್ಷೇತ್ರದಲ್ಲಿ ವ್ಯವಸಾಯ ವಿಭಾಗ, ವಕ್ಫ್ ನೌ. ಉಮರೇ ಆಮಾ ಹಾಗೂ ರಿಶ್ತೆನಾಥ ವಿಭಾಗಗಳ ಕಚೇರಿಯು ಸ್ಥಾಪಿತವಾಗಿದ್ದವು.

ಅನಂತರ ಹುಝೂರ್ store ಗೆ ಆಗಮಿಸಿದರು. ಅಲ್ಲಿ ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಲಾಗಿತ್ತು. ಇಲ್ಲಿಂದ ಅಗತ್ಯಗನುಸಾರವಾಗಿ ವಸ್ತುಗಳನ್ನು ವಿವಿಧ ವಿಭಾಗಗಳಿಗೆ ಸರಬರಾಜು ಮಾಡಲಾಗುತ್ತಿತ್ತು.

ಅನಂತರ ಹುಝೂರ್ ಅತಿಥಿಗಳಿಗೆ ಊಟ ಮಾಡಿಸುವ ವ್ಯವಸ್ಥೆಯ ಸಭಾಂಗಣಕ್ಕೆ ತೆರಳಿದರು. ಈ ವ್ಯವಸ್ಥೆ ಅಡಿಯಲ್ಲಿ ಏಕಕಾಲದಲ್ಲಿ ಸಾವಿರಾರು ಜನರು ಊಟ ಮಾಡಬಹುದಾಗಿತ್ತು. ಮೇಜಿನ ಮೇಲೆಯೇ ನೀರಿನ ಬೋಟಲ್ ಮತ್ತು ಲೋಟ ಇತ್ಯಾದಿಗಳನ್ನು ಇಡಲಾಗಿತ್ತು. ಏಕೆಂದರೆ ಊಟದ ಮಧ್ಯ ನೀರು ಪಡೆಯಲು ಇತರ ಭಾಗಕ್ಕೆ ಹೋಗುವಂತಾಗಬಾರದು ಎಂದು.

ರಾತ್ರಿಯ ಊಟ ತಯಾರಾಗಿ ಈ ಸಭಾಂಗಣಕ್ಕೆ ಬಂದಾಗಿತ್ತು. ಹುಝೂರ್ ಪ್ರೀತಿಪೂರ್ವಕವಾಗಿ ಊಟದ ಮಟ್ಟ ಪರಿಶೀಲಿಸಿದರು. ಆಲುಗಡ್ಡೆ, ಮಾಂಸ ಅಡುಗೆ ಮಾಡಲಾಗಿತ್ತು ಮತ್ತು ಜೊತೆಯಲ್ಲಿ ನಾನ್ (ರೊಟ್ಟಿ) ಇಡಲಾಗಿತ್ತು. ಅದು ಅತಿಥಿಗಳಿಗೆ ಕೊಡಬೇಕಾಗಿತ್ತು. ಹುಝೂರ್ ಆಲೂಗಡ್ಡೆ ಮಾಂಸ ಒಂದು ಪ್ಲೇಟಿನಲ್ಲಿ ಹಾಕಿ ಅದು ಸರಿಯಾಗಿ ಬೆಂದಿದೆಯೋ ಇಲ್ಲವೆ ಎಂದು ಪರೀಕ್ಷಿಸಿ ಹುಝೂರ್ ವ್ಯವಸ್ಥಾಪಕರಿಗೆ ಸಲಹೆಗಳನ್ನು ನೀಡಿದರು.

ಅನಂತರ ಹುಝೂರ್ ಲಂಗರ್ ಖಾನ (ಊಟ ತಯಾರಿಸುವ ಸ್ಥಳ) ಸಹ ವೀಕ್ಷಿಸಿದರು. ಪ್ರಪ್ರಥಮವಾಗಿ ಹುಝೂರ್ ಮಾಂಸ ತುಂಡರಿಸುವುದು, ಸರಬರಾಜು ಮತ್ತು ಮಾಂಸವನ್ನು ಸಂಗ್ರಹಿಸಿಡಲಾಗುವ ಸ್ಥಳವನ್ನು ನೋಡಿದರು. ಒಂದು ದೊಡ್ಡ Freezer ಇದೆ. ಅಲ್ಲಿ ಏಕಕಾಲಕ್ಕೆ ಒಂದು ನೂರಕ್ಕಿಂತ ಹೆಚ್ಚು ಕುರಿಗಳ ಮಾಂಸವನ್ನು. ಒಂದು ವಿಶೇಷವಾದ ಉಷ್ಣಾಂಶದ ಮೇಲೆ Freez ಮಾಡಲಾಗುತ್ತದೆ. ಲಂಗರ್ ಖಾನ ವೀಕ್ಷಿಸುವ ಮಧ್ಯ ಹುಝೂರ್ ಅಡುಗೆ ಮಾಡುವ ವ್ಯವಸ್ಥೆಯನ್ನು ವೀಕ್ಷಿಸಿದರು ಮತ್ತು ಊಟದ ಗುಣ ನೋಡಿದರು. ಹುಝೂರ್ ಆಲುಗಡ್ಡೆ, ಮಾಂಸ ಮತ್ತು ಬೇಳೆ ಎರಡರಿಂದಲೂ ಒಂದೊಂದು ಮತ್ತು ಸೇವಿಸಿ ನೋಡಿದರು. ಊಟದ ಕುರಿತು ವ್ಯವಸ್ಥಾಪಕರೊಂದಿಗೆ ವಿಚಾರಿಸಿದರು.

ಲಂಗರ್ ಖಾನಾದ ಕಾರ್ಯಕರ್ತರು ಒಂದು ಬೃಹತ್ ರೂಪದ ಕೇಕ್ ಮಾಡಿಸಿದ್ದರು. ಹುಝೂರ್ ಆತ್ಮೀಯವಾಗಿ ಆ ಖುದ್ದಾಮರು ಕೇಕ್‌ಗಳನ್ನು ಕತ್ತರಿಸಿ ಕೊಟ್ಟರು. ಲಂಗರ್ ಖಾನದ ಹೊರಗೆ "ದೇಗ್ ವಾಷಿಂಗ್ ಮಿಶಿನ್ ಹಾಕಲಾಗಿತ್ತು. ಈ ಮಿಷಿನ್ ಹಿಂದಿನ 8 ವರ್ಷಗಳಿಂದ ಹಾಕಲಾಗುತ್ತಿದೆ. ಪ್ರತಿ ವರ್ಷ ಅದರಲ್ಲಿ ಸುಧಾರಣೆ ಆಗುತ್ತದೆ. ಪ್ರಾರಂಭದ ಸ್ಥಿತಿಯಲ್ಲಿ ಮೆಷಿನ್ ಮೇಲೆ ದೋಸೆ, ಇಡ್ಲಿ ನಂತರ ಒಂದು ಬಟನ್ ಒತ್ತಬೇಕಾಗಿತ್ತು. ಆಗ ದೇಶ್ ಸ್ವಚ್ಛಗೊಳ್ಳಲು ಪ್ರಾರಂಭವಾಗುತ್ತಿತ್ತು. ಆದರೆ ಈಗ ತನ್ನಿತಾನೇ ಕಾರ್ಯ ಪ್ರಾರಂಭವಾಗುವುದು. ಇಂತಹ ಒಂದು ಸೆನ್‌ಸರ್ ಸಿಸ್ಟಮ್ ಅಳವಡಿಸಲಾಗಿದೆ. ಅದರಿಂದ Automatic Funciton ಪ್ರಾರಂಭವಾಗುತ್ತದೆ. ಹಾಗೆಯೇ ಹಿಂದೆ ಒಂದು ಒಂದೇ ದೇಗ್ ಸ್ವಚ್ಛಗೊಳ್ಳುತ್ತಿತ್ತು. ಆದರೆ ಈಗ ಏಕಕಾಲದಲ್ಲಿ ಹಲವು ದೇಗಗಳು ಸ್ವಚ್ಛಗೊಳ್ಳುತ್ತವೆ.

ಲಂಗರ್ ಖಾನ್ ಮತ್ತು ದೇಗ್ ವಾಷಿಂಗ್ ಮೆಷಿನ್ ವೀಕ್ಷಿಸಿದರೆ ನಂತರ ಹುಜೂರ್ ಖಾಸಗಿ ಟೆಂಟ್‌ಗಳೆಡೆಗೆ ಆಗಮಿಸಿ ವ್ಯವಸ್ಥೆಯನ್ನು ವೀಕ್ಷಿಸಿದರು. ಹುಝೂರ್ ಟೆಂಟ್‌ಗಳ ಮಧ್ಯ ಭಾಗದಿಂದ ತೆರಳಿದರು. ವಿವಿಧ ಕುಟುಂಬಗಳು ತನ್ನ ಟೆಂಟ್‌ಗಳ ಬಳಿ ನಿಂತಿದ್ದರು. ಕೆಲವರು ಟೆಂಟ್ ಹಾಕುವವರಿದ್ದರು. ಎಲ್ಲರೂ ತಮ್ಮ ಕೈಗಳನ್ನು ಎತ್ತಿ ಹುಝೂರರಿಗೆ ಸಲಾಂ ಹೇಳೀದರು. ಹುಝೂರ್ ಪ್ರೀತಿಪೂರ್ವಕವಾಗಿ ಸಲಾಂಗಳಿಗೆ ಉತ್ತರವನ್ನು ನೀಡುತ್ತಾ ಕೆಲವರೊಡನೆ ಮಾತುಗಳನ್ನಾಡಿದರು. ವಿವಿಧ ಆಕಾರಗಳ ಟೆಂಟ್‌ಗಳಿದ್ದವು. ಕೆಲ ಟೆಂಟ್‌ಗಳು ಎಷ್ಟು ದೊಡ್ಡದಾಗಿದ್ದವು ಎಂದರೆ ಅದರಲ್ಲಿ ಹತ್ತರಿಂದ ಹದಿನೈದು ಜನರು ಬರಬಹುದಾಗಿತ್ತು.

ಹುಝೂರ್ ಒಂದು ಟೆಂಟ್‌ನ ಸಮೀಪಕ್ಕೆ ಹೋಗಿ ಅದರಲ್ಲಿ ಎಷ್ಟು ಜನರು ತಂಗಬಹುದೆಂದು ವೀಕ್ಷಿಸಿದರು.

ಖಾಸಗಿ ಟೆಂಟ್‌ಗಳ ಒಂದು ಭಾಗದಲ್ಲಿ CARVAN ಅವರಿಗೆ ವಿಶೇಷವಾಗಿ ವ್ಯವಸ್ಥೆ ಮಾಡಲಾಗಿತ್ತು. ಹುಝೂರ್ ಅಫ್ಸರ್ ಜಲ್ಸ ಸಾಲಾನ ಅವರಿಂದ ಈ ಕುರಿತು ಮತ್ತು ಅವರಿಗೆ ನೀಡಲಾದ ಸವಲತ್ತುಗಳ ಕುರಿತು ವರದಿ ಪಡೆದರು. ಆ Tent ಗಳ ಮತ್ತು CARVAN ನ ಅಕ್ಕಪಕ್ಕ Fan

*(ಪುಟ ಸಂಖ್ಯೆ 09 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.